ಶ್ರೀ ಕಾಗೋಡು ತಿಮ್ಮಪ್ಪ.—ಒಪ್ಪುತ್ತೇನೆ, ಅಲ್ಲಿ ಆಗಿರತಕ್ಕ ಚರ್ಚೆ ನಮ್ಮ ಮೇಲೆ ಪ್ರಭಾವ ಬೀರಬಹುದು ನಾವು ಏನು ತೀರ್ಮಾನ ತೆಗೆದುಕೊಳ್ಳುತ್ತೇವೆ ಆ ತೀರ್ಮಾನಕ್ಕೆ ಅಡ್ಡಿ ಬರಬಹುದು, ಪ್ರಭಾವ ಬೀರಬಹುದು. ಆದ್ದರಿಂದ ಅಲ್ಲಿ ಚರ್ಚೆ ಆಗುವುದು ಅನಾವಶ್ಯಕ. ಚೆನ್ನಬಸಪ್ಪನವರು ಕೊಟ್ಟಿರತಕ್ಕ ಭರವಸೆ ಏನು ಇದೆ ? ಅನು ತಮಗೂ ಕೂಡ ಮನಸ್ಸಿಗೆ ಬಂತು. ನಮ್ಮ ಹಕ್ಕುಭಾದ್ಯತ ರಕ್ಷಣೆ ಮಾಡಿಕೊಳ್ಳುವುದಕ್ಕೆ ನಾವು ಏನು ಮಾಡಬೇಕು. ಯಾರ ಮರೆ ಹೋಗಬೇಕು, ತಾವು ಇಲ್ಲಿ ಭರವಸೆ ಕೊಟ್ಟಮೇಲೆ ಸಂಬಂಧಪಟ್ಟ ಬೇಡಿಕೆಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ ನಾವು ಇಲ್ಲಿ ಕೂತಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್.—ಅಗ್ರಿಕಲ್ಚರ್ ಬಗ್ಗೆ ಮಾತ್ರ ಹೇಳುತ್ತೇನೆ. ಒಕ್ಕಲುತನ ಖಾತೆ ವಿಷಯ ಅಲ್ಲಿ ಮಾತನಾಡುವುದು ಬೇಡ ಎಂದು ಹೇಳುವುದಕ್ಕೆ ಈ ಸದನಕ್ಕೆ ಬರುವುದಿಲ್ಲ. ನಾನು ಇನ್ನೂ ರಿಪ್ಲೈ ಕೊಟ್ಟಿಲ್ಲ. ರಿಪ್ಲೈ ಕೊಡಬೇಕೆಂದು ಒತ್ತಾಯ ಮಾಡಿದ್ದರೂ ಕೊಡುತ್ತಾ ಇರಲಿಲ್ಲ. ಈ ಸದನದಲ್ಲಿ ಮೊದಲು ರಿಪ್ಲೈ ಕೊಡುತ್ತೇನೆ ಅನಂತರ ಅಲ್ಲಿ ಕೊಡುತ್ತೇನೆ. ಅಲ್ಲಿ ಮಂಡನೆ ಮಾಡುವಂತಹ ವೇಳೆಯಲ್ಲಿ ಅಲ್ಲಿ ಏನಾದರೂ ಅಗ್ರಿಕಲ್ಚರ್ ಮಿನಿಸ್ಟರ್ ತಪ್ಪು ಮಾಡಿದರೆ ಆ ತಪ್ಪನ್ನು ತಿದ್ದಲಿಕ್ಕೆ ತಾವು ಸರ್ವರೀತಿಯಲ್ಲಿ ಸಮರ್ಥರಾಗಿದ್ದೀರಿ. ಆ ರೀತಿ ಮಾಡಿದರೆ ಸ್ವಾಗತ ಮಾಡುತ್ತೇನೆ. ಅದನ್ನು ಬಿಟ್ಟುಕೊಟ್ಟು ಮಾನ್ಯ ಸದಸ್ಯರು ಏನಾದರೂ ಮಾತನಾಡುತ್ತಾ ಇದ್ದರೆ ನಿಮ್ಮನ್ನು ಕಟ್ಟಿ ಹಿಡಿಯಲಿಕ್ಕೆ ಆಗುತ್ತದೆಯೇ ?

ಶ್ರೀ ಕೋಣಂದೂರು ಲಿಂಗಪ್ಪ.—ಅಲ್ಲಿ ಮಂಡನೆ ಮಾಡಿದ್ದೇ ತಪ್ಪು ?

ಶ್ರೀ ಕೆ.ಎಚ್. ಪಾಟೀಲ್.—ಅಲ್ಲಿ ಮಂಡನೆ ಮಾಡುವುದು ತಪ್ಪು, ಗೊತ್ತಿದೆ ಮಂಡನೆ ಮಾಡಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ಸದನಕ್ಕೆ ಆ ಸದನದ ಮೇಲೆ ಸಂಪೂರ್ಣ ಅಧಿಕಾರ ಇದೆ. ನಾವು ನಿರ್ಣಯ ಮಾಡಿದರೆ ಆ ಸದನವನ್ನೇ ರದ್ದು ಮಾಡಲಿಕ್ಕೆ ಸಾಧ್ಯವಿದೆ.

ಅಧ್ಯಕ್ಷರು.—ಅಲ್ಲಿ ನಡೆಯುವ ವ್ಯವಹಾರಗಳ ಬಗ್ಗೆ ನಮಗೆ ಹಕ್ಕು ಇಲ್ಲ ಎಂದು ಹೇಳುವುದು ಅದು ಒಂದೇ ಹಕ್ಕು ಇರುವುದು.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಆ ಬೇಡಿಕೆಗಳನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕಿಂತ ಮೊದಲು ಆ ಮನೆಗೆ ಕಳುಹಿಸಿಕೊಟ್ಟಿದ್ದಾರೆ. ಇದೇ ವಿಷಯದ ಬಗ್ಗೆ ಕೇಳಿಕೊಂಡಿದ್ದೇನೆ.

ಅಧ್ಯಕ್ಷರು.—ಇದು ಯಾವ ರೀತಿಯಿಂದಲೂ ಪ್ರಿವಿಲೇಜ್ ಮೋಷನ್ ಆಗುವುದಿಲ್ಲ.

SRI S. BANGARAPPA.—Legal aspect and the constitutional matters are to be discussed here. ಆ ಹೌಸಿನ ಮುಂದೆ ಯಾವುದೇ ಪಾಲಿಸಿ ಮ್ಯಾಟರ್ ತರುವುದು ಕೂಡ ರಾಜ್ಯಾಂಗಕ್ಕೆ ವಿರುದ್ಧವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಈಗ ಉಳಿದಿರುವುದು ನನ್ನ ಇಲಾಖೆಗೆ ಸಂಬಂಧಪಟ್ಟ ವಿಷಯ, ಇಂಡಸ್ಟ್ರೀಸ್‌ಗೆ ಸಂಬಂಧಪಟ್ಟ ಬೇಡಿಕೆಗಳನ್ನು ಚರ್ಚೆ ಮಾಡಿ ಮುಗಿದು ಹೋಗಿದೆ.

BUDGET ESTIMATES FOR 1973-74

Demands for Grants

Demand Nos. 20, 38 and 51

SRI K. H. PATIL (Minister for Agriculture and Forests).—Madam, on the recommendation of the Governor, I beg to move :

"That a sum not exceeding Rs. 14,93,52,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 20 'Agriculture and Horticulture (excluding Fisheries),"

"That a sum not exceeding Rs. 10,50,97,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 38, 'Forest."

"That a sum not exceeding Rs. 22,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 51, 'Capital Outlay on Forests."

MADAM SPEAKER.— Motion moved :

"That a sum not exceeding Rs. 14,93,52,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 20, 'Agriculture and Horticulture (excluding Fisheries)'."

Demand Nos. 38 and 51 are also deemed to have been moved and all the Demands are before the House for discussion.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ). ಮಾನ್ಯ ಸಭಾಧ್ಯಕ್ಷಿಣಿಯವರೇ, ಈಗ ಒಕ್ಕಲುತನಖಾತೆ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ 14 ಕೋಟಿ ರೂಪಾಯಿಗಳ ಬೇಡಿಕೆ ಏನು ಇದೆ ಈ ಬೇಡಿಕೆಗಳಿಗೆ ಮಂಜೂರಾತಿ ಕೊಡುವುದಕ್ಕಿಂತ ಮುಂಚೆ ನಾನು ಇಷ್ಟು ಮಾತ್ರ ಹೇಳಲಿಕ್ಕೆ ಇಷ್ಟಪಡುತ್ತೇನೆ, ಒಕ್ಕಲುತನ ಖಾತೆ ಬಗ್ಗೆ ಸಂಬಂಧಪಟ್ಟಂತೆ ಇಟ್ಟಿರತಕ್ಕ ಹಣ ಸಾಲದು ಎಂದು ಹೇಳಬಹುದು. ಕಾರಣ ಇಷ್ಟೆ. ಕಳೆದ 25 ವರ್ಷದಿಂದಲೂ ಕೂಡ ಈ ಒಕ್ಕಲುತನದ ಖಾತೆ ಏನು ಇದೆ ಇದನ್ನು ಬಹಳ ನಿಕೃಷ್ಟ ಮನೋಭಾವದಿಂದ ನೋಡಿಕೊಂಡು ಬಂದಿದ್ದಾರೆ. ಇದು ಕೇವಲ ಕಳೆದ ಒಂದು ವರ್ಷದಿಂದ ಇರತಕ್ಕಂಥ ಒಂದು ಪದ್ಧತಿ ಎಂದು ನಾನು ಹೇಳುವುದಕ್ಕೆ ಸಿದ್ಧವಿಲ್ಲ. ಈ ಒಂದು ಇಲಾಖೆಯ ಆಡಳಿತ ಇಡೀ ರಾಜ್ಯದ ಈ ಒಕ್ಕಲುತನದ 70 ಪರ್ಸೆಂಟ್ ಜನತೆ ಮೇಲೆ ಅವಲಂಬಿಸಿದೆ ಈ ಇಲಾಖೆಗೆ ನಾವು ನಿರೀಕ್ಷಿಸಿದಷ್ಟು ಫಲವನ್ನು ನಾವು ದೊರಕಿಸಿಕೊಳ್ಳುವುದಕ್ಕೆ ಸಾಕಷ್ಟು ಹಣ ಇಂದೂ ಕೂಡ ಅಳವಡಿಸಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ನಾನು ಹೀಗೆ ಹೇಳತಕ್ಕಂಥ ಕಾಲದಲ್ಲಿ ಕೇವಲ ಟೀಕೆಗೋಸ್ಕರ ಮಾತನಾಡಬೇಕೆಂದು ಮಾತನಾಡುತ್ತಾ ಇಲ್ಲ. ರಾಜ್ಯ ಸರ್ಕಾರದವರು ಕೊಟ್ಟಿರತಕ್ಕಂಥ ಒಂದು ಬಡ್ಜೆಟ್ ಭಾಷಣದಲ್ಲಿ ಶ್ರೀಮಾನ್ ಘೋರ್ಪಡೆಯವರು ಹೇಳಿದರು. ಈ ರಾಜ್ಯದ ವ್ಯವಸಾಯದ ಇಲಾಖೆಗೆ ಸಂಬಂಧಪಟ್ಟ ಹಾಗೆ ಕಳೆದ ಸಾರಿ 47 ಲಕ್ಷ ಟನ್ ಕೊರತೆ ಇದೆ ಎಂದು. ಇದನ್ನು ನೋಡಿದರೆ ನಮ್ಮ ಪ್ರೊಡಕ್ಷನ್ ನಿರೀಕ್ಷಣೆಗಿಂತಲೂ ಹೆಚ್ಚಿನ ಕೊರತೆ ಇದೆ. 13 ಲಕ್ಷ ಟನ್ ಕೊರತೆ ಅವರ ಲೆಕ್ಕದಲ್ಲೇ ಇದೆ. ನಮ್ಮ ರಾಷ್ಟ್ರಮಟ್ಟದಲ್ಲಿ ಹೇಳುವುದಾದರೆ 104.7 ಮಿಲಿಯನ್ ಟನ್‌ಗಳು, ಅಷ್ಟು ಪ್ರೊಡಕ್ಷನ್ ನಿರೀಕ್ಷಣೆ ಮಾಡಿದ್ದೆವು ಆದರೆ ಆಕ್ಚ್ಯುಯಲೀ ಆಗಿ ಹೇಳುವುದಾದರೆ 100 ಮಿಲಿಯನ್ ಟನ್ ಇದೆ. ಇನ್ನು 4.7 ಮಿಲಿಯನ್ ಟನ್ ಕೊರತೆ ಆಹಾರೋತ್ಪಾದನೆಯಲ್ಲಿ ರಾಷ್ಟ್ರಮಟ್ಟದಲ್ಲಿ ಇರತಕ್ಕಂಥದ್ದು ಲೆಕ್ಕದಲ್ಲಿ ಇದೆ. ಹೀಗೆ ಹೇಳತಕ್ಕಂಥ ಕಾಲದಲ್ಲಿ ನಾನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲಿಚ್ಛಿಸುತ್ತೇನೆ.

[Mr. Deputy Speaker in the Chair]

ಇನ್ನು ಈವೊತ್ತಿನ ದಿವಸ ಪ್ರೊಡಕ್ಷನ್ ಆಫ್ ಆಯಿಲ್ ಸೀಡ್ಸ್ ಬಗ್ಗೆ ಹೇಳುವುದಾದರೆ 72 ಲಕ್ಷ ಟನ್ ಕೊರತೆ ಇದೆ. 1971—72 ರಲ್ಲಿ 83 ಲಕ್ಷ ಟನ್ ಇತ್ತು.

ಇನ್ನು ಜೂಟ್ ಪ್ರೊಡಕ್ಷನ್ ತೆಗೆದುಕೊಂಡರೆ 68 ಲಕ್ಷ ಟನ್ 1971-72 ರಲ್ಲಿ ಕೊರತೆ ಇತ್ತು 1972-73 ರಲ್ಲಿ 73 ಲಕ್ಷ ಟನ್ ಬಂದಿದೆ.

(ಶ್ರೀ ಹೆಚ್. ಡಿ. ದೇವೇಗೌಡ)

ಇನ್ನು ಕಾಟನ್ ಬೇಲ್ಸ್ ತೆಗೆದುಕೊಂಡರೆ 1971—72 ರಲ್ಲಿ 65 ಲಕ್ಷ ಬೇಲ್ ಬಂದಿದ್ದುದು 1972—76ಕ್ಕೆ 60 ಲಕ್ಷ ಬೇಲ್ ಬಂದಿದೆ.

ನಮ್ಮ 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿ ವರ್ಷವೂ 5 ಪರ್ಸೆಂಟ್ ಉತ್ಪನ್ನ ಹೆಚ್ಚಿಸ ತಕ್ಕಂಥ ಪ್ಲಾನ್ ಏನು ಹಾಕಬೇಕಾಗಿತ್ತು; ಈವೊತ್ತಿನ ದಿವಸ ಅಚೀವ್‌ಮೆಂಟ್ ಏನಾಗಿದೆ ಎಂದರೆ ಕೇವಲ 2 ಪರ್ಸೆಂಟ್ ಮಾತ್ರ ಸಾಧನೆಮಾಡಿದ್ದಾರೆ ಎಂದರೆ ಇದಕ್ಕೆ ಇಟ್ಟಿರತಕ್ಕಂಥ ಹಣ ಸಾಲದು ಎಂದು ಹೇಳುತ್ತೇನೆ. ಮತ್ತು ಈ ಬಗ್ಗೆ ಕೆಲವು ನಿದರ್ಶನಗಳನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ.

ಈವೊತ್ತಿನ ದಿವಸ ಅಗ್ರಿಕಲ್ಚರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಕೆಲವು ವಿಷಯಗಳನ್ನು ತಮ್ಮ ಮುಂದೆ ಇಡಲು ಬಯಸುತ್ತೇನೆ. ಏತಕ್ಕೆಂದರೆ ಈವೊತ್ತು ನಮ್ಮ ವ್ಯವಸಾಯದಲ್ಲಿ ತೊಡಗಿರ ತಕ್ಕಂಥ ನತದೃಷ್ಟ ರೈತರು ಏನು ಇದ್ದಾರೆ ಅವರಿಗೆ ಬೇಕಾದಂಥ ನೆರವನ್ನು ಕಳೆದ 25 ವರ್ಷ ಗಳಿಂದಲೂ ಕೂಡ ಕೊಟ್ಟರೂ ಸಹಿತ ಅವರ ಅದೃಷ್ಟದಬಾಗಿಲು ತೆರೆಯುವಂಥ ಯೋಜನೆಗಳು ಆಗುತ್ತಾ ಇಲ್ಲ ಎಂದು ನಾನು ನೊಂದ ಹೃದಯದಿಂದ ಹೇಳಬೇಕಾಗಿದೆ. ನಾನು ಒಬ್ಬರ ಮೇಲೆ ಹೇಳುವುದಿಲ್ಲ. It is one of the neglected department. ಈವೊತ್ತಿನ ಈ ಬಗ್ಗೆ ನಾವು ಆಲೋಚನೆ ಮಾಡಬೇಕಾಗಿದೆ. ಈವೊತ್ತು ನಮ್ಮ ರಾಜ್ಯದ ವ್ಯವಸಾಯದಲ್ಲಿರತಕ್ಕಂಥ ನೌಕರರಿಗೆ ರಾಜ್ಯದ ಬೊಕ್ಕಸದಿಂದ 2 ಪರ್ಸೆಂಟ್ ಖರ್ಚಾಗುತ್ತದೆ. ನಮ್ಮ ಉತ್ಪಾದನೆಯಲ್ಲಿ ಇದಕ್ಕೆ 53 ಪರ್ಸೆಂಟ್ ಖರ್ಚು ಮಾಡಬೇಕಾದ ಪರಿಸ್ಥಿತಿ ಇದೆ. ಆದರೆ ನಮ್ಮ ರಾಜ್ಯದಲ್ಲಿ 70 ಪರ್ಸೆಂಟ್ ಅಷ್ಟು ನಮ್ಮ ಒಕ್ಕಲುತನದ ರೈತರು ಏನು ಇದ್ದಾರೆ ಅವರಿಗೆ ಸಂಬಂಧಪಟ್ಟಂತೆ ಯಾವ ಕಾರ್ಯಕ್ರಮಗಳನ್ನಾಗಲಿ, ಯಾವ ಯೋಜನೆಗಳನ್ನಾಗಲಿ ಹಾಕತಕ್ಕಂಥ ಕಾಲದಲ್ಲಿ ನಾವು ಈ ಒಂದು ಬೇಡಿಕೆಯನ್ನು ನೋಡಿದಾಗ ಕೇವಲ 14 ಕೋಟಿ ರೂಪಾಯಿ ಏನು ಇದೆ ಅದು ಸಾಕಾಗು ವುದಿಲ್ಲ. ಇದಕ್ಕೆ ಇನ್ನೂ ಹೆಚ್ಚು ಹಣ ಒದಗಿಸಿದ್ದರೆ ನಾನು ಸ್ವಾಗತ ಮಾಡುತ್ತಿದ್ದೆ. ಹಿಂದಿನ ಅನುಭವಗಳನ್ನೂ ನೋಡಿದಾಗ ಈ ಬಗ್ಗೆ ಮಾರ್ಪಾಡು ಆಗಬೇಕು ಎಂದು ಹೇಳುವುದಕ್ಕೆ ಇಚ್ಛೆಪಡು ತ್ತೇನೆ. ಈವೊತ್ತು ಈ ವಿಷಯದಲ್ಲಿ ಪ್ರತಿಯೊಂದನ್ನೂ ವಿವರ ಕೊಡುವ ಬಗ್ಗೆ ತಮಗೆ ಆಲ್ ಇಂಡಿಯಾ ಫಿಗರ್ಸ್ ಕೊಟ್ಟರೆ ಗೊತ್ತಾಗುತ್ತದೆ. ಏತಕ್ಕೆಂದರೆ ನಮ್ಮ ರಾಜ್ಯದಲ್ಲಿರತಕ್ಕಂಥ ವ್ಯವಸಾಯದ ಲೋಪದೋಷಗಳನ್ನು ಹೇಳುವುದಕ್ಕೆ ಮುಂಚೆ ಮೂಲಭೂತವಾಗಿ ರೈತರಿಗೆ ಸಂಬಂಧ ಪಟ್ಟಂತೆ ಕೆಲವು ಸಲಕರಣೆಗಳು ಏನು ಇವೆ, ಫೈನಾನ್ಸ್ ಏನು ಬೇಕು ಆ ಬಗ್ಗೆ ಕೆಲವು ವಿಷಯ ಗಳನ್ನು ಹೇಳುತ್ತೇನೆ.

ಒಂದನೆಯದಾಗಿ ಕಮರ್ಷಿಯಲ್ ಬ್ಯಾಂಕ್ಸ್, ಫೈನಾಷಿಯರ್ಸ್ ಫಾರ್ ಅಡ್ವಾನ್ಸಸ್ ಇದರ ಒಂದು ಲೆಕ್ಕ ತೆಗೆದುಕೊಂಡರೆ ಮೈಸೂರಿನಲ್ಲಿ 39.3 ಪರ್ಸೆಂಟ್, ತಮಿಳುನಾಡ್ ತೆಗೆದುಕೊಂಡರೆ 80·7 ಪರ್ಸೆಂಟ್ ಇದೆ. ಹಾಗೆ ಕೇರಳ ತೆಗೆದುಕೊಂಡರೆ 57·5 ಪರ್ಸೆಂಟ್ ಇದೆ. ನಾವು ಇದರಲ್ಲಿ ಎಷ್ಟು ಹಿಂದೆ ಇದ್ದೇವೆ ಎನ್ನುವುದು ಗೊತ್ತಾಗುತ್ತದೆ. ಮೈಸೂರು ರಾಜ್ಯದಲ್ಲಿ ಈವೊತ್ತಿನ ದಿವಸ ರೈತನಿಗೆ ಬೇಕಾದಂಥ ಹಣದ ಸಹಾಯವನ್ನು ಒದಗಿಸುವುದಕ್ಕೆ ನಾವು ಯಾವ ಮಟ್ಟದಲ್ಲಿದ್ದೇವೆ ಎನ್ನತಕ್ಕಂಥಾದ್ದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ಇದರಿಂದ ನೀವು ಈ ದೇಶದಲ್ಲಿ ಈ ವಕ್ಕಲುತನ ಅವಲಂಬಿಸಿರತಕ್ಕ ರೈತನ ಬಗ್ಗೆ ಯಾವ ಒಂದು ಕಾರ್ಯಕ್ರಮ ತೆಗೆದು ಕೊಳ್ಳಬೇಕು ಎನ್ನತಕ್ಕಂಥಾದ್ದನ್ನು ತಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಈವೊತ್ತಿನ ದಿವಸ ಕ್ರೆಡಿಟ್ ಫೆಸಿಲಿಟೀಸ್ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಇರುವಂಥ ಕ್ರೆಡಿಟ್ ಸೊಸೈಟಿಗಳು 43 ಪರ್ಸೆಂಟ್ ಇವೆ. ಅದೇ ಹೊರಗಡೆ ರಾಜ್ಯಗಳಿಗೆ ಹೋಲಿಸಿದರೆ ಅಸ್ಸಾಮ್ 79 ಪರ್ಸೆಂಟ್, ಉತ್ತರ ಪ್ರದೇಶ 5? ಪರ್ಸೆಂಟ್, ಒರಿಸ್ಸಾ 66 ಪರ್ಸೆಂಟ್, ವೆಸ್ಟ್ ಬೆಂಗಾಲ್ 71 ಪರ್ಸೆಂಟ್ ಇವೆ. ಇನ್ನು ನಾವು ಅಗ್ರಿಕಲ್ಚರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳಿಲ್ಲ. ಆದರೆ ಈ ಬಗ್ಗೆ ರೈತರಿಗೆ ಸಾಕಷ್ಟು ವ್ಯವಸ್ಥೆಯನ್ನು ಮಾಡಿಲ್ಲ ಎಂದು ಹೇಳಬಯಸುತ್ತೇನೆ.

ಇನ್ನು ಫರ್ಟಿಲೈಸರ್ಸ್ ಕನ್‌ಸಂಪ್ಷನ್ ವಿಷಯ ತೆಗೆದುಕೊಂಡರೆ ಇದು ಯಾವ ಪ್ರಮಾಣ ದಲ್ಲಿ ಇಟ್ಟುಕೊಂಡಿದ್ದಾರೆ ಎಂದರೆ ಮೈಸೂರು 18·?, ಇದೆ ಬಾಕಿ ಇತರ ರಾಜ್ಯಗಳಿಗೆ ಹೋಲಿಸಿದರೆ ಉತ್ತರ ಪ್ರದೇಶ 35 ಪರ್ಸೆಂಟ್ ಇದೆ, ಮಣಿಪುರ 37 ಪರ್ಸೆಂಟ್ ರಾಜಸ್ಥಾನ್ ಪಂಜಾಬ್ ಇವು ಗಳಿಗೆ ನಮಗಿಂತ ಜಾಸ್ತಿ ಪ್ರಮಾಣದಲ್ಲಿ ಫರ್ಟಿಲೈಸರ್ಸ್ ಕನ್‌ಸಂಪ್ಷನ್ ಇಟ್ಟುಕೊಂಡಿದ್ದಾರೆ ಎಂದು ಈಗ ಕೊಟ್ಟಿರತಕ್ಕಂಥ ಕೆಲವು ಅಂಶಗಳಿಂದ ತಿಳಿದುಕೊಳ್ಳಬೇಕಾಗಿದೆ.

ಇನ್ನು ಹೀಗೆಯೇ ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಗ್ರೋತ್ ಆಫ್ ಎಲೆಕ್ಟ್ರಿಕಲ್ ಪಂಪ್‌ಸೆಟ್ಸ್ ವಿಚಾರವಾಗಿ ವಾರ್ಷಿಕ ವರಮಾನ ತೆಗೆದುಕೊಂಡರೆ ಮೈಸೂರಿನಲ್ಲಿ 52·5, ಮಹಾರಾಷ್ಟ್ರದಲ್ಲಿ 130·37, ಆಂಧ್ರ ಪ್ರದೇಶದಲ್ಲಿ 251·5, ಪಂಜಾಬ್ 659.3, ಇವೆ. ಯಾವ ಉದ್ದೇಶಕ್ಕಾಗಿ ಈ ಒಂದು ಇಲಾಖೆ ಇದೆಯೋ, ಮತ್ತು ಈ ಇಲಾಖೆಯನ್ನು ಅವಲಂಬಿಸಿಕೊಂಡಿರತಕ್ಕಂಥ ನಮ್ಮ ರಾಜ್ಯದ 70 ಪರ್ಸೆಂಟ್ ನತದೃಷ್ಟ ರೈತರು ಏನು ಇದ್ದಾರೋ ಅವರಿಗಾಗಿ ಒಂದು ಯೋಜನೆಯನ್ನು ಮಾಪಾರ್ಡು ಮಾಡಬೇಕು ಎನ್ನುವ ದೃಷ್ಟಿಯಿಂದ ನಾನು ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ.

ನದೀ ನೀರನ್ನು ನಾವು ಉಪಯೋಗ ಮಾಡಲಿಕ್ಕೆ ಹೋಗುತ್ತಿದ್ದೇವೆ. ಅದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ಯಾವುದೇ ಸಂದರ್ಭದಲ್ಲಿ ಕೂಡ 25 ಅಥವಾ 26 ಪರ್ಸೆಂಟ್‌ಗಿಂತ ಹೆಚ್ಚು ನೀರಾವರಿ ಆಗುವುದಿಲ್ಲ. ಆದುದರಿಂದ ನಾವು ಅಂಡರ್‌ಗ್ರೌಂಡ್ ವಾಟರ್ ಉಪಯೋಗ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತಿದ್ದೇನೆ. ಅಖಿಲ ಭಾರತ ಅಂಕಿಸಂಖ್ಯೆಗಳನ್ನು ನೋಡಿದರೆ ನಮ್ಮಲ್ಲಿ 9 ಪರ್ಸೆಂಟ್ ಇವೆ, ಮಧ್ಯಪ್ರದೇಶದಲ್ಲಿ 22.6 ಪರ್ಸೆಂಟ್ ಇದೆ, ಬಿಹಾರದಲ್ಲಿ 19·5 ಪರ್ಸೆಂಟ್ ಇದೆ, ಉತ್ತರ ಪ್ರದೇಶದಲ್ಲಿ 17 ಪರ್ಸೆಂಟ್ ಮತ್ತು ಆಂಧ್ರ ಪ್ರದೇಶದಲ್ಲಿ 13 ಪರ್ಸೆಂಟ್ ಹೀಗೆ ಇದೆ. ಅಂಡರ್ ಗ್ರೌಂಡ್ ವಾಟರ್ ಉಪಯೋಗಿಸುವುದರಲ್ಲಿಯೂ ಸಾಕಷ್ಟು ಪ್ರಗತಿಯನ್ನು ನಾವು ಸಾಧಿಸಿಲ್ಲ ಎನ್ನುವ ವಿಷಯವನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ನಮ್ಮ ರಾಜ್ಯದಲ್ಲಿ ಈ ಹೊತ್ತು ಹಸಿರು ಕ್ರಾಂತಿ ಎಂದು ಏನು ಹೇಳುತ್ತಿದ್ದೇವೆ, ಅದರಿಂದ ನಿರೀಕ್ಷಿಸಿದ ಮಟ್ಟದಲ್ಲಿ ಯಾವ ಫಲವೂ ದೊರೆಯಲು ಸಾಧ್ಯವಿಲ್ಲದೆ ಇರುವುದನ್ನು ನಾವು ನೋಡಬಹುದು. ಮಾನ್‌ಸೂನ್ ಫೇಲಾಗಿದೆ, ಏನು ಮಾಡುವುದಕ್ಕಾಗುತ್ತದೆ, ಪವರ್ ಫೇಲ್ಯೂರ್ ಹೀಗೆ ಹಲವಾರು ಕಾರಣಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡಬಹುದು. ಆದರೆ ಮಳೆ ಬಿದ್ದು ಬೆಳೆ ಬೆಳೆದರೆ ಅದರಿಂದ ಟಾರ್ಗೆಟ್ ಮುಟ್ಟಿದೆವು ಎಂದು ಹೇಳುವುದು ಸರಿಯಾದುದಲ್ಲ. ನಮ್ಮ ಮೈಸೂರು ರಾಜ್ಯದಲ್ಲಿ 9—10 ಪರ್ಸೆಂಟ್ ಮೀರಿಲ್ಲ. ಎಲ್ಲ ಅಚೀವ್ ಮಾಡಿದರೆ 10—12ಕ್ಕೆ ಹೋಗಬಹುದು. 14 ಪರ್ಸೆಂಟ್‌ಗೆ ಹೋಗತಕ್ಕ ಸ್ಥಿತಿಯಲ್ಲಿ ನಾವು ಇಲ್ಲ. ಈ ಸಂದರ್ಭದಲ್ಲಿ ಉಳಿದ 90 ಪರ್ಸೆಂಟ್ ರೈತರ ಸ್ಥಿತಿ ಮಳೆಯ ಆಧಾರದ ಮೇಲೆ ಅವನ ಭವಿಷ್ಯವನ್ನು ರೂಪಿಸಿಕೊಳ್ಳಬೇಕಾಗಿದೆ. ಮಳೆ ಬಂದು ಬೆಳೆಯಾದರೆ ಎಷ್ಟು ಆಹಾರ ಉತ್ಪಾದನೆ ಮಾಡಬೇಕಾಗಿತ್ತೋ ಅಷ್ಟು ಉತ್ಪಾದನೆ ಮಾಡಿದ್ದೇವೆ ಎಂದು ಸರ್ಕಾರ ಬೆನ್ನು ತಟ್ಟಿಕೊಳ್ಳತಕ್ಕ ಪ್ರವೃತ್ತಿಯನ್ನು ಬೆಳೆಸಿಕೊಂಡಿದೆ. ಒಂದು ವೇಳೆ ಉತ್ಪತ್ತಿ ಬಿದ್ದು ಹೋದರೆ ಅದಕ್ಕೆ ಕೊಡತಕ್ಕ ಕಾರಣ ಮುಂಗಾರು ಮಳೆ ಬರಲಿಲ್ಲ, ಬೆಳೆಯಾಗಲಿಲ್ಲ ಎಂದು ಹೇಳುವ ಪ್ರವೃತ್ತಿಯನ್ನು ಬೆಳೆಸಿಕೊಂಡು ಬಂದಿದ್ದೇವೆ, ಕಳೆದ 25 ವರ್ಷಗಳಿಂದ ನಾವೇ ರಾಜ್ಯದ ಆಡಳಿತವನ್ನು, ರಾಷ್ಟ್ರದ ಆಡಳಿತವನ್ನು ನಿರ್ವಹಣೆ ಮಾಡತಕ್ಕ ಶಕ್ತಿಯನ್ನು ಗಳಿಸಿಕೊಂಡ ಮೇಲೆ ಈ ಒಂದು ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ನಾವು ಮಾಡಿರತಕ್ಕ ಕಾರ್ಯಕ್ರಮಗಳೇನು ಎನ್ನುವುದನ್ನು ಕೂಡ ಆಲೋಚನೆ ಮಾಡಬೇಕಾಗಿರುತ್ತದೆ. ಆ ದಿಸೆಯಲ್ಲಿ ನಮ್ಮ ಪ್ಲಾನ್, ಅದರಲ್ಲಿಯೂ ವ್ಯವಸಾಯ ಖಾತೆಗೆ ಸಂಬಂಧಪಟ್ಟ ನಮ್ಮ ಯೋಜನೆಯನ್ನೂ ಬಹುಶಃ ಮಾಪಾರ್ಡು ಮಾಡಿ ಇದಕ್ಕೆ ಹೆಚ್ಚು ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಇಲಾಖೆಯಲ್ಲಿರುವ ಲೋಪದೋಷಗಳನ್ನು ಒಂದೊಂದಾಗಿ ತಮ್ಮ ಗಮನಕ್ಕೆ ತರುತ್ತೇನೆ. ಅಡ್ಮಿನಿಸ್ಟ್ರೇಷನ್‌ನಲ್ಲಿ ವ್ಯವಸಾಯ ಇಲಾಖೆ ಎಷ್ಟು ಪ್ರಗತಿಯನ್ನು ಸಾಧಿಸಿದೆ ಎನ್ನುವುದರ ಬಗ್ಗೆ ಹೇಳಿದ್ದಾರೆ. ರಾಜ್ಯ ಮಟ್ಟದಲ್ಲಿ ವ್ಯವಸಾಯ ಇಲಾಖೆಯಲ್ಲಿ ಅಧಿಕಾರಿಗಳ ಸೈನ್ಯವಿದೆ ಎಂದರೆ ತಪ್ಪಾಗಲಾರದು. ಆದರಲ್ಲಿಯೂ ಶ್ರೀಮಾನ್ ಪಾಟೀಲರು ಬಂದ ಮೇಲೆ ಅಧಿಕಾರಿಗಳನ್ನು ಹೆಚ್ಚು ಮಾಡಿಕೊಂಡಿದ್ದಾರೆ. ಇದರಿಂದ ಆಹಾರದ ಉತ್ಪಾದನೆಗೆ ಸಹಾಯವಾಗುತ್ತದೆ ಎಂಬುದರಲ್ಲಿ ನನಗೆ ನಂಬಿಕೆ ಸಾಲದು, ಇರತಕ್ಕ ಅಧಿಕಾರಿಗಳು, ಅವರಿಗೆ ಹೇರಿಸಿರತಕ್ಕ ಕಾರ್ಯವನ್ನು ನಿರ್ವಹಣೆ ಮಾಡದೆ ಹೋದರೆ ಅಧಿಕಾರಿಗಳ ತಂಡವನ್ನು ಹೆಚ್ಚುಮಾಡುವುದರಿಂದ ಆಹಾರೋತ್ಪಾದನೆ ಜಾಸ್ತಿಯಾಗುತ್ತದೆ ಎನ್ನುವುದರಲ್ಲಿ ಸಾಕಷ್ಟು ನಂಬಿಕೆ ನನಗಿಲ್ಲ ಎನ್ನುವುದನ್ನು ತಿಳಿಸುತ್ತಿದ್ದೇನೆ. ಎಷ್ಟು ಜನ ಡೈರೆಕ್ಟರುಗಳು, ಜಾಯಿಂಟ್ ಡೈರೆಕ್ಟರುಗಳಿದ್ದಾರೆ, ನಾಲ್ಕು ಡಿವಿಜನ್‌ಗಳಿರುವುದು ಎಲ್ಲವನ್ನೂ ಹೇಳಿಕೊಂಡು ಹೋಗಿದ್ದಾರೆ. ಈ ಇಲಾಖೆಯನ್ನು ರೀಆರ್ಗನೈಜ್ ಮಾಡುವಾಗ ಆದರಿಂದ ದಕ್ಷತೆಯಿಂದ ಕೆಲಸಕಾರ್ಯಗಳು ನಡೆಯುವುದಕ್ಕೆ ಅನುಕೂಲವಾಗುತ್ತದೆ, ಆದ್ದರಿಂದ ಈ ರೀತಿಯ ಮಾಪಾರ್ಡನ್ನು ಮಾಡಿದ್ದೇವೆಂದು ಹಿಂದೆ ಇದ್ದ ಮಂತ್ರಿಗಳು ಹೇಳುತ್ತಿದ್ದರು. ಈ ಮಾಪಾರ್ಡನ್ನು ಮಾಡಿದ ಮೇಲೆ ನಾವು ಸಾಧಿಸಿರತಕ್ಕ ಪ್ರಗತಿ ಏನು ಎಂದು ನಾನು ಕೇಳುತ್ತೇನೆ.

(ಶ್ರೀ ಎಚ್. ಡಿ. ದೇವೇಗೌಡ)

ಒಂದೇ ಒಂದು ಮಾತನ್ನು ಹೇಳುವುದಾದರೆ, ಈ ಇಲಾಖೆಯ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಬಹುಶಃ ಇಲಾಖೆಯ ಮುಖ್ಯಾಧಿಕಾರಿಗಳಿಂದ ಹಿಡಿದು ಮಂತ್ರಿಗಳವರೆಗೆ ಎಲ್ಲರೂ ವಿಫಲಗೊಂಡಿದ್ದಾರೆಂದರೆ ತಪ್ಪಾಗುವುದಿಲ್ಲ. ರಾಜ್ಯದಲ್ಲಿ ಕೆಳಮಟ್ಟದಲ್ಲಿ ನಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರತಕ್ಕದ್ದರಲ್ಲಿ ನಂಬಿಕೆ ಇರುವವರು ಯಾರು ಎಂದರೆ, ತಾಂತ್ರಿಕ ಜ್ಞಾನವಿಲ್ಲದೆ, ತಾಂತ್ರಿಕವಾಗಿ ಹೆಚ್ಚು ಮಾಹಿತಿಯನ್ನು ಪಡೆಯದೆ ಇರತಕ್ಕ ಗ್ರಾಮಸೇವಕ, ಅವನ ಮೇಲೆ ಈ ರಾಜ್ಯದಲ್ಲಿ ಏನು ಯೋಜನೆಗಳನ್ನು ಹಾಕುತ್ತೇರಿ ಆ ಯೋಜನೆಗಳನ್ನು ಕಾರ್ಯರೂಪಕ್ಕೆ ತರತಕ್ಕದ್ದು, ತಾಂತ್ರಿಕ ವಿಚಾರಗಳಲ್ಲಿ ಪರಿಣತಿಯನ್ನು ಹೊಂದದೆ ಇರತಕ್ಕ, ಸಾಮಾನ್ಯ ಎಸ್.ಎಸ್.ಎಲ್.ಸಿ. ಪಾಸ್ ಮಾಡಿರುವ, 10—12 ತಿಂಗಳು ಟ್ರೈನಿಂಗ್ ಆಗಿರುವ, ಬ್ಲಾಕ್ ಲೆವೆಲ್‌ನಲ್ಲಿ ಕೆಲಸ ಮಾಡುವ ಗ್ರಾಮ ಸೇವಕನ ಮೇಲೆ ಬಿದ್ದಿದೆ. ಅವನಲ್ಲಿ ತಾಂತ್ರಿಕ ಜ್ಞಾನ ನಾವು ನಿರೀಕ್ಷಿಸಿದ ಮಟ್ಟದಲ್ಲಿಲ್ಲವೆಂದರೆ ತಪ್ಪಾಗುವುದಿಲ್ಲ. ಗ್ರಾಮ ಸೇವಕರ ಮೇಲೆ ಅಡ್ಮಿನಿಸ್ಟ್ರೇಟಿವ್ ಕಂಟ್ರೋಲ್ ಇರತಕ್ಕದ್ದು ಡೆಪ್ಯುಟಿ ಡೈರೆಕ್ಟರಿಗೆ ಮತ್ತು ಕೆಲಸವನ್ನು ಸೂಚಿಸುವವರು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್. ಇವರಲ್ಲಿ ಕೋ ಆರ್ಡಿನೇಷನ್ ಇಲ್ಲ. ಈ ದ್ವಿಮುಖ ನೀತಿ ಸರಿಯಲ್ಲ. ಯಾರಾದರೂ ಒಬ್ಬರನ್ನು ಜವಾಬ್ದಾರಿ ಮಾಡಬೇಕು. ಚೆನ್ನಾಗಿ ಕೆಲಸ ಮಾಡುವುದಿಲ್ಲ, ಬೇರೆ ಕಡೆಗೆ ವರ್ಗ ಮಾಡಿ ಎಂದು ಹೇಳಿದರೆ ವರ್ಗ ಮಾಡುವುದಿಲ್ಲ ನಾನಾದರೂ ಏನು ಮಾಡುವುದಕ್ಕಾಗುತ್ತದೆ ಎಂದು ಬಿ.ಡಿ.ಒ. ಅವರು ಹೇಳುತ್ತಾರೆ. ಆದ್ದರಿಂದ ಯಾರಾದರೂ ಒಬ್ಬರ ಜವಾಬ್ದಾರಿಯಲ್ಲಿ ಕೆಲಸ ಮಾಡುವ ವ್ಯವಸ್ಥೆಯಾಗಬೇಕು. ಗ್ರಾಮ ಸೇವಕರಿಗೆ ಒಂದು ಸರ್ಕಲ್ ಕೊಟ್ಟಿದ್ದಾರೆ, ಒಂದು ಜಾಬ್ ಚಾರ್ಟ್, ಎಷ್ಟು ಕೆಲಸ ಮಾಡಬೇಕು ಎಂದು ಕೊಟ್ಟಿರುತ್ತಾರೆ. ಇಷ್ಟು ಟಾರ್ಗೆಟ್ ತೋರಿಸಬೇಕು ಎಂದು ಹೇಳಿರುತ್ತಾರೆ. ಒಬ್ಬ ಗ್ರಾಮ ಸೇವಕ ಎಷ್ಟು ಗ್ರಾಮಗಳನ್ನು ನೋಡುವುದಕ್ಕಾಗುತ್ತದೆ ? ಇದನ್ನೂ ಯೋಚನೆ ಮಾಡಬೇಕು. ಈ ಇಲಾಖೆಯಲ್ಲಿ ರೊಟೀನ್ ವೇ ಆಫ್ ಅಡ್ಮಿನಿಸ್ಟ್ರೇಷನ್ ನಡೆಯುತ್ತಿದೆ. ವ್ಯವಸಾಯ ಇಲಾಖೆಯ ಅಧಿಕಾರಿಗಳ ಹತ್ತಿರ ಹೋಗಿ ಬೀಜ, ಗೊಬ್ಬರ ಇವುಗಳ ವಿಚಾರವಾಗಿ ಕೇಳಿದರೆ, ಬೀಜ ಬರಲಿಲ್ಲ ನಾವು ಏನು ಮಾಡುವುದಕ್ಕಾಗುತ್ತದೆ ಎಂದು ಗೊಬ್ಬರ ಬರಲಿಲ್ಲವೆಂದರೆ ನಾವು ಏನು ಮಾಡುವುದಕ್ಕಾಗುತ್ತದೆ, ಸೊಸೈಟಿಯವರು ಸರಿಯಾಗಿ ವಿತರಣೆ ಮಾಡುವುದಿಲ್ಲ ಎಂದು ಹೇಳುತ್ತಾರೆ. ಡೆಪ್ಯುಟಿ ಡೈರೆಕ್ಟರುಗಳು ತಮ್ಮ ಕೆಲಸದಲ್ಲಿ ಹಾರಿಕೆಯ ಉತ್ತರಗಳನ್ನು ಕೊಡುವುದು ಸರ್ವೇಸಾಮಾನ್ಯವಾಗಿದೆ. ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಈ ವಿಚಾರದಲ್ಲಿ ಚರ್ಚೆ ಮಾಡಲಾಯಿತು. ಬೀಜದ ವಿತರಣೆ, ಗೊಬ್ಬರದ ವಿತರಣೆ ಇವುಗಳಲ್ಲಿ ಒಂದೊಂದು ಇಲಾಖೆಯ ಅಧಿಕಾರಿಗಳಲ್ಲಿ ಕೋ ಆರ್ಡಿನೇಷನ್ ಇಲ್ಲ. ಕೇವಲ ಅಧಿಕಾರಿಗಳನ್ನು ಜಾಸ್ತಿ ಮಾಡಿರುವುದರಿಂದ ಎಷ್ಟರಮಟ್ಟಿಗೆ ಈ ಇಲಾಖೆಯಲ್ಲಿ ದಕ್ಷತೆ ಹೆಚ್ಚಿದೆ, ತನ್ಮೂಲಕ ಆಹಾರದ ಉತ್ಪಾದನೆ ಜಾಸ್ತಿಯಾಗಿ ನತದೃಷ್ಟ ರೈತನ ಆರ್ಥಿಕಾಭಿವೃದ್ಧಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಕೆಲಸ ನಡೆಯುತ್ತಿದೆ ಎನ್ನುವುದರಬಗ್ಗೆ ವಿಷಾದದಿಂದ ಹೇಳುತ್ತೇನೆ ಉನ್ನತ ಮಟ್ಟದ ಕೆಲಸ ನಡೆಯುತ್ತಿಲ್ಲ.

ಈ ಒಂದು ದೆಸೆಯಲ್ಲಿ ಕೂಡ ಮಂತ್ರಿಗಳು ಇದರಲ್ಲಿ ಎಲ್ಲಿ ಲೋಪದೋಷಗಳು ಆಗಿವೆ ಎನ್ನುವುದನ್ನು ಸರಿಯಾಗಿ ಪರಿಶೀಲನೆ ಮಾಡುವ ಕ್ರಮತೆಗೆದುಕೊಂಡು ಪರಿಶೀಲನೆ ಮಾಡಲಿಲ್ಲ. ಆದರೆ ಇದಕ್ಕಾಗಿ ನಾನು ಮಂತ್ರಿಗಳ ಮೇಲೆ ಆರೋಪ ಮಾಡುತ್ತಿಲ್ಲ. ಇನ್ನು ಫರ್ಟಿಲೈಸರ್‌ಗಳ ಬಗ್ಗೆ ಪ್ರತ್ಯೇಕವಾಗಿ ಒಬ್ಬರು ಡೆಪ್ಯೂಟಿ ಡೈರೆಕ್ಟರನ್ನು ನೇಮಕ ಮಾಡಿದ್ದಾರೆ, ಇನ್ನೊಂದು ಕಡೆ ಒಬ್ಬರು ಜಾಯಿಂಟು ಡೈರೆಕ್ಟರು ಎಂದು ನೇಮಕ ಮಾಡಿ ಅವರ ಮೂಲಕ ಪ್ರಾಣಿಗಳನ್ನು ಸಂರಕ್ಷಣೆ ಮಾಡಬೇಕೆಂದು ಇದಕ್ಕೆ ಪ್ರತ್ಯೇಕವಾದ ಒಬ್ಬ ಅಧಿಕಾರಿಗಳು ಎಂದರೆ ಹುಲಿ, ಚಿರತೆ ಇಂತಹ ಪ್ರಾಣಿಗಳನ್ನು ರಕ್ಷಣೆ ಮಾಡಬೇಕೆಂದು ಮಾಡಿದ್ದಾರೆಂದು ಕೇಳಿದೆ. ಇದೇ ರೀತಿ ನ್ಯಾಚುರಲ್ ಮಾನ್ಯೂರ್‌ಗಾಗಿ ಒಬ್ಬ ಡೈರೆಕ್ಟರು ಹಾಗೇ, ಫರ್ಟಿಲೈಸರ್ ಇಲಾಖೆ ನೋಡಲು ಒಬ್ಬರು ಡೈರೆಕ್ಟರು, ಹೀಗೆ ಅಧಿಕಾರಿಗಳ ಸಂಖ್ಯಾಬಲವನ್ನು ಹೆಚ್ಚು ಮಾಡುವುದರಿಂದ ಇಲಾಖೆಯಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗುವುದಿಲ್ಲ, ಇರುವ ಅಧಿಕಾರಿಗಳಿಂದಲೇ ಕೆಲಸ ತೆಗೆದುಕೊಳ್ಳುವುದಕ್ಕೆ ಸಾಕಷ್ಟು ತಮ್ಮ ಶಕ್ತಿಯನ್ನು ಬೆಳೆಸಬೇಕು ಎಂದು ಸಲಹೆ ಮಾಡುತ್ತೇನೆ. ಈ ಇಲಾಖೆಯ ವಿಚಾರವಾಗಿ ಮಾತನಾಡಬೇಕಾದರೆ ಬೇಕಾದಷ್ಟು ಇದೆ, ಇದೊಂದು ದೊಡ್ಡ ಇಲಾಖೆ. It is a vast Department. ಇದಕ್ಕಾಗಿ ನಾನು ಇದರ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವಾಗ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕಾ ಮಟ್ಟದಲ್ಲಿ ಏನೇನು ಲೋಪದೋಷಗಳು ಇವೆ ಅವನ್ನು ಸರಿಯಾಗಿ ವಿಚಾರ ಮಾಡಿ ಪರಿಹರಿಸಬೇಕೆಂದು ಇಲ್ಲಿ ಸಲಹೆ ಮಾಡಲು ಇಚ್ಛಿಸುತ್ತೇನೆ.

12-30 p.m.

ರೈತರಿಗೆ ಬೇಕಾದ ಕೆಲವು ಸಲಕರಣೆಗಳನ್ನು ಎಂದರೆ ಉತ್ತಮವಾದ ಬೀಜ, ಫರ್ಟಿಲೈಸರ್, ಫೈನಾನ್ಸ್ ಬೇಕು, ಮಾರುಕಟ್ಟೆ ಬೇಕು, ಈ ರೀತಿ ಮುಖ್ಯವಾಗಿ ಬೇಕಾಗಿರುವ ಉಪಕರಣಗಳನ್ನು ಒದಗಿಸುವುದರಲ್ಲಿ ನೀವೆಷ್ಟು ಪ್ರಗತಿ ಸಾಧಿಸಿದ್ದೀರಿ? ನಮ್ಮ ಕೃಷಿ ಮಂತ್ರಿಗಳಿಗೆ ಸಹಕಾರ ಇಲಾಖೆ ಸಂಬಂಧ ಅವರ ವ್ಯವಹಾರಗಳು ಚೆನ್ನಾಗಿ ಗೊತ್ತಿದೆ. ಅವರು ಸ್ವತಃ ರೈತರಾಗಿರುವುದರಿಂದ ಕೃಷಿಯ ಬಗ್ಗೆಯೂ ಚೆನ್ನಾಗಿ ತಿಳಿದುಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಹಳ್ಳಿಗಾಡಿನ ರೈತರ ಬಗ್ಗೆ ಇನ್ನೂ ಹೆಚ್ಚು ಗಮನ ಕೊಟ್ಟು ಒಳ್ಳೆಯ ಬೀಜ ಕೊಟ್ಟು ಹೆಚ್ಚು ಉತ್ಪಾದನೆಯಾಗುವಂತೆ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ವ್ಯವಸಾಯ ಕ್ಷೇತ್ರದಲ್ಲಿ ನಮ್ಮ ದೇಶ ಸಾಕಷ್ಟು ಪ್ರಗತಿಯನ್ನು ಸಾಧಿಸಲಿಲ್ಲ. ಇವರಲ್ಲಿರುವ ಅಧಿಕಾರಿಗಳು ಕೂಡ ಸಾಕಷ್ಟು ಆಸಕ್ತಿ ವಹಿಸಿ ಕೆಲಸ ಮಾಡುತ್ತಿಲ್ಲ ಎನ್ನುವುದಕ್ಕೆ ಒಂದೇ ಒಂದು ಉದಾಹರಣೆಯನ್ನು ಇಲ್ಲಿ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಮುಂದೆ ಕೊಟ್ಟಿರುವ ಹೇಳಿಕೆಗಳನ್ನು ಇಲ್ಲಿ ಸಭೆಯ ಅವಗಾಹನೆಗಾಗಿ ಓದುತ್ತೇನೆ, ಇವರ ರಿಪೋರ್ಟಿನಲ್ಲಿ "The fact that only 68 Kgs. of seeds per acre were produced on 14 acres and the officers have opened the eyes after so many years to find out the reasons for the bad location of the farm." ಎಂದು ಹೇಳಿದ್ದಾರೆ. 14 ಎಕರೆಗಳಷ್ಟು ಪ್ರದೇಶಗಳಲ್ಲಿ 68 ಕೇಜಿಯಷ್ಟು ಬೀಜ ಮಾತ್ರ ಮಾಡಲು ಇಲ್ಲಿರುವ ಸೀಡ್ ಕಾರ್ಪೊರೇಷನ್ನಿಂದ ಸಾಧ್ಯವಾಯಿತು ಎಂದರೆ ಇವರಲ್ಲಿ ಅಧಿಕಾರಿಗಳ ಅಸಹಾಯಕತೆ ಯಾವ ರೀತಿ ಇದೆ ಎನ್ನುವುದು ವ್ಯಕ್ತವಾಗಿದೆ, ಇದೊಂದು ದುರ್ದೈವದ ಸಂಗತಿ, ಇಂದು ನಮ್ಮ ಹಳ್ಳಿಗಾಡಿನಲ್ಲಿರುವ ಹೆಬ್ಬೆಟ್ಟು ಒತ್ತುವ ರೈತ ಅಲ್ಲಿರುವ ಸೊಸೈಟಿಯವರು ಏನು ಬೀಜ ಕೊಟ್ಟರೂ ಅವನ್ನು ತೆಗೆದುಕೊಂಡು ಹೋಗುತ್ತಾನೆ. ಅನಂತರ ಬಂದು ಇದೇಕೋ ಕೊಟ್ಟ ಬೀಜಗಳೆಲ್ಲಾ ಹಾಳಾದವು ಏನೂ ಹುಟ್ಟಲಿಲ್ಲ ಎಂದು ಹೇಳುತ್ತಾನೆ, ನಾನು ಬಿರ್ಲಾ ಹಾಗೂ ಇನ್ನಿತರ ದೊಡ್ಡ ದೊಡ್ಡ ಜನ ತಮ್ಮಲ್ಲಿರುವ ಕಪ್ಪು ಹಣವನ್ನುಪಯೋಗ ಮಾಡಲು ನಮ್ಮ ಬೆಂಗಳೂರಿನಿಂದ ನೆಲಮಂಗಲಕ್ಕೆ ಹೋಗುವ ದಾರಿಯಲ್ಲಿ ಕೆಲವು ರೀತಿಯಾದ ಫಾರಂಗಳನ್ನು ಮಾಡಿದ್ದಾರೆ. ನಾನು ಇದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಹಳ್ಳಿಗಳಲ್ಲಿರುವ ಬಡ ರೈತರಿಗೆ ಎರಡು ಕೇಜಿ ಜೋಳದ ಬೀಜ, ಎರಡು ಕೆ.ಜಿ. ಭತ್ತದ ಬೀಜ ಕೊಟ್ಟು ಅದನ್ನು ಅವನು ಉಪಯೋಗ ಮಾಡಿ ಅದರಿಂದೇನೂ ಬೆಳೆಯೇ ಬರಲಿಲ್ಲ ಎಂದರೆ ಇಲ್ಲಿರುವ ಅಧಿಕಾರಿಗಳು ಯಾವ ರೀತಿ ಪರೀಕ್ಷೆ ಮಾಡಿ ಬೀಜಗಳನ್ನು ಒದಗಿಸುತ್ತಿದ್ದಾರೆ ಎಂದು ಇಲ್ಲಿ ಕೇಳಬೇಕಾಗಿದೆ, ಇದು ಏನು ತೋರಿಸುತ್ತದೆ ಎಂದರೆ ರೈತನ ಶೋಷಣೆ ಹಂತಹಂತದಿಂದ ಹೀಗೆ ಆಗುತ್ತಿದೆ ಎನ್ನುವುದಕ್ಕಾಗಿ ಹೇಳುತ್ತಿದ್ದೇನೆ. ಇದು ಕಳೆದ ಒಂದು ವರ್ಷದಿಂದ ಆಗಿದೆ ಎಂದು ಹೇಳುತ್ತಿಲ್ಲ. ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಇಂತಹ ಒಂದು ಜಾಡ್ಯ ನಡೆದುಕೊಂಡು ಬರುತ್ತಿದೆ. It is doing racket in the whole country. ಇದನ್ನು ನಾನು ಈಗಿನ ಮಂತ್ರಿಮಂಡಲದ ಮೇಲೆ ಟೀಕೆ ಮಾಡಲು ಹೋಗುತ್ತಿದ್ದೇನೆ ಎಂದು ಭಾವಿಸಬಾರದು. ಕೆಲವು ಕಡೆ ಇರುವ ದೊಡ್ಡ ದೊಡ್ಡ ಮಾಲೀಕರು ಸೀಡ್ ಕಾರ್ಪೊರೇಷನ್ ಎಂದು ಮಾಡಿಕೊಂಡು ಇದರ ಮೂಲಕ ಕೊಡುವ ಬೀಜವನ್ನು ಸರಿಯಾಗಿ ಪರೀಕ್ಷೆ ಮಾಡಿ ಸರ್ಟಿಫಿಕೇಟು ಕೊಡುತ್ತಿದ್ದಾರೆಯೇ? ಇದರಲ್ಲಿ ಎಂತಹ ಅವ್ಯವಹಾರಗಳಾಗುತ್ತಿವೆ ಇವನ್ನೇನಾದರೂ ತನಿಖೆ ಮಾಡಿ ನೋಡಿದ್ದೀರಾ? ಸರಿಯಾಗಿ ಸ್ಕ್ರೂಟಿನಿ ಮಾಡಿ ನಿಮ್ಮಲ್ಲಿರುವ ಅಧಿಕಾರಿಗಳು ಒಳ್ಳೆಯ ಬೀಜವನ್ನು ಎರಡು ಮೂರು ಎಕರೆ ಮಾಡುವ ರೈತನಿಗೆ ಹಂಚುವ ವ್ಯವಸ್ಥೆ ಮಾಡಿದರೆ ಹೆಚ್ಚು ಉತ್ಪತ್ತಿ ಮಾಡಲು ಅವರಿಗೆ ಸಹಾಯವಾಗುತ್ತದೆ. ಆದರೆ ಅನೀತಿಯುತರಾದ ಅಧಿಕಾರಿಗಳ ಕೈಗೆ ಸಿಕ್ಕಿಕೊಂಡು ನರಳುವ ಹಣೆಬರಹ ರೈತರಿಗೆ ಬಂದು ಬಿಟ್ಟು ಹೀಗಾಗುತ್ತಿದೆ. ಇದನ್ನು ತಾವು ಸರಿಪಡಿಸಲು ಸಾಕಷ್ಟು ಶಕ್ತಿಯನ್ನು ಬೆಳೆಸಿಕೊಂಡು ಸ್ಟೇಟ್ ಲೆವೆಲ್‌ನಲ್ಲಿ ಒಂದು ಸೀಡ್ ಕಾರ್ಪೊರೇಷನ್ ಮಾಡಬೇಕು. ಆಗ್ರೋ ಇಂಡಸ್ಟ್ರೀಸ್ ಮೂಲಕ ಒಂದು ಸೀಡು ಕಾರ್ಪೊರೇಷನ್ ಆರಂಭ ಮಾಡುತ್ತೇವೆಂದು ಸರಕಾರದವರು ಹೇಳಿದುದನ್ನು ನಾನು ಕೆಲವು ದಿನಗಳ ಹಿಂದೆ ಪತ್ರಿಕೆಗಳಲ್ಲಿ ಓದಿದ್ದೆ. ಇದರ ಮೂಲಕ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ಅದನ್ನು ಇಲ್ಲಿ ತಿಳಿಸಬೇಕೆಂದು ಹೇಳುತ್ತೇನೆ. ರೈತರ ಹಣೆಬರಹವೇನು ಎನ್ನುವುದನ್ನು ನಾನೇನೂ ಹೊಸದಾಗಿ ಹೇಳಬೇಕಾಗಿಲ್ಲ. ಇಲ್ಲಿರುವ 216 ಸದಸ್ಯರುಗಳೂ ರೈತರ ಪರವಾಗಿಯೇ ಇಲ್ಲಿ ಬಂದಿರುವವರು ಮತ್ತು ರೈತರನ್ನು ಯಾವ ರೀತಿ ಉತ್ತಮ ಪಡಿಸಬಹುದು ಎಂದು ಇಲ್ಲಿ ಸರಕಾರಕ್ಕೆ ಹೇಳುತ್ತಲೇ ಇದ್ದಾರೆ. ರೈತ ಹಳ್ಳಿಗಾಡಿನಲ್ಲಿ ಒಬ್ಬ ದಡ್ಡ, ಇಂತಹ ರೈತರು ಸಂಘಟನೆಯಿಂದ ಅವನು ಮಾಡಿರತಕ್ಕ ವ್ಯವಹಾರಗಳನ್ನು ಮಾಡಿಕೊಳ್ಳುವ ಶಕ್ತಿ ಅವನಿಗೆ ಇಲ್ಲ, ಇದರ ಬಗ್ಗೆ ನಾನು ಗಂಟೆಗಟ್ಟಲೆ ವಾದಮಾಡಬೇಕು ಎಂದು

(ಶ್ರೀ ಎಚ್. ಡಿ. ದೇವೇಗೌಡ)

ನನಗೆ ಆಸೆ ಇಲ್ಲ, ಮತ್ತು ಇದಕ್ಕೆಲ್ಲಾ ಶ್ರೀಮಾನ್ ಪಾಟೀಲರವರೇ ಜವಾಬುದಾರರು ಎಂದು ಹೇಳಲು ತಯಾರಿಲ್ಲ. ಇದೊಂದು ರೀತಿಯ ಜಾಡ್ಯ ರೈತರಲ್ಲಿ ಬರುತ್ತಿದೆ. ಇಲ್ಲಿರುವ ಅಧಿಕಾರಿಗಳು ಕೂಡ ಸೀಡು ಕಾರ್ಪೊರೇಷನ್ ಮೂಲಕ ಕೊಟ್ಟ ಬೀಜಗಳಿಂದ ಉತ್ಪತ್ತಿ ನೂರಕ್ಕೆ ನೂರು ಹೆಚ್ಚಾಗಿದೆ ಇಲ್ಲವೇ ಎಂಬತ್ತರಷ್ಟು ಅಥವಾ ಅರವತ್ತರಷ್ಟು ಹೆಚ್ಚಾಗಿದೆ ಎಂದು ಎಲ್ಲೂ ಹೇಳಲಿಲ್ಲ. ಇಂತಹ ಅವ್ಯವಹಾರಗಳ ಬಗ್ಗೆ ಹೆಚ್ಚು ಹೇಳಲು ಹೋಗುವುದಿಲ್ಲ. ಇನ್ನು ಆಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಕೂಡ ಅವ್ಯವಹಾರಗಳು ಆಗುತ್ತಿವೆ ಎಂದು ಕೇಳುತ್ತೇವೆ. ಇದರ ಬಗ್ಗೆ ಸರಕಾರ ವಿವರಗಳನ್ನು ತಿಳಿಸಬೇಕೆಂದು ಕೇಳುತ್ತೇನೆ.

ಇನ್ನು ಫರ್ಟಿಲೈಸರು ಬಗ್ಗೆ ಹೇಳುವಾಗ ಮಾನ್ಯ ಮಂತ್ರಿಗಳು ಹಿಂದೆ ಇಲ್ಲಿ ಒಂದು ಎಕ್‌ಕ್ಯೂಸು ಸಿಕ್ಕಿತ್ತು ಎಂದು ಹೇಳಿದರು. ನಮ್ಮ ರಾಜ್ಯದಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆ ಇದ್ದಾಗ ನಮ್ಮ ರಾಜ್ಯಕ್ಕೆ ಬೇಕಾಗುವಷ್ಟು ಗೊಬ್ಬರವನ್ನು ಆಗ ಅಧಿಕಾರಿಗಳು ಸಕಾಲದಲ್ಲಿ ಇಂಡೆಂಟು ಮಾಡಲಿಲ್ಲ ಎಂದು ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಕೃಷಿ ಮಂತ್ರಿಗಳೂ ವಾದ ಮಾಡಿ ಸಮರ್ಥನೆ ಮಾಡಿಕೊಂಡರು. ಆದುದರಿಂದ ಈಗಲಾದರೂ ನಮ್ಮ ರೈತರುಗಳಿಗಾಗಿ ಇದುವರೆಗೆ ಎಷ್ಟು ಪೂರೈಕೆ ಮಾಡಿದ್ದಾರೆ ಎನ್ನುವ ವಿವರಗಳನ್ನು ತಿಳಿಸಬೇಕೆಂದು ಅವರಲ್ಲಿ ಕೇಳುತ್ತೇನೆ. ಇನ್ನು ಗೊಬ್ಬರದ ವಿತರಣೆ ಬಗ್ಗೆ ಅನೇಕ ಲೋಪದೋಷಗಳಾಗುತ್ತಿವೆ. ಶೋಷಣೆಗೆ ಒಳಗಾಗಿರತಕ್ಕ ರೈತಾಪಿ ಜನರು ಇಂದು ನಮ್ಮ ರಾಜ್ಯದಲ್ಲಿ ಶೇಕಡಾ 70ರಷ್ಟು ಇದ್ದಾರೆ. ಇವರ ಅಭಿವೃದ್ಧಿ ಕಡೆ ಹೆಚ್ಚು ಗಮನ ಇಲ್ಲ. ಆದರೆ ಬೇರೆ ಕಡೆ ಇರುವ ಎನ್.ಜಿ.ಒ.ಗಳು ಹಾಗೂ ನಿಮ್ಮ ಸೆಕ್ರೆಟರಿಗಳು ಹೆಚ್ಚಾಗಿ ಬೇಕು ಎಂದು ನೇಮಕ ಮಾಡಿ ಅವರು ಕೇಳಿ ಕೇಳಿದಾಗಲೆಲ್ಲಾ ಅವರ ಸಂಬಳವನ್ನು ಹೆಚ್ಚು ಮಾಡುತ್ತಾ ಹೋಗುತ್ತೀರಿ. ಇಂದು ರಾಜ್ಯದಲ್ಲಿ ಇರುವ ನೌಕರರುಗಳ ಜೀವನ ಮಟ್ಟವೇನು ಹಳ್ಳಿಗಾಡಿನಲ್ಲಿರುವ ರೈತರ ಮಟ್ಟವೇನು ಇವನ್ನು ನಾವು ವಿಚಾರ ಮಾಡಬೇಕು, ತಾಲ್ಲೂಕಾಫೀಸಿನಲ್ಲಿರುವ ಗುಮಾಸ್ತರುಗಳ ಸಂಬಳ ಹೆಚ್ಚು ಮಾಡಬೇಕೆಂದು ಮಾಡುತ್ತೀರಿ, ಇಂದು ನಮ್ಮ ರಾಜ್ಯದಲ್ಲಿ ಶೇಕಡಾ ಎರಡೂವರೆಯಷ್ಟು ಸರಕಾರದ ಅಧಿಕಾರಿಗಳಿದ್ದಾರೆ. ಆದರೆ ಶೇಕಡ 70ರಷ್ಟು ಇರುವ ರೈತರ ಪ್ರಶ್ನೆ ಇಲ್ಲಿ ಬಂದಾಗ, ಈ ದಡ್ಡರ ಪ್ರಶ್ನೆ ಇಲ್ಲಿ ಬಂದಾಗ ಅವರ ಬಗ್ಗೆ ನಮಗೆ ಸಾಕಷ್ಟು ಅನುಕಂಪವಿರುವುದಿಲ್ಲ.

ಇನ್ನು ಗೊಬ್ಬರದ ಬಗ್ಗೆ ಹೇಳುವುದಾದರೆ, ಸಾಕಷ್ಟು ಗೊಬ್ಬರ ಇಂದು ರೈತರಿಗೆ ಸಿಗುತ್ತಿಲ್ಲ, ಈ ಕಾರಣದಿಂದ ರೈತರು ಬ್ಲಾಕ್ ಮಾರ್ಕೆಟ್ಟಿನಲ್ಲಿ ಕೊಳ್ಳಬೇಕಾಗಿ ಬಂದಿದೆ. ಇದರ ಜೊತೆಗೆ ಅಡಲ್ಟ್ರೇಷನ್ ಬೇರೆ. ಈ ದಿಶೆಯಲ್ಲಿ ಯಾವ ಕ್ರಮ ಕೈಕೊಂಡಿದ್ದೀರಿ ಎಂದು ಕೇಳುತ್ತೇನೆ.

ಇನ್ನು ಗೊಬ್ಬರದ ಹಂಚಿಕೆಯ ಬಗ್ಗೆ ಹೇಳುವುದಾದರೆ, ರಾಜ್ಯ ಸರ್ಕಾರದವರಿಗೆ ಪೂಲ್ ಒಳಗೆ ಮತ್ತು ಪೂಲ್ ಹೊರಗೆ ಎಷ್ಟು ಪ್ರಮಾಣದಲ್ಲಿ ಗೊಬ್ಬರ ಹಂಚಿಕೆ ಮಾಡಲು ಸಿಗುತ್ತದೆ ಎಂಬ ಲೆಕ್ಕವನ್ನು ಕೊಡಬೇಕು. ಈಗ ಗೊಬ್ಬರವನ್ನು ಹಂಚಿಕೆ ಮಾಡಲು ಟ್ರೈಟೈರ್ ಸಿಸ್ಟಮನ್ನು ಜಾರಿಗೆ ತಂದಿದ್ದೀರಿ. ಇಂದು ಈ ಗೊಬ್ಬರವನ್ನು ಮಾರಾಟ ಮಾಡುವ ಸಂಸ್ಥೆಗಳು ಏನಿವೆ, ಇಲ್ಲಿಯ ಡೈರೆಕ್ಟರ್ಸ್ ಸ್ಥಾನಕ್ಕೆ ಆರಿಸಿ ಬರಲು ಚುನಾವಣೆಯಲ್ಲಿ ಅಸೆಂಬ್ಲಿ ಚುನಾವಣೆಗೆ ಖರ್ಚು ಮಾಡುವುದಕ್ಕಿಂತಲೂ ಜಾಸ್ತಿ ದುಡ್ಡನ್ನು ಖರ್ಚು ಮಾಡುತ್ತಿದ್ದಾರೆ. 50 ಸಾವಿರದಿಂದ 70 ಸಾವಿರದವರೆಗೆ ಒಬ್ಬೊಬ್ಬರು ಖರ್ಚು ಮಾಡುತ್ತಾರೆಂದರೆ, ಅದರ ಪರಿಣಾಮ ಏನಾಗುತ್ತದೆಂಬುದನ್ನು ತಾವು ನೋಡಬೇಕು. The ultimate result is this poor man has to suffer. ಈ ಮಾತನ್ನು ನಾನು ಉತ್ಪ್ರೇಕ್ಷೆಯಿಂದ ಹೇಳುತ್ತಿಲ್ಲ. ಹಿಂದಿನ ಕೈಗಾರಿಕಾ ಮಂತ್ರಿಗಳಾಗಿದ್ದ ಶ್ರೀಮಾನ್ ಮಲ್ಲಪ್ಪನವರೇ it is a grazing field ಎಂದು ಹೇಳಿದರು. ಆ ಮಾತನ್ನು ಇಂದು ನೆನೆಸಿಕೊಳ್ಳುತ್ತಿದ್ದೇನೆ. ಮುಖ್ಯವಾಗಿ ಇಲ್ಲಿ ಮೇಯಲಿಕ್ಕೆ ಸಾಕಷ್ಟು ಅವಕಾಶವಿದೆ.

ಶ್ರೀ ಕೆ. ಎಚ್. ಪಾಟೀಲ್.—ತಾವು ಈ ವಿಚಾರವನ್ನು ಹೇಳುವಾಗ, ಯಾವ ಮಾರ್ಗದಲ್ಲಿ ಗೊಬ್ಬರವನ್ನು ಹಂಚಿಕೆ ಮಾಡಿದರೆ ಸರಿಯಾಗುತ್ತದೆಂಬುದನ್ನು ಹೇಳಿದರೆ, ನಾನು ಅವನ್ನು ವಿಚಾರ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಇಷ್ಟೊತ್ತು ನಾನು ಇಷ್ಟು ಮಾತ್ರ ಹೇಳುತ್ತೇನೆ. ಇಂದು ಗೊಬ್ಬರವನ್ನು ಹಂಚುವ ಬಗ್ಗೆ ಟ್ರಿ-ಟೈರ್ ಸಿಸ್ಟಮನ್ನು ಜಾರಿಗೆ ತಂದಿದ್ದೀರಿ. ಅದಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಕಮಿಟಿಗಳನ್ನು ರಚನೆ ಮಾಡಿದ್ದೀರಿ. ಅವರು ತಮ್ಮ ಜಿಲ್ಲೆಗೆ ಎಷ್ಟು ಗೊಬ್ಬರ

ಬೇಕೆಂದು ಹೇಳುತ್ತಾರೋ ಅಷ್ಟು ಪ್ರಮಾಣವನ್ನು ತಾಲ್ಲೂಕ್ ವಾರಾಗಿ ಹಂಚುವ ವ್ಯವಸ್ಥೆ ಇಟ್ಟುಕೊಂಡಿದ್ದೀರಿ. ತಾಲ್ಲೂಕು ಮಟ್ಟದಲ್ಲಿ ಹಂಚಿಕೆ ಮಾಡುವ ವಿಚಾರದಲ್ಲಿ ಗ್ರಾಮಸೇವಕರಿಗೆ ಒಂದು ಹಂತದಲ್ಲಿ ಅಧಿಕಾರ ಕೊಟ್ಟಿದ್ದೀರಿ, ಬಿ.ಡಿ.ಓ. ಅವರಿಗೆ ಇನ್ನೊಂದು ಹಂತದಲ್ಲಿ ಅಧಿಕಾರ ಕೊಟ್ಟಿದ್ದೀರಿ. ಈ ರೀತಿಯ ವ್ಯವಸ್ಥೆ ಇದ್ದರೂ ಸಹ ಗೊಬ್ಬರ ಜೆನುಯಿನ್ ರೈತರಿಗೆ ಹೋದರೂ ಹೋಗಬಹುದು ಅಥವಾ ಬ್ಲಾಕ್ ಮಾರ್ಕೆಟ್‌ಗೆ ಹೋದರೂ ಹೋಗಬಹುದು.

SrI K. H. PATIL.—I am giving you an open mind. Last year is over. This year we will have to distribute the fertilizer in an equitable manner. If the Hon. Leader of the Opposition and the Hon. Members of that side and this side suggest me the ways and means of distribution, I can have an effective control so that I can stop this smuggling.

ಶ್ರೀ ಎಚ್. ಡಿ. ದೇವೇಗೌಡ.—ಈಗ ಬಿ.ಡಿ.ಓ. ಮತ್ತು ಗ್ರಾಮಸೇವಕರ ಮೂಲಕ ಗೊಬ್ಬರದ ಹಂಚಿಕೆಯಾಗುವ ಕ್ರಮ ಇದೆ, ಇದರ ಜೊತೆಗೆ ಅಂದರೆ ಇವರಿಗೂ ಮೇಲ್ಪಟ್ಟ ಅಧಿಕಾರಿಗಳಿಂದ ಕೆಲವರಿಗೆ ಕೊಡುವ ಪರ್ಮಿಟ್ ಇದೆ ಅದರ ಆಧಾರದ ಮೇಲೆ ಸೆಂಟ್ರಲ್ ಗೋಡಾನ್‌ನಿಂದ ಗೊಬ್ಬರವನ್ನು ಪಡೆಯುವುದಕ್ಕೆ ಅವಕಾಶವಿದೆ, ಈ ರೀತಿ ಪಡೆದವರು ಅದನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿಕೊಳ್ಳುವ ಅವಕಾಶವಿರುವುದರಿಂದ, ಈ ರೀತಿ ಪರ್ಮಿಟ್ ಕೊಡುವುದನ್ನು ತೆಗೆಯಬೇಕು. ಈಗ ಪ್ರಾಥಮಿಕ ಸಹಕಾರ ಸಂಘಗಳಿಗೆ ಗೊಬ್ಬರವನ್ನು ಸೆಂಟ್ರಲ್ ಗೋಡನ್ ನಿಂದ ರಿಲೀಜ್ ಮಾಡುತ್ತಾರೆ. ಈ ರೀತಿ ರಿಲೀಜ್ ಮಾಡಿದಮೇಲೆ ತಮ್ಮ ಇಲಾಖೆಯ ಒಬ್ಬರು ಅಧಿಕಾರಿಗಳನ್ನು ಕಳುಹಿಸಿ ಸರಿಯಾಗಿ ಹಂಚಿಕೆಯಾಗುವಂತೆ ಏರ್ಪಾಡು ಮಾಡಬೇಕು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಅನೇಕ ಸಂದರ್ಭಗಳಲ್ಲಿ ಈ ರೀತಿ ಬೆಂಗಳೂರಿಗೆ ಬಂದು ಪಡೆದಂಥ ಗೊಬ್ಬರವನ್ನು ಇಲ್ಲಿಯೇ ಮಾರಿಕೊಂಡು ಹೋದ ಉದಾಹರಣೆಗಳು ಇವೆ. ಕಾರಣದಿಂದ ಗೊಬ್ಬರದ ಹಂಚಿಕೆಯ ಬಗ್ಗೆ ಎಷ್ಟು ಸಾಧ್ಯವೋ ಅಷ್ಟು ಚೆಕ್ ಮಾಡಲು ವಿವಿಧ ಹಂತಗಳಲ್ಲಿ ವ್ಯವಸ್ಥೆ ಮಾಡಬೇಕಾಗುತ್ತದೆ. ಈ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ, ಗೊಬ್ಬರದ ಅಲಾಟ್ ಮಾಡಿದ ಮೇಲೆ ಇಂತಿಂಥ ಸೊಸೈಟಿಗಳಿಗೆ ಇಷ್ಟಿಷ್ಟು ಪ್ರಮಾಣದಲ್ಲಿ ಅಲಾಟ್ ಮಾಡಲಾಗಿದೆ ಎಂಬ ಬಗ್ಗೆ ಒಂದೊಂದು ಕಾಪಿಯನ್ನು ಸ್ಥಳೀಯ ಶಾಸಕರುಗಳಿಗೆ, ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟರಿಗೆ, ಪಂಚಾಯಿತಿ ಚೇರ್‌ಮನ್ ಅವರಿಗೆ ಕಳುಹಿಸಿಕೊಡಬೇಕು. ಈ ರೀತಿ ಕಳುಹಿಸಿಕೊಟ್ಟರೆ, ಸೊಸೈಟಿಯವರು ಏನಾದರು ಹಂಚಿಕೆಯನ್ನು ಸರಿಯಾಗಿ ಮಾಡದಿದ್ದರೆ, ಸ್ಥಳೀಯ ಮುಖಂಡರುಗಳು ಅವರನ್ನು ಕೇಳುವುದಕ್ಕೆ ಒಂದು ಅವಕಾಶ ಇರುತ್ತದೆ ಮತ್ತು ಸರಿಯಾಗಿ ಹಂಚಿಕೆ ಮಾಡದಿದ್ದರೆ ಅವರ ಮುಖಕ್ಕೆ ಉಗುಳುತ್ತಾರೆ. ಒಟ್ಟಿನಲ್ಲಿ ಈಗ ಗೊಬ್ಬರದ ಹಂಚಿಕೆಯಲ್ಲಿ ಆಗುತ್ತಿರುವ ಅವ್ಯವಹಾರಗಳನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಬೇಕು. ಇಂದು ನಮ್ಮ ರಾಜ್ಯಕ್ಕೆ ಪೂಲ್ ಒಳಗೆ ಮತ್ತು ಹೊರಗೆ ಎಷ್ಟು ಗೊಬ್ಬರ ಬರುತ್ತಿದೆ ಎಂಬ ಬಗ್ಗೆ ಅಂಕಿಅಂಶಗಳನ್ನು ಮಾನ್ಯ ಮಂತ್ರಿಗಳು ಕೊಡಬೇಕು. ಇಂದು ಗೊಬ್ಬರದ ಉತ್ಪಾದನೆಯಲ್ಲಿ ಫ್ಯಾಕ್ಟ್‌ನವರು ಮತ್ತು ಫರ್ಟಿಲೈಸರ್ಸ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಬಂಡವಾಳವನ್ನು ಹೂಡಿದ್ದಾರೆ. ಈ ಕಾರಣದಿಂದ ಈ ಗೊಬ್ಬರವನ್ನು ಹಂಚಿಕೆ ಮಾಡುವಲ್ಲಿ ದೇಶದಾದ್ಯಂತ ಒಂದು ಯೂನಿಫಾರಮ್ ಪಾಲಿಸಿಯನ್ನು ಜಾರಿಗೆ ತಂದರೆ ಕಳ್ಳ ವ್ಯವಹಾರ ನಡೆಯುವುದು ತಪ್ಪುತ್ತದೆ. ಇಂದು ಫ್ಯಾಕ್ಟ್‌ನ ಅಧಿಕಾರಿಯೊಬ್ಬರು ಬಂದರೆ ಅವರಿಗೆ ತಿನ್ನಿಸುವುದಕ್ಕೆ ಮತ್ತು ಕುಡಿಸುವುದಕ್ಕೆ ಬಹಳಷ್ಟು ಹಣವನ್ನು ಖರ್ಚು ಮಾಡುತ್ತಾರೆ. ಇದು ಯಾರ ದುಡ್ಡು ಎಂದು ಕೇಳಬೇಕಾಗುತ್ತದೆ. ಈ ಒಂದು ಅವ್ಯವಹಾರವನ್ನು ತಡೆಗಟ್ಟುವುದಕ್ಕೆ ಮಾನ್ಯ ಮಂತ್ರಿಗಳು ಕೇಂದ್ರದ ಕೃಷಿ ಸಚಿವರ ಮೇಲೆ ಒತ್ತಡ ತರಬೇಕು. ಇಲ್ಲದೆ ಹೋದರೆ ರೈತರಿಗೆ ಗೊಬ್ಬರ ಸಿಕ್ಕುವುದು ಕಷ್ಟವಾಗುತ್ತದೆ. ಇಂದು ಸಕ್ಕರೆಯ ವ್ಯವಹಾರದ ನೀತಿ ಯಾವ ರೀತಿ ಇದೆ ಎಂಬುದು ಎಲ್ಲರಿಗೂ ಗೊತ್ತಿದೆ. 70 ಪರ್ಸೆಂಟ್‌ವರೆಗೆ ಕಾರ್ಡ್ ಮೂಲಕ ಸಾರ್ವಜನಿಕರಿಗೆ ಹಂಚಲು, 30 ಪರ್ಸೆಂಟ್‌ರವರೆಗೆ ಬಹಿರಂಗ ಮಾರುಕಟ್ಟೆಯಲ್ಲಿ ಮಾರಲು ಅವಕಾಶವನ್ನು ಕೇಂದ್ರದವರು ಕೊಟ್ಟಿರುವುದರಿಂದ, ಇಂದು ಬಹಿರಂಗ ಮಾರುಕಟ್ಟೆಯಲ್ಲಿ ಒಂದು ಕೆ.ಜಿ. ಸಕ್ಕರೆಯ ಬೆಲೆ 4 ರೂಪಾಯಿಗಳವರೆಗೆ ಹೋಗಿದೆ. ಅದೇ ಲೆವಿ ಸಕ್ಕರೆಯ ಬೆಲೆ 2–30 ರೂಪಾಯಿ ಇದೆ. ಈ ಒಂದು ದೋಷವನ್ನು ಮೊದಲು ಹೋಗಲಾಡಿಸಬೇಕು. ಅದೇ ರೀತಿ ಗೊಬ್ಬರವನ್ನು ಉತ್ಪಾದನೆ ಮಾಡುವ ಸಂಸ್ಥೆಗಳನ್ನು ಕೇಂದ್ರದ ಹತೋಟಿಯಲ್ಲಿ ತರುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ನೋಡಬೇಕು. ಇದು ರಾಜ್ಯಸರ್ಕಾರದ ಕೈಯಲ್ಲಿ ಇಲ್ಲದಿರಬಹುದು. ಆದರೂ ಕೇಂದ್ರಸರ್ಕಾರಕ್ಕೆ ತಿಳಿಸುವುದರ ಮೂಲಕವಾದರೂ ಈ

(ಶ್ರೀ ಎಚ್. ಡಿ. ದೇವೇಗೌಡ)

ಒಂದು ಅವ್ಯವಹಾರವನ್ನು ತಡೆಗಟ್ಟುವುದಕ್ಕೆ ಸಾಧ್ಯವಿಲ್ಲವೇ ಎಂದು ಕೇಳುತ್ತೇನೆ. ದಯವಿಟ್ಟು ಈಗಿನ ಪರಿಸ್ಥಿತಿಯನ್ನು ಮಾತ್ರ ಮುಂದುವರಿಸಿಕೊಂಡು ಹೋಗುವುದು ಬೇಡ ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಗೊಬ್ಬರದ ದುರ್ವಿನಿಯೋಗವನ್ನು ತಡೆಗಟ್ಟಲು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳುತ್ತೇನೆ. ಇದಕ್ಕೆ ಕಾರಣರಾದವರ ಮೇಲೆ ಎಷ್ಟು ಕೇಸ್‌ಗಳನ್ನು ಹಾಕಿದ್ದೀರಿ ಎಂಬುದನ್ನು ತಿಳಿಸಬೇಕು. ಇಂದು ರಾಜ್ಯದ ಅನೇಕ ಭಾಗಗಳಲ್ಲಿ ಗೊಬ್ಬರ ಎಂದು ಮರಳನ್ನು ಮತ್ತು ಜೇಡಿಮಣ್ಣನ್ನು ರೈತರಿಗೆ ಒದಗಿಸಲಾಗುತ್ತಿದೆ. ಈ ರೀತಿ ರೈತರನ್ನು ಎಷ್ಟು ಕಡೆಯಿಂದ ಶೋಷಣೆ ಮಾಡುವುದು ಎಂದು ಕೇಳುತ್ತೇನೆ. ಇಂದು ಪ್ರಾರಬ್ಧ ಕರ್ಮದಿಂದ ರೈತನಾಗಿ ಹುಟ್ಟಬೇಕಾಗಿದೆ. ಈ ದುರ್ವಿನಿಯೋಗವನ್ನು ಪರೀಕ್ಷೆ ಮಾಡಿ ನೋಡಲು ತಾಲ್ಲೂಕ್ ಮಟ್ಟದಲ್ಲಿ ಏನಾದರೂ ವ್ಯವಸ್ಥೆ ಇರಬೇಕು. ಇಲ್ಲದಿದ್ದರೆ ರೈತನು ಬದುಕುವುದಕ್ಕೆ ಸಾಧ್ಯವಿಲ್ಲ. ನಾನು ಮೊದಲೇ ಹೇಳಿದಂತೆ ಪೂರ್ವಜನ್ಮದ ಪ್ರಾರಬ್ಧ ಕರ್ಮದಿಂದ ಇಂದು ರೈತನಾಗಿ ಹುಟ್ಟಿರುತ್ತಾನೆ. ಅವನ ಶೋಷಣೆ ಇಂದು ನಾನಾ ಹಂತಗಳಲ್ಲಿ ನಡೆಯುತ್ತಿದೆ. ತಾಲ್ಲೂಕ್ ಕಛೇರಿಯಿಂದ ಹಿಡಿದು ನಾನಾ ಹಂತಗಳಲ್ಲಿ ಇಂದು ಅವನ ಶೋಷಣೆ ನಡೆಯುತ್ತಿದೆ. ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ರೈತನಾದವನು ಗೊಬ್ಬರ ಪಡೆಯಬೇಕಾದರೆ ಅಲ್ಲಿ ಅವನಿಗೆ ಮಾಡುವ ಶೋಷಣೆಯನ್ನು ನೋಡಿದ್ದೇ ಆದರೆ ಹೆಜ್ಜೆಹೆಜ್ಜೆಗೂ ಅವನ ರಕ್ತವನ್ನು ಹೀರುತ್ತಿರುತ್ತಾರೆ. ಈ ಒಂದು ರೈತನ ಶೋಷಣೆ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಈ ದಡ್ಡನ ರಕ್ತವನ್ನು ಹೀರಲು ಇಂದು ಅನೇಕ ಹಂತಗಳಲ್ಲಿ ರಣಹದ್ದುಗಳ ಹಾಗೆ ಕಾದುಕೊಂಡಿದ್ದಾರೆ. ರೈತ ಬೆಳೆದ ಮಾಲನ್ನು ಮಾರುವುದಕ್ಕೆ ಹೋದಾಗಲೂ ಸಹ ಇದೇ ರೀತಿಯ ಶೋಷಣೆ ಮಾಡುತ್ತಾರೆ. ಈ ರೀತಿಯಾದರೆ ಈ ಜೀವನವಾದರೂ ಏತಕ್ಕೆ ಬೇಕು ಎಂದು ಕೇಳುತ್ತೇನೆ. ನನ್ನ ಮನೆಯಲ್ಲಿ 40 ಜನರಿದ್ದೇವೆ. ನನ್ನ ಚಿಕ್ಕಪ್ಪನಿಗೆ ಮತ್ತು ನಮ್ಮ ತಂದೆಗೆ ಸೇರಿದಂತೆ 55 ಎಕರೆ ಜಮೀನು ಇದೆ. ಈ 55 ಎಕರೆಯಲ್ಲಿ ಸಾಗುವಳಿ ಮಾಡಿ ಜೀವನ ಮಾಡುವುದಕ್ಕಿಂತ ನಮಗೆಲ್ಲರಿಗೂ ವಿಧಾನಸೌಧದಲ್ಲಿ ಸೆಕ್ರೆಟರಿ ಕೆಲಸ ಬೇಡ, ಚೀಫ್-ಸೆಕ್ರೆಟರಿ ಕೆಲಸ ಬೇಡ, ಕೊನೆಗೆ ಗುಡಿಸುವ ಕೆಲಸ ಕೊಟ್ಟರೂ ಸಹ ನಾವೆಲ್ಲರೂ ಆರಾಮವಾಗಿರಬಹುದು. I will go to the extent of telling you that so far as this proposition is concerned, it is a worst proposition in this country and a day is not far off when this section of the Society may outburst. ಇಂದು ನಮ್ಮ ರಾಜ್ಯದಲ್ಲಿ ಶೇಕಡ 98 ಪರ್ಸೆಂಟ್ ವರೆಗೆ 5 ರಿಂದ ಹತ್ತು ಎಕರೆ ಜಮೀನು ಉಳ್ಳ ರೈತರು ಇದ್ದಾರೆ, ಅವರ ಪರಿಸ್ಥಿತಿ ಏನಾಗಿದೆ ಎಂದರೆ, ಅವರುಗಳಲ್ಲಿ ಒಗ್ಗಟ್ಟು ಇಲ್ಲವಾಗಿದೆ, ಸಂಘಸಂಸ್ಥೆಗಳನ್ನು ರಚಿಸಿಕೊಳ್ಳುವ ಶಕ್ತಿ ಇಲ್ಲವಾಗಿದೆ, ನ್ಯಾಯವಾಗಿ ಹೋರಾಟ ಮಾಡುವ ಶಕ್ತಿ ಇಲ್ಲವಾಗಿದೆ, ಇದೇ ಕಾರಣದಿಂದ ಬಹಳ ಕಾಲದವರೆಗೆ ಇವರನ್ನು ಶೋಷಣೆ ಮಾಡುವುದು ಬೇಡ.

I would like to ask the Hon. Minister how many cases you have booked. You must pool up your finance, and I would further like to suggest that so far as distribution is concerned testing labouratories are to be established to know to what extent the adulteration is made. What is being done now is not encouraging, ಈ ಅಡಲ್ಟರೇಷನ್ ಪತ್ತೆ ಹಚ್ಚಬೇಕಾದರೆ ನಿಮ್ಮಲ್ಲಿ ಸಾಕಷ್ಟು ಲ್ಯಾಬೋರೇಟರಿ ಇಲ್ಲ. ಆದ್ದರಿಂದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಟೆಸ್ಟಿಂಗ್ ಲ್ಯಾಬೋರೇಟರಿ ಹಾಕಬೇಕು. ದಯವಿಟ್ಟು ಫರ್ಟಿಲೈಜರ್‌ನಲ್ಲಿ ನಡೆಯುತಕ್ಕ ಅವ್ಯವಹಾರವನ್ನು ಮತ್ತು ಅಕ್ರಮ ಬೆರಕೆಯನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಬೇಕು. ಇದರಲ್ಲಿ ನಡೆಯುತಕ್ಕ 8 ಕೋಟಿ ರೂಪಾಯಿಗಳ ವ್ಯವಹಾರ ಏನಿದೆ ಅವರಲ್ಲಿ 4 ಕೋಟಿ ರೂಪಾಯಿಗಳ ಹಿಂದಿನ ವ್ಯವಹಾರ ಕ್ಯಾರಿ ಓವರ್ ಆಗುತ್ತಿದೆ. ಇದು ಈಗ ಇರುವ ಡೈರೆಕ್ಟರಿಗೆ ಸಂಬಂಧ ಇದೆ ಎಂದು ನಾನು ಹೇಳುವುದಿಲ್ಲ. 8 ಕೋಟಿ ರೂಪಾಯಿಗಳ ವ್ಯವಹಾರ ಏನಿದೆ ಇದರಲ್ಲಿ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗೆ ಸಂಬಂಧಪಟ್ಟ ಹಾಗೆ 4 ಕೋಟಿ ರೂಪಾಯಿಗಳ ಡ್ಯೂಸ್ ಇದೆ. 4 ಕೋಟಿ ರೂಪಾಯಿಗಳು ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ಹಾಗೆ ಡ್ಯೂಸ್ ಇದೆ. 4 ಕೋಟಿ ರೂಪಾಯಿಗಳ ಗೊಬ್ಬರವನ್ನು ಮಾರಾಟ ಮಾಡಿರುವುದು ಏನಿದೆ ಅದಕ್ಕೆ ಸರಿಯಾದ

ಲೆಕ್ಕಪತ್ರವಿಲ್ಲ. 8 ಕೋಟಿ ರೂಪಾಯಿಗಳ ಗೊಬ್ಬರದ ವ್ಯವಹಾರ ಏನಿದೆ ಇದು ಸರ್ಕಾರದ ಡ್ಯೂಸ್. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ಮತ್ತು ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ಹಾಗೆ ಏನು ಗೊಬ್ಬರದ ವ್ಯವಹಾರ ನಡೆದಿದೆ. ಈ ಬಗ್ಗೆ ಸರ್ಕಾರದವರು ಒಂದು ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ತಿಳಿಸುತ್ತೇನೆ. ಇನ್‌ಸೆಕ್ಟಿಸೈಡ್ಸ್‌ಗೆ, ಪೆಸ್ಟಿಸೈಡ್ಸ್‌ಗೆ 10 ಪರ್ಸೆಂಟ್ 15 ಪರ್ಸೆಂಟ್, ಕಮಿಷನ್ ಕೊಡುತ್ತೇವೆ ಎಂದು ಹಂಟಿಂಗ್ ಮಾಡುತ್ತಾರೆ. They will be hunting after this Amildars. I will go a step further to say that handling of this Department is not up to mark. I want some radical changes in this Department. ಈ ಇಲಾಖೆಯಲ್ಲಿ ದುರ್ದೈವದಿಂದ ಐ.ಎ.ಎಸ್. ಆಫೀಸರು ಡೈರೆಕ್ಟರಾಗಿದ್ದಾರೆ. ಆದರೆ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಇಲಾಖೆಯಲ್ಲಿ ಕೆಲಸ ಕಾರ್ಯಗಳು ಆಗಿಲ್ಲ. ಈ ಇಲಾಖೆಯಲ್ಲಿ ಪರಿಸ್ಥಿತಿಯನ್ನು ಉತ್ತಮ ಪಡಿಸುವುದಕ್ಕೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಿ ಅದನ್ನು ನಾನು ಸ್ವಾಗತಿಸುತ್ತೇನೆ. ಹೋದವರ್ಷ ಸ್ಪ್ರೇಯಿಂಗ್ ಏತಕ್ಕೆ ನಿಲ್ಲಿಸಿದಿರಿ ? 1972-73 ನೇ ಇಸವಿಯಲ್ಲಿ ಈ ಬಾಬಿಗೆ ಹಣವನ್ನು ಒದಗಿಸಿದ್ದೀರಾ ಹೇಗೆ ? I want to know it. Government says there is some efficiency over this work. I want a categorical reply from the Hon. Minister. The Minister has passed orders for the early survey. ಬಿರಾ ಮತ್ತು ಸೀಬಾ ಕಂಪೆನಿಯವರು 15 ಪರ್ಸೆಂಟ್ ಕಮಿಷನ್ ಕೊಡುತ್ತೇವೆ ಎಂದು ಹೇಳಿದ್ದಾರೆ. ಆ ಅಗ್ರಿಮೆಂಟಿಗೆ ಸೈನ್ ಮಾಡಿದ್ದಾರೆ. ಆ ಮೇಲೆ 5 ಪರ್ಸೆಂಟ್ ರೆಡ್ಯೂಜ್ ಮಾಡಿದ್ದಾರೆ. ಗೊಬ್ಬರದಂತೆ ಇನ್‌ಸೆಕ್ಟಿಸೈಡ್ಸ್ ವ್ಯಾಪಾರದಲ್ಲಿಯೂ ಅವ್ಯವಹಾರ ನಡೆದಿದೆ. ಆ ಮೇಲೆ ವಿಮಾನದ ಮೂಲಕ ಬೆಳೆಗಳಿಗೆ ಔಷಧಿಯನ್ನು ಸ್ಪ್ರೇ ಮಾಡುವ ಯೋಜನೆಯಲ್ಲಿಯೂ ಅವ್ಯವಹಾರ ನಡೆದಿದೆ. ಇದನ್ನು ದಯ ಮಾಡಿ ತಿಳಿಸಬೇಕು ಎಂದು ನಾನು ಹೇಳುತ್ತೇನೆ.

ರೈತನಿಗೆ ನಿರೀಕ್ಷಿಸಿದಷ್ಟು ಸಾಲದ ಸೌಲಭ್ಯ ಸಿಕ್ಕಿಲ್ಲ. ಅವನಿಗೆ ಸಿಕ್ಕಬೇಕಾದ ಸೌಲಭ್ಯಗಳು ಸರಿಯಾಗಿ ಸಿಕ್ಕಿಲ್ಲ. ರೈತನಿಗೆ ಯಾವಕಾಲದಲ್ಲಿ ಹಣ ಬೇಕೋ ಆ ಕಾಲದಲ್ಲಿ ಅದನ್ನು ಒದಗಿಸಿಲ್ಲ. ರೈತನಿಂದ ಸಾಲವನ್ನು ವಸೂಲು ಮಾಡುವುದಕ್ಕೆ ಉಗ್ರಕ್ರಮವನ್ನು ತೆಗೆದುಕೊಂಡು ವಸೂಲು ಮಾಡಿ. ಆದರೆ ಅವನಿಗೆ ಸಕಾಲದಲ್ಲಿ ಸಾಲದ ಸೌಲಭ್ಯವನ್ನು ಒದಗಿಸದಿದ್ದರೆ ಹೇಗೆ ? ಮಾನ್ಯ ಮುಖ್ಯಮಂತ್ರಿಗಳು ರೈತರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದ್ದರು He is a boiling pot today. I also express my feelings. ಇಂಥಾ ಒಂದು ಪರಿಸ್ಥಿತಿಗೆ ಹೋಗಬಾರದು. ಮುಖ್ಯ ಮಂತ್ರಿಗಳು ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ನನ್ನ ಅಭಿಪ್ರಾಯ. ರಾಜಕೀಯ ಜಂಜಾಟ ಮುಖ್ಯವಲ್ಲ. ಆಳುವ ಪ ದ ತಿಕ್ಕಾಟದಿಂದ ರಾಜ್ಯದ ಪ್ರಗತಿಗೆ ಧಕ್ಕೆಯಾಗುತ್ತದೆ. It is none of my concern to advice the members of the party. I am only interested in the Development of the State. ಇಷ್ಟೊಂದು ದೊಡ್ಡ ದೊಡ್ಡ ಉದ್ಯಮಗಳು, ಕೈಗಾರಿಕೆಗಳು ಮತ್ತು ಬೇರೆ ಬೇರೆ ವ್ಯವಹಾರಗಳಿಂದ ಶ್ರೀಮಂತರಿಂದ ಸರ್ಕಾರಕ್ಕೆ ಬರಬೇಕಾದ ಸಾವಿರಾರು ರೂಪಾಯಿಗಳನ್ನು ವಸೂಲು ಮಾಡುವುದಕ್ಕೆ ನೀವು ತಯಾರಿಲ್ಲ. ಆದರೆ ಬಡ ರೈತ 200-300 ರೂಪಾಯಿ ತಕಾವಿ, ಸಾಲ, ಲ್ಯಾಂಡ್ ಇಂಪ್ರೂವ್‌ಮೆಂಟ್ ಸಾಲದ ಬಾಕಿ ಕೊಡಬೇಕಾಗಿದ್ದರೆ ಆ ರೈತನ ಹೆಂಡತಿಯ ಮಾಂಗಲ್ಯವನ್ನು ಹಿಡಿದು ಕೀಳುವ ಮಟ್ಟಕ್ಕೆ ಅಧಿಕಾರಿಗಳು ಹೋಗಿದ್ದಾರೆ. ಪೋಲೀಸಿನವರು ಹೋಗಿ ರೈತರ ಪಾತ್ರೆಗಳನ್ನು ತೆಗೆದು ಈಚೆಗೆ ಬಿಸಾಡಿದ್ದಾರೆ. ಇದು ಈ ಸರ್ಕಾರ ರೈತರಿಗೆ ಕೊಡತಕ್ಕ ಉಡುಗೊರೆ. ಯಾವ ಯಾವ ಮಂತ್ರಿಗಳು, ಶಾಸಕರು ಎಷ್ಟೆಷ್ಟು ಬಾಕಿಯನ್ನು ಸರ್ಕಾರಕ್ಕೆ ಕೊಡಬೇಕು ಎಂಬುದನ್ನು ಬೇಕಾದರೆ ನಾನು ಹೇಳುತ್ತೇನೆ. ಅವರು ಕಂದಾಯದ ಬಾಕಿ ಎಷ್ಟು ಕೊಡಬೇಕು ಎಂಬುದನ್ನು ಹೇಳುವುದಕ್ಕೆ ನಾನು ಸಿದ್ಧನಾಗಿದ್ದೇನೆ.

Mr. DEPUTY SPEAKER.—As I said earlier, we will be sitting this evening at 3 P. M. I seek the co-operation of all the Hon. Members in this matter. This will have to be taken up and passed this evening.

Sri H. D. DEVE GOWDA.—There should be full discussion to-day and the reply may be given on Monday.

Sri K. H. PATIL.—I beg leave of you to bring to your kind notice that as I have to attend the Board of Regent as Pro-Chancellor to-day, I will have to go out now and come at 5 P. M.

Mr. DEPUTY SPEAKER.—Now the House stands adjourned to meet again at 3 P. M.

The House adjourned at One of the Clock and reassembled at Ten Minutes past Three of the Clock.

[MADAM SPEAKER in the Chair]

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಣಿಯವರೇ, ನಾನು ಪೆಸ್ಟಿಸೈಡ್ಸ್ ಬಗ್ಗೆ ಮಾತನಾಡುತ್ತಿದ್ದೆ. ಹಿಂದೆ ಈ ಪೆಸ್ಟಿಸೈಡ್ಸ್ ವಿಷಯದಲ್ಲಿ ಏನು ಸಬ್ಸಿಡಿ ಕೊಡುತ್ತಿದ್ದರೋ ಆ ಸಬ್ಸಿಡಿಯನ್ನು ಈಗ ರದ್ದುಮಾಡಿದ್ದಾರೆ. ಇವತ್ತು ಅವುಗಳ ಬೆಲೆ ಗಗನಕ್ಕೆ ಹೋಗಿದೆ. ಅವುಗಳನ್ನೂ ಕೂಡ ಹತೋಟಿಗೆ ತರುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಜೊತೆಗೆ ಸಬ್ಸಿಡಿ ಕೊಡತಕ್ಕದನ್ನು ಮುಂದುವರಿಸಿಕೊಂಡು ಬರುವುದರಿಂದ ಸಣ್ಣ ಸಣ್ಣ ರೈತರಿಗೆ ಬಹಳ ಅನುಕೂಲವಾಗುತ್ತದೆಂದು ನಾನು ಈ ಸಮಯದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಫರ್ಟಿಲೈಜರ್ಸ್ ಬಗ್ಗೆ ಸಾಕಷ್ಟು ಹೇಳಿದ್ದಾರೆ. ನಾನು ಒಂದು ಮಾತನ್ನು ಹೇಳುತ್ತೇನೆ. ಫರ್ಟಿಲೈಜರ್ಸ್ ಕಾರ್ಪೋರೇಷನ್ ಆಫ್ ಇಂಡಿಯಾದವರು ಏನು ಗೊಬ್ಬರವನ್ನು ಉತ್ಪಾದನೆ ಮಾಡುತ್ತಾರೋ ಅದರಲ್ಲಿ ಸೇಕಡ 50ರಷ್ಟನ್ನು ಸ್ಟೇಟ್ ಗೌರ್ನಮೆಂಟಿಗೆ ಕೊಡುವ ಬಗ್ಗೆ ಪಾರ್ಲಿಮೆಂಟಿನಲ್ಲಿ ಇದಕ್ಕೆ ಸಂಬಂಧಪಟ್ಟ ಯೂನಿಯನ್ ಪೆಟ್ರೋಲಿಯಂ ಮಿನಿಸ್ಟರ್ ಅವರು ಹೇಳಿರುವ ಒಂದು ಮಾತನ್ನು ಈ ಸಭೆಯಲ್ಲಿ ನಾನು ತಿಳಿಸಲಿಚ್ಛಿಸುತ್ತೇನೆ. ಅದು ಈ ರೀತಿ ಇವೆ :—

"The AGRICULTURAL MINISTER has not reacted to the proposal very enthusiastically because it has no distribution machinery of its own."

ಇಂತಹ ಸಂದರ್ಭದಲ್ಲಿ ಈ ಸಭೆಯಲ್ಲಿ ಅಗ್ರಿಕಲ್‌ಚರಲ್ ಮಿನಿಸ್ಟರ್ ಇರಬೇಕು. ಫರ್ಟಿಲೈಜರ್ಸ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಏನು ಗೊಬ್ಬರವನ್ನು ಉತ್ಪಾದನೆ ಮಾಡುತ್ತಾರೋ ಅದನ್ನು ಮಾರಾಟ ಮಾಡುವ ವ್ಯವಸ್ಥೆಯನ್ನು ಸರಿಯಾಗಿ ಮಾಡದೇ ಬ್ಲಾಕ್ ಮಾರ್ಕೆಟ್ಟಿಗೆ ಎಡೆ ಕೊಟ್ಟಿದ್ದರಿಂದ, ಅದರ ಬಗ್ಗೆ ನಾನು ಕೆಲವು ಅಂಶಗಳನ್ನು ಪ್ರಸ್ತಾಪಮಾಡುತ್ತಿದ್ದೆ, ಇವತ್ತು ಪತ್ರಿಕೆಗಳಲ್ಲಿ ಬಂದಿರುವ ಹಾಗೆ ಕೇಂದ್ರದ ವ್ಯವಸಾಯ ಸಚಿವರು ಈ ಸಂದರ್ಭದಲ್ಲಿ ಆಸಕ್ತಿಯನ್ನು ತೋರಿಸಲಿಲ್ಲವೆಂಬ ಮಾತನ್ನು ಹೇಳಿರುವುದನ್ನು ನೋಡಿದರೆ ನಾನು ವಿಷಾದ ಪಡಬೇಕಾಗುತ್ತದೆ. ಸರ್ಕಾರವೇ ಈ ಒಂದು ಕಪ್ಪು ಮಾರ್ಕೆಟ್ ವ್ಯಾಪಾರ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವ ಪರಿಸ್ಥಿತಿಯನ್ನು ನೋಡಿ ವಿಷಾದಪಡಬೇಕಾಗುತ್ತದೆ. ಈ ದೇಶದಲ್ಲಿ ಇಂತಹ ವಿಚಾರಗಳ ಬಗ್ಗೆ ಯಾವುದೇ ನೇರವಾದ ಕ್ರಮ ತೆಗೆದುಕೊಳ್ಳದೇ ಇರುವುದು ಸರಿಯಾದುದಲ್ಲವೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಇನ್ನು ರೈತ ಬೆಳೆದಂಥ ಪದಾರ್ಥಗಳು ಏನಿವೆಯೋ ಅದರ ಬಗ್ಗೆ ಇವತ್ತು ಯಾವುದೇ ಅವನು ಬೆಳೆಯತಕ್ಕ ಪದಾರ್ಥಗಳಿಗೆ ರಕ್ಷಣೆ ಇಲ್ಲ. ಒಂದು ಬೆಳೆಯನ್ನು ಇಟ್ಟರೆ, ಅದಕ್ಕೂ ರಕ್ಷಣೆ ಇಲ್ಲ. ಸೇಕಡ 90ರಷ್ಟು ಜನ ಇವತ್ತು ವ್ಯವಸಾಯದ ಆಧಾರದ ಮೇಲೆ ಅವಲಂಬನೆಯಾಗಿರುವ ಈ ಒಂದು ಪರಿಸ್ಥಿತಿಯಲ್ಲಿ ಯಾವುದೇ ಸುಧಾರಿತ ಬೀಜವೇನಿವೆ ಅದನ್ನು ಒದಗಿಸುವುದರಲ್ಲಿ ಮತ್ತು ಇವತ್ತು ಕೊಡತಕ್ಕ ಗೊಬ್ಬರ ಏನಿವೆಯೋ ಅವರಲ್ಲಿ ಆಗತಕ್ಕ ಅಡಲ್ಟ್ರೇಷನ್ ಏನು ಪರಿಣಾಮವಾಗಿ ವ್ಯವಸಾಯಗಾರರಿಗೆ ಆಗತಕ್ಕ ಅನಾಹುತವಾಗಿದೆ ಆ ಅನಾಹುತದಿಂದ ಪಾರಾಗಲು ಏನಾದರೂ ಸರ್ಕಾರ ಆತನಿಗೆ ಒಂದು ರಕ್ಷಣೆ ಒದಗಿಸುವಂಥ ಆಲೋಚನೆ ಮಾಡಿವೆಯೋ ಎಂದರೆ ಅದೇನೂ ಇಲ್ಲ. ಮೊದಲಿನಿಂದಲೂ ನಾವು ಈ ಸಭೆಯಲ್ಲಿ ಕ್ರಾಪ್ ಇನ್‌ಷೂರನ್ಸ್ ಮಾಡಬೇಕೆಂದು ಅನೇಕಸಾರಿ ಹೇಳಿದರೂ ಅದನ್ನು ಮಾಡಲಿಲ್ಲ. ಹಲವಾರು ಸದಸ್ಯರು ಇವೇ ವಿಷಯವನ್ನು ಹೇಳಿದ್ದಾರೆ ಇವರು ಇವತ್ತು ಅದಕ್ಕೆ ತಯಾರಿಲ್ಲ. ರೈತರಿಗೆ ಆಗತಕ್ಕ ಅನಾಹುತಗಳನ್ನು ತಪ್ಪಿಸುವುದಕ್ಕೆ ಮತ್ತು ಅವನಿಗೆ

ಸರಿಯಾದ ಬೆಲೆ ಬರಬೇಕಾದರೆ ಹಲವಾರು ಎಡರು ತೊಡರುಗಳಿವೆ. ಅವನು ಬೆಳೆಯನ್ನು ಮನೆಗೆ ತೆಗೆದುಕೊಂಡು ಹೋಗಿ, ಅದರಿಂದ ಬಂದಂಥ ಹಣದಿಂದ ಅವನ ಎಲ್ಲ ಖರ್ಚುಗಳನ್ನು ಕಳೆದಮೇಲೆ, ಮುಂದೆ ಅವನ ಬೆಳೆಗೆ ಯಾವ ಒಂದು ಅನಾಹುತ ಸಂಭವಿಸದೆ ಹಾಗೆ ನೋಡಿಕೊಳ್ಳುವುದಕ್ಕೆ ಕ್ರಾಪ್ ಇನ್‌ಷೂರೆನ್ಸ್ ಅತ್ಯಾವಶ್ಯಕ. ಆದ್ದರಿಂದಲೇ ನಾನು ಇದನ್ನು ಪದೇಪದೇ ಪುನರುಚ್ಚರಿಸಬೇಕಾಗು ವುದಿಲ್ಲ, ಇಂತಹ ಒಂದು ಸನ್ನಿವೇಶದಲ್ಲಿ ಕ್ರಾಪ್ ಇನ್‌ಷೂರೆನ್ಸ್ ಜಾರಿಗೆ ತರುವುದು ಬಹಳ ಸೂಕ್ತ ವೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ನಾನು ಇವತ್ತು ಈ ಸಭೆಯ ಕಾಲವನ್ನು ಹೆಚ್ಚಿಗೆ ತೆಗೆದುಕೊಳ್ಳುವುದಿಲ್ಲ ಬೆಳಗ್ಗೆ 10 ನಿಮಿಷದವರೆಗೂ ಮಾತನಾಡಿ ದ್ದೇನೆ. ನನ್ನ ಸ್ನೇಹಿತರೂ ಸಹ ಅವರ ಬಗ್ಗೆ ಮಾತನಾಡುವವರೂ ಇದ್ದಾರೆ. ಕಾಲ ಒತ್ತಡ ದಿಂದ ಅನೇಕ ಜನರು ಊರಿಗೆ ಹೋಗುವ ಪರಿಸ್ಥಿತಿ ಬಂದಿದೆ. ಏನೇ ಆಗಲಿ, ಒಕ್ಕಲು ಖಾತೆಗೆ ಸಂಬಂಧಪಟ್ಟ ವಿಚಾರವನ್ನು ಮಾತನಾಡುವಾಗ ನಾವಿದ್ದು ಬೆಳಗ್ಗೆ ಅಧಿವೇಶನ ಮಾಡಬೇಕೆಂದು ಇರುವುದರಿಂದ ಕೆಲವು ವಿಷಯಗಳನ್ನು ವಿಧಿಇಲ್ಲದೇ ಪ್ರಸ್ತಾಪ ಮಾಡಬೇಕಾಗಿದೆ. ಈಗ ಮಾರ್ಕೆ ಟಿಂಗ್ ಫ್ಯಸಲಿಟೀಸ್ ಬಗ್ಗೆ ನಾನು ಹೇಳುತ್ತೇನೆ. ರೈತ ಬೆಳೆದಂಥ ಪದಾರ್ಥಗಳಿಗೆ ಬೆಲೆಗಳ ಸ್ಥಿರತೆ ಏನಿದೆ, ಅವನಿಗೆ ಕಾಸ್ಟ್ ಆಫ್ ಕಲ್ಟಿವೇಷನ್ ಏನಿದೆ, ಅವನಿಗೆ ವ್ಯವಸಾಯಕ್ಕೆ ಆಗತಕ್ಕ ಖರ್ಚು ಏನಿದೆ, ಅದಕ್ಕೆ ಅನುಗುಣವಾಗಿ ಸರ್ಕಾರದವರು ಆ ಬೆಲೆಗಳ ಸ್ಥಿರತೆಯನ್ನು ಮಾಡಿಕೊಟ್ಟಿದ್ದಾ ರೆಯೋ ಎಂಬ ಪ್ರಶ್ನೆ ಬಂದಾಗ, ಎದೆ ತಟ್ಟಿಕೊಂಡು ಹೇಳತಕ್ಕ ಧೈರ್ಯಸ್ಥೈರ್ಯ ನಿಮಗೆ ಇಲ್ಲ. ಇವತ್ತು ಕೆಲವಾರು ಕಾರಣಗಳಿಂದ ಆ ಬೆಲೆಗಳು ಗಗನಕ್ಕೆ ಮುಟ್ಟಿರಬಹುದು. ಆದರೆ ರೈತನ ಉತ್ಪಾದನೆ ಹಾಗೂ ಖರ್ಚಿನ ಆಧಾರದ ಮೇಲೆ ಅವನು ಬೆಳೆದ ಪದಾರ್ಥಗಳಿಗೆ ಬೆಲೆ ಏನು ನಿಗದಿಮಾಡಬೇಕು ಎಂಬ ಬಗ್ಗೆ ನಮ್ಮಲ್ಲಿ ನ್ಯಾಷನಲ್ ಪಾಲಿಸಿ ಇಲ್ಲ. ಇವತ್ತು ರೈತರಿಂದ ಎಷ್ಟು ಬೇಕಾದರೂ ಸಿಗುತ್ತದೆ. ಅದಕ್ಕೆ ಮಾನ್ಯ ಶ್ರೀ ಮಲ್ಲಪ್ಪನವರು ವ್ಯವಸ್ಥೆಮಾಡಬಹುದು ಮಾರುಕಟ್ಟೆಗೆ ನಾವು ಬೆಳೆದಂಥ ಪದಾರ್ಥಗಳನ್ನು ತೆಗೆದುಕೊಂಡು ಹೋದರೆ ಅಲ್ಲಿ ಆಗತಕ್ಕ ಅನಾಹುತಗಳು ಅನುಭವಿಸಿ ರುವವರಿಗೇ ಗೊತ್ತಾಗುತ್ತದೆ. ಒಂದು ಕಡೆ ಬೆಳೆಯುತಕಮಗೆ ಅವರ ಖರ್ಚು ನೋಡಿದರೆ ಮಿನಿಮಂ ವೇಜಸ್ ಕೊಡಬೇಕು. ಡೆವಲಪ್‌ಮೆಂಟ್ ಕಮಿಷನರ್ ಒಂದುಸಾರಿ ಒಂದು ಮಾತನ್ನು ಹೇಳುತ್ತಿದ್ದರು. ಅದೇನೆಂದರೆ, "minimum wages must be atleast five rupees a day for a farm labourer" ಎಂಬುದಾಗಿ. ಅವರು ಆ ರೀತಿ ಹೇಳಿದ್ದನ್ನು ನಾನೇ ಕೇಳಿದ್ದೇನೆ. 5 ರೂಪಾಯಿಗಳು ಒಂದು ದಿವಸಕ್ಕೆ ಕೂಲಿ ಇರಬೇಕೆಂದು ಹೇಳಿದ್ದಾರೆ. ಆದರೆ ಕೇವಲ ವ್ಯವಸಾಯವನ್ನೇ ಅವಲಂಬನೆ ಮಾಡಿಕೊಂಡಿರತಕ್ಕ ಲೇಬರ್ಸ್ ನಮ್ಮಲ್ಲಿ ಸೇಕಡ 65ರಷ್ಟು ಇದ್ದಾರೆ. ಅದಕ್ಕೆ ಅನುಗುಣವಾಗಿ ನಾನು ಆಲ್ ಇಂಡಿಯಾ ಫಿಗರನ್ನೂ ಕೂಡ ಕೊಡಬಲ್ಲೆ. 5 ರೂಪಾಯಿಗಳು ಎಂಬುದಾಗಿ ಅವರು ಇವತ್ತು ಹೇಳಿದ್ದಲ್ಲ, ಮೂರು ವರ್ಷಗಳ ಹಿಂದಿನ ಮಾತು. ವ್ಯವಸಾಯ ಕೂಲಿಗೆ ಬರತಕ್ಕ ಜನಗಳು ಅವರ ಮಿನಿಮಂ ವೇಜಸ್ 5–6–7–8 ರೂಪಾಯಿಗಳು. ಒಂದು ದಿವಸಕ್ಕೆ 6ರಿಂದ 8ರೂಪಾಯಿಗಳವರೆಗೆ ಕೊಟ್ಟರೂ ಬರುವುದಿಲ್ಲ. ಉಳುಮೆ ಮಾಡತಕ್ಕದ್ದು ಬಹಳ ಕಷ್ಟ. ಅದು ತಮಗೂ ಗೊತ್ತಿದೆ. ರೈತನ ಮನೆಯ ಬಾಗಿಲಿಗೆ ಗೊಬ್ಬರವನ್ನು ಒದಗಿಸುವ ಸನ್ನಿವೇಶದಲ್ಲಿ ಕಾಲಿಡುತ್ತಿದ್ದರೂ ಈ ದೇಶದಲ್ಲಿ ರೈತರು ಹೆಚ್ಚಿಗೆ ಅಭಿವೃದ್ಧಿಯಾಗುವುದಕ್ಕೆ ಏನೊಂದು ಹೆಚ್ಚಿನ ಪ್ರಯತ್ನಗಳನ್ನು ಮಾಡುತ್ತಿಲ್ಲ. ಆದರೆ ಈಗ ಗೊಬ್ಬರದ ಸರಬರಾಜು ಅವನ ಮನೆಗೆ ಮುಟ್ಟುವಂತೆ ಮಾಡುವುದು ಬಹಳ ಒಳ್ಳೆಯ ಯೋಜನೆ. ಅದನ್ನು ಇನ್ನೂ ತೀವ್ರತೆಯಿಂದ ಮಾಡಬೇಕು. ಇವತ್ತು 1200 ರೂಪಾಯಿಗಳಿಗೆ ಒಂದು ಟನ್ ನೈಟ್ರೊಜನ್ ಗೊಬ್ಬರದ ದರವಿದೆ. ಸುಮಾರು 10-15 ದಿವಸಗಳಿಂದ ಕೇವಲ 2 ರೂಪಾಯಿಗಳು ಕೊಟ್ಟರೂ ಒಂದು ಕುಳ ಸಿಗುತ್ತಾ ಇಲ್ಲ. ವ್ಯವಸಾಯಗಾರನಿಗೆ ಅಗತ್ಯವಾಗಿ ಆಗತಕ್ಕ ಖರ್ಚು ಇದು. ಇವತ್ತು ಅವರು ಇರತಕ್ಕದ್ದು ಅವರು ಬೆಳೆಯುವ ಪದಾರ್ಥಗಳಿಗೆ ಬೆಲೆ ಸಿಗುವ ಒಂದು ಆಧಾರದ ಮೇಲೆ. ಆದರೆ ರೈತರು ಬೆಳೆದಂಥ ಪದಾರ್ಥಗಳಿಗೆ ನ್ಯಾಯವಾದ ಬೆಲೆ ಸಿಗುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ತೆಗೆದು ಕೊಂಡಿದ್ದಾರೆಯೋ ಎಂದು ಹೇಳಿದರೆ ಅದರಲ್ಲಿ ಯಾವುದೇ ಒಂದು ಕಾರ್ಯಕ್ರಮವೂ ಕೂಡ ಪರಿಣಾ ಮಕಾರಿಯಾಗಿ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ನಾನು ಪರದೇಶಗಳಿಗೆ ಹೋಗಿ ಬಂದಿರು ವವರ ಹತ್ತಿರ ವಿಚಾರಮಾಡಿದ್ದೇನೆ. ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಯಾವುದೇ ಒಂದು ಪದಾರ್ಥ ವನ್ನು ಒಯ್ದರೆ ಅವನಿಗೆ ಸರಿಯಾದಂಥ ದರ ಮಾರುಕಟ್ಟೆಯಲ್ಲಿ ಸಿಗದೇ ಹೋದರೆ, ಆ ಮಾಲನ್ನು ಅಲ್ಲಿಯೇ ಶೇಖರಣೆ ಮಾಡುವುದಕ್ಕೆ ಗೋಡೌನುಗಳನ್ನು ಇಟ್ಟುಕೊಂಡಿರುತ್ತಾರೆ. ಅವು ಅಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ಟಿನವರ ವಶದಲ್ಲಿರುತ್ತದೆ. ಅಲ್ಲಿ ಬ್ಯಾಂಕಿಂಗ್ ಫೆಸಿಲಿಟೀಸ್ ಇರುತ್ತದೆ. ಅಲ್ಲಿ ಸೇಕಡ 70-80-90 ರಷ್ಟು ರೈತರಿಗೆ ಪ್ರೊಡ್ಯೂಸ್ ಲೋನ್ ಎಂಬುದಾಗಿ ಕೊಡಲು ಅಧಿಕಾರ ವರ್ಗ ಇರುತ್ತದೆ. ಯಾವ ರೈತ ಗೋಡೌನಿನಲ್ಲಿ ಅವನ ಪದಾರ್ಥಗಳನ್ನು ಇಟ್ಟು ಹೋಗಿರು

(ಶ್ರೀ ಎಚ್. ಡಿ. ದೇವೇಗೌಡ)

ತ್ತಾನೋ, ಅವನಿಗೆ ವ್ಯಾಗ್ನಿಮಂರೇಟ್ ಅವನ ಪದಾರ್ಥಕ್ಕೆ ಸಿಗುತ್ತದೆ. ಇದು ಅಧಿಕಾರಿಗಳಿಗೆ ಗೊತ್ತಾದ ಕೂಡಲೇ ಮಾಲು ಇಟ್ಟಂಥ ರೈತ ಪ್ರೊಡ್ಯೂಸ್ ಲೋನ್ ಪಡೆದಿರತಕ್ಕಂಥ ರೈತನಿಗೆ ಇಂಟಿಮೇಟ್ ಮಾಡುತ್ತಾನೆ. ಈ ಪ್ರೈಸ್ ಲೆವಲ್ಲಿನಲ್ಲಿಯೇ ಮಾರಾಟ ಮಾಡುವುದು ಒಳ್ಳೆಯದೆಂದು ಸಂಬಂಧಪಟ್ಟ ರೈತನಿಗೆ ತಿಳಿಸತಕ್ಕ ಅಲ್ಲಿನ ಒಂದು ಆಸಕ್ತ ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಇನ್ನೂ ಪ್ರಾರಂಭ ಮಾಡಲಿಲ್ಲ.

ಇದು ಆಗಬೇಕು. ಈ ದಿವಸ ರೈತನ ಸ್ಥಿತಿ ಬಹಳ ಚಿಂತಾಜನಕವಾಗಿದೆ. 25–30 ಎಕರೆ ಭೂಮಿಯನ್ನು ಇಟ್ಟುಕೊಂಡಿರುವಂಥ ಒಬ್ಬ ಭೂಮಿಯ ಒಡೆಯ ಆ ವ್ಯವಸಾಯದಲ್ಲಿ ಏನೂ ಲಾಭವಿಲ್ಲ ಎಂದು ಬಸ್ ಕಂಡಕ್ಟರಾಗಿ ಬರುವುದಕ್ಕೆ ಇಲ್ಲವೇ ನಗರಗಳಲ್ಲಿ ಯಾವುದಾದರೂ ಸಿನೇಮ ಮಂದಿರದಲ್ಲಿ ಒಂದು ಗೇಟ್ ಕೀಪರಾಗಿ ಇಲ್ಲವೇ ಬಸ್ ಕ್ಲೀನರಾಗಿ ಕೆಲಸ ಕೇಳುತ್ತಿದ್ದಂಥ ನಿದರ್ಶನಗಳೂ ಇವೆ. ಆದುದರಿಂದ ಸರ್ಕಾರದವರು ಈ ವ್ಯವಸಾಯವನ್ನು ಒಂದು ಲಾಭದಾಯಕ ಕಸುಬನ್ನಾಗಿ ಮಾಡದಿದ್ದರೆ ಯಾರೂ ಭೂಮಿಯನ್ನು ಇಟ್ಟುಕೊಂಡಿರುವುದಕ್ಕೆ ಇಷ್ಟಪಡುವುದಿಲ್ಲ. ಆದುದರಿಂದ ಸರ್ಕಾರದವರು ಈ ಭೂ ಸುಧಾರಣೆಯ ಕಾನೂನು ತಂದು ಜನರನ್ನು ಹಳ್ಳಿಗಳಿಂದ ಏನೂ ಓಡಿಸಬೇಕಾಗಿಲ್ಲ, ಅವರಷ್ಟಕ್ಕೆ ಅವರೇ ಬಿಟ್ಟು ಓಡುವುದಕ್ಕೆ ಸಿದ್ಧವಾಗುತ್ತಿದ್ದಾರೆ. ಈ ದಿನ ಹಳ್ಳಿಯಲ್ಲಿ ಇರುವುದಕ್ಕೆ ಯಾರೂ ಇಷ್ಟ ಪಡುತ್ತಿಲ್ಲ. ವಿದ್ಯಾವಂತರಾದ ಮೇಲಂತೂ ಇದರ ಶತಸಿದ್ಧ ಹಾಗೇ ವಿದ್ಯಾವಂತರಾದ ಹಳ್ಳಿ ಜನರ ಮನಸ್ಸು ಹೇಗಿದೆಯೋ ಹಾಗೆ ಗ್ರಾಮಾಂತರ ಪ್ರದೇಶಕ್ಕೆ ನೀವು ಹಾಕತಕ್ಕ ಅಧಿಕಾರಿಗಳೂ ಕೂಡ ಹೋಗುವುದಕ್ಕೆ ತಯಾರಾಗಿಲ್ಲ. ಮಾನ್ಯ ಕೈಗಾರಿಕಾ ಸಚಿವರು ಶ್ರೀ ಆರ್ಮುಗಂರವರ ಒಂದು ಪ್ರಶ್ನೆಗೆ ಉತ್ತರವನ್ನು ಕೊಡತಕ್ಕ ಕಾಲದಲ್ಲಿ ಅವರ ಪ್ರಶ್ನೆಗೆ ಲಿಖಿತ ಮೂಲಕ ಉತ್ತರದಲ್ಲಿ ಒಂದು ಕಡೆ ನಡೆಸಿರತಕ್ಕ ಒಂದು ಸ್ಯಾಂಪಲ್ ಸರ್ವೆ ಆಧಾರದ ಮೇಲೆ ಒಂದು ಮಾತನ್ನು ತಾ : 15–3–1973ರ ಸದರನ್ ಎಕನಾಮಿಕ್ಸ್— ಎಂಬ ಮ್ಯಾಗ್ಜೈನ್‌ನಲ್ಲಿ ಇರತಕ್ಕ ಒಂದು ಆರ್ಟಿಕಲ್–ಇಂಡಸ್ಟ್ರಿಯಲೈಜೇಷನ್ ಅಂಡ್ ಇಟ್ಸ್ ಇಂಪ್ಯಾಕ್ಟ್ ಆನ್ ರೂರಲ್ ಲೈಫ್ ಎಂಬ ಲೇಖನದಲ್ಲಿ ಏನು ಹೇಳಿದ್ದಾರೆಂದರೆ—ಕೈಗಾರಿಕಾ ಕ್ಷೇತ್ರದಲ್ಲಿ ಒಬ್ಬ ವ್ಯಕ್ತಿ ಸಂಪಾದನೆ ಮಾಡುವಷ್ಟನ್ನು ಗ್ರಾಮಾಂತರ ಪ್ರದೇಶದಲ್ಲಿ ಒಂದು ಇಡೀ ಕುಟುಂಬದವರು ಸಂಪಾದಿಸುವುದಕ್ಕಾಗುವುದಿಲ್ಲ—ಎಂದು ಹೇಳಿದ್ದಾರೆಂದು ಹೇಳಿದ್ದಾರೆ.

ಇನ್ನು ಈ ಬೆಳೆಗಳನ್ನು ರಾಷ್ಟ್ರಮಟ್ಟದಲ್ಲಿ ನಿಗದಿ ಮಾಡತಕ್ಕ ಬಗ್ಗೆ ಕೇಂದ್ರಕ್ಕೆ ತಮ್ಮ ಕೈಲಾದ ಮಟ್ಟಿಗೂ ಒತ್ತಾಯ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಬಗ್ಗೆ ಹೇಳುವುದಾದರೆ ನಾವು ಇದನ್ನು ಸ್ಥಾಪನೆ ಮಾಡಿದರ ಉದ್ದೇಶವಾದರೂ ಏನು ? ರೈತನಿಗೆ ಅಗತ್ಯವಾಗಿ ಬೇಕಾಗುವ ಗೊಬ್ಬರ, ಬೀಜ ಮತ್ತು ಉಪಕರಣಗಳನ್ನು ಒದಗಿಸಬೇಕೆಂದು ಮಾಡಲಾಯಿತು. ಆದರೆ ಈ ದಿವಸ ಒಬ್ಬೊಬ್ಬ ಮಂತ್ರಿಗಳು ಇದರ ವಿಚಾರದಲ್ಲಿ ತೆಗೆದುಕೊಳ್ಳುತ್ತಿರುವ ಒಂದೊಂದು ರೀತಿಯ ತೀರ್ಮಾನಗಳನ್ನು ನೋಡಿದರೆ ಈ ನಮ್ಮ ಮೂಲ ಅಭಿಪ್ರಾಯಕ್ಕೆ ತಿಲಾಂಜಲಿಯನ್ನು ಇತ್ತಹಾಗೆ ಆಗಿದೆ. ನಾವು ಈ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ 2 ಕೋಟಿ ರೂಪಾಯಿ ಕ್ಯಾಪಿಟಲನ್ನು ಒದಗಿಸಿದ್ದೆವು. ಅದರಲ್ಲಿ ಒಂದು ಕೋಟಿ ರೂಪಾಯಿಗಳನ್ನು ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಜರ್ಸಿಗೆ ಒದಗಿಸಿರುತ್ತೆ. ಇನ್ನುಳಿದ ಹಣದಲ್ಲಿ ದಾವಣಗೆರೆ ಸಕ್ಕರೆ ಕಾರ್ಖಾನೆಗೆ 15 ಲಕ್ಷ ರೂಪಾಯಿ ಮತ್ತು ಶ್ರೀಮಾನ್ ಕೆ. ಎಚ್. ಪಾಟೀಲರ ಗದಗಿನ ಕಾಟನ್ ಅಂಡ್ ಟೆಕ್ಸ್‌ಟೈಲ್ಸ್ ಕೋಆಪರೇಟೀವ್ ಸೊಸೈಟಿಗೆ 15 ಲಕ್ಷ ರೂಪಾಯಿ ಬಂಡವಾಳವನ್ನು ಹೂಡಲಾಗಿದೆ. ಹೀಗಾಗಿ ಇನ್ನು ನಮ್ಮ ಮೂಲ ಉದ್ದೇಶಕ್ಕೆ ಉಳಿದಿರತಕ್ಕ ಹಣ 75 ಲಕ್ಷ ರೂಪಾಯಿ. ಅಂದರೆ ಇದು 2 ಕೋಟಿ ರೂಪಾಯಿ ಇದ್ದುದು 75 ಲಕ್ಷಕ್ಕೆ ಇಳಿಯಿತು. ಇಷ್ಟು ಅಲ್ಪ ಹಣದಲ್ಲಿ ರಾಜ್ಯದ ರೈತಾಪಿ ಜನರಿಗೆ ಅಗತ್ಯವಾದ ವಸ್ತುಗಳನ್ನು ಒದಗಿಸುವುದಕ್ಕೆ ಸಾಧ್ಯವೇ ಎಂಬುದನ್ನು ನಾನು ಚಿಂತಿಸುತ್ತಿದ್ದೇನೆ. ಇದಕ್ಕಾಗಿ ನಾವು ಬ್ಯಾಂಕುಗಳಿಂದ ಸಾಲ ಎತ್ತಿರುವುದು ಶೇಕಡ 8–9–10 ಪರ್ಸೆಂಟ್ ಬಡ್ಡಿಯ ಮೇಲೆ. ಅಲ್ಲಿ ಆ ಕಾಟನ್ ಟೆಕ್ಸ್‌ಟೈಲ್ಸ್ ಕೋಆಪರೇಟೀವ್ ಸೊಸೈಟಿ ಎಷ್ಟೆ ಚೆನ್ನಾಗಿ ಕೆಲಸ ಮಾಡಿದರೂ ಅದು ಹಾಲಿ ಇರತಕ್ಕ ನಿಯಮಗಳ ಪ್ರಕಾರ ಶೇಕಡ ಆರೂಕಾಲು ಪರ್ಸೆಂಟಿಗಿಂತ ಜಾಸ್ತಿ ಡಿವಿಡೆಂಡ್ ಕೊಡುವುದಕ್ಕೆ ಅವಕಾಶವೇ ಇಲ್ಲ. ಶೇಕಡ 9 ರಂತೆ ಸಾಲ ತಂದು ಶೇಕಡ ಆರೂಕಾಲು ಪರ್ಸೆಂಟ್ ಡಿವಿಡೆಂಡ್ ಕೊಟ್ಟರೆ ಬಾಕಿ ಹಣಕ್ಕೆ ಯಾರು ಜವಾಬ್ದಾರರು ? ನಾವು ಹಿಂದೆ ಕಾರ್ಪೊರೇಷನ್ ಸ್ಥಾಪನೆ ಮಾಡಿದ್ದು 'ನೋ ಲಾಸ್ ಅಂಡ್ ನೋ ಗೈನ್' ಎಂಬ ತತ್ವದ ಮೇಲೆ ಮಾಡಿದ್ದು. ಇಂಥ ಒಂದು ಅವಕಾಶ ಇದ್ದಾಗ ಇಲ್ಲಿಯ

ಹಣವನ್ನು ಮಾನ್ಯ ಸಚಿವರು ಬೇರೆ ಕಡೆಗೆ ಡೈವರ್ಟ್ ಮಾಡಬಾರದಾಗಿತ್ತು. ಆದರೆ ಈಗಲೂ ಕೂಡ ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ಈಗಲೂ ಮಾನ್ಯ ಸಚಿವರು ಆ ಗದುಗಿನ ಸೊಸೈಟಿಗೆ ಹಾಕಿರತಕ್ಕ 15 ಲಕ್ಷ ರೂಪಾಯಿಗಳನ್ನು ಮರುಪಾವತಿ ಮಾಡುವುದಕ್ಕೆ ಪ್ರಯತ್ನ ಮಾಡುವುದು ಅಗತ್ಯ ಎಂದು ಹೇಳುತ್ತೇನೆ. ಮಂತ್ರಿಗಳು ಇದರಲ್ಲಿ ಕೈಹಾಕಬಾರದಾಗಿತ್ತು, ಮೊನ್ನೆ ಇದೇ ಸಭೆಯಲ್ಲಿ ಒಬ್ಬ ಆಗ್ರೋ ಇಂಡಸ್ಟ್ರೀಸ್ ಅಧಿಕಾರಿಯನ್ನು ವರ್ಗಾವಣೆ ಮಾಡಿದ ಸಂದರ್ಭದಲ್ಲಿ ಈ ಫರ್ಟಿಲೈಜರ್ಸ್ ಡೀಲರುಗಳಿಂದ 40 ಲಕ್ಷ 61 ಸಾವಿರದ 385 ರೂಪಾಯಿಗಳ ಬಾಕಿ ನಿಂತಿದೆ ಎಂದು ಹೇಳಿದ್ದಾರೆ. ಆದರೆ ಯಾವ ಒಬ್ಬ ಅಧಿಕಾರಿಯೇ ಆಗಲಿ, ಅತನು ಛೇರ್ಮನ್ ಇರಬಹುದು, ಡೈರೆಕ್ಟರಿರಬಹುದು, ಅಕೌಂಟ್ಸ್ ಆಫೀಸರೇ ಇರಲಿ—ಯಾರೇ ಇರಲಿ ಅವರು ತಮ್ಮ ಕಾನೂನು ಚೌಕಟ್ಟನ್ನು ಮೀರಿ ಕೆಲಸ ಮಾಡಿದ್ದರೆ ಸರ್ಕಾರದವರು ಅವರ ಬಗ್ಗೆ ಯಾವ ಕ್ರಮ ಕೈಗೊಳ್ಳುವುದಕ್ಕೂ ಅವರಿಗೆ ಸ್ವಾತಂತ್ರ್ಯವಿದೆ. ಅದಕ್ಕೆ ಯಾವುದೂ ಅಡ್ಡಿ ಬರಬಾರದು. ಆದರೆ ಮಂತ್ರಿಗಳ ಒಂದು ಹಸ್ತಕ್ಷೇಪ ಇದರಲ್ಲಿ ಯಾವತ್ತೂ ಇರಬಾರದು. ಇದೇ ಉದ್ದೇಶವನ್ನು ಇಟ್ಟುಕೊಂಡೇ ನಾನು ಬೆಳಗ್ಗೆ ಶ್ರೀ ಚನ್ನಬಸಪ್ಪನವರಿಗೂ ಆ ಪವರ್ ಕಾರ್ಪೋರೇಷನ್ನಿನಲ್ಲಿ ಅವರು ಇರಬಾರದೆಂದು ಹೇಳಿದ್ದು. ಇಲ್ಲಿ ಇನ್ನೊಂದು ವಿಷಯ ತಮ್ಮ ಗಮನಕ್ಕೆ ತರಬೇಕಾದ್ದು ಏನೆಂದರೆ—ಈ ಕಾರ್ಪೋರೇಷನ್ನಿಗೆ ಬಂದ ಐರನ್ ಮತ್ತು ಸ್ಟೀಲನ್ನು ಗದುಗಿನ ಕಾಟನ್ ಅಂಡ್ ಟೆಕ್ಸ್‌ಟೈಲ್ಸ್ ಕೋಆಪರೇಟೀವ್ ಸೊಸೈಟಿಗೆ ಕೊಡಿಸಿದ್ದಾರೆ. ಇನ್ನು ಇಲ್ಲಿ ರೈತರಿಗೆ ಅವರ ಅಗತ್ಯಕ್ಕೆ ಬೇಕಾದ ವಸ್ತುಗಳನ್ನು ಮಾಡುವುದಕ್ಕೆ ಐರನ್ನಾಗಲಿ, ಸ್ಟೀಲಾಗಲಿ ಎಲ್ಲಿದೆ ? ಹೀಗೆ ಮಾಡಿದ್ದು ತಪ್ಪು ಎಂದು ಹೇಳುತ್ತೇನೆ. ಮತ್ತು ಇದರ ಬಗ್ಗೆ ಮಂತ್ರಿಗಳ ಮೇಲೆ ಚಾರ್ಜ್ ಮಾಡುತ್ತೇನೆ.

3-30 P. M.

ಶ್ರೀ ಕೆ. ಎಚ್. ಪಾಟೀಲ್.—ಇದಕ್ಕೆ ಬೇಕಾದ ಐರನ್ ಆಗ್ರೋ ಇಂಡಸ್ಟ್ರೀಸ್‌ನಿಂದ ಕೊಟ್ಟಿಲ್ಲ, ಜಾಯಿಂಟ್ ಕಂಟ್ರೋಲರ್‌ಗೆ ಅಪ್ಲಿಕೇಷನ್ ಕೊಟ್ಟು ಪಡೆದಿರುವುದು. ಇದಕ್ಕೆ ಲೇಬರ್ ಛಾರ್ಜಸ್ ಮಾತ್ರ ಕೊಟ್ಟಿದ್ದಾರೆ. ಅಂಗಲ್ ಐರನ್ ಅವರಿಗೆ ಬೇಕಾಗಿರಲಿಲ್ಲ. ಬೇರೆ ಅಪ್ಲಿಕೇಷನ್ ಕೊಟ್ಟು ಜಾಯಿಂಟ್ ಕಂಟ್ರೋಲರಿಂದ ಪರ್ಮಿಟ್ ಪಡೆದು ಆಗ್ರೋ ಇಂಡಸ್ಟ್ರೀಸ್‌ನವರ ಹೆಸರಿಗೆ ವರ್ಗಾಯಿಸಿದ್ದಾರೆ, ಅಷ್ಟೇ, ಇನ್ನೇನೂ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಹತ್ತಿರವಿರುವ ಮಾಹಿತಿಯನ್ನು ಸಭೆಯ ಮುಂದಿಡುತ್ತೇನೆ. ಯಾವ ಸಂಸ್ಥೆ ರೈತರಿಗೆ ಬೇಕಾದ ಎಲ್ಲಾ ಉಪಕರಣಗಳನ್ನು ಒದಗಿಸಬೇಕು ; ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ಪ್ರತಿ ವರ್ಷ ಎಷ್ಟು ಪರ್ಚೇಸ್ ಮಾಡಿದ್ದಾರೆ ; ಯಾವ ಮತಿಯಿಂದ ಪರ್ಚೇಸ್ ಮಾಡಿದ್ದಾರೆ ಎಂದು ವಿವರಣೆ ಕೊಡಿ.

ಶ್ರೀ ಕೆ. ಎಚ್. ಪಾಟೀಲ್.—ಮಿಲ್ಲಿನವರೇ ಹಣ ತುಂಬಿ ಪರ್ಮಿಟ್ ಪಡೆದು ಆಗ್ರೋ ಇಂಡಸ್ಟ್ರೀಸ್‌ನವರ ಹೆಸರಿಗೆ ವರ್ಗಾಯಿಸಿದ್ದಾರೆ. ತಾವೇ ಪರ್ಮಿಟ್ ತೆಗೆದುಕೊಳ್ಳುವುದಕ್ಕೆ ಬದಲಾಗಿ ಆಗ್ರೋ ಇಂಡಸ್ಟ್ರೀಸ್‌ನವರು ಏಜೆಂಟ್ ಎಂದು ಅವರ ಮೂಲಕ ತೆಗೆದುಕೊಂಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಈ ದಿವಸ ಹೊರಗಡೆಯಿಂದ ತರಿಸಿರುವುದೆಷ್ಟು ಎಂದು ವಿವರಣೆ ಕೊಡಿ, ಆ ಮೇಲೆ ಹೇಳುತ್ತೇನೆ. ಟ್ರಸಸ್ ಮಾಡಲು ಎಷ್ಟು ಉಪಯೋಗಮಾಡಿದ್ದೀರಿ. ಸಾಲದೆ ಹೊರಗಿನಿಂದ ಎಷ್ಟು ತರಿಸಿದ್ದೀರಿ ಎಂದು ಪೂರ್ಣ ವಿವರ ಕೊಡಬೇಕು. ಜೊತೆಗೆ ಅಮ್ಮುಗಂಡವರು ಈ ವಿಷಯ ಪ್ರಸ್ತಾಪಿಸುತ್ತಾ ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಎಂದು ಹೇಳಿದ್ದರು, ನಿಜ. ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದು, ಫ್ಯಾಬ್ರಿಕೇಷನ್ ಛಾರ್ಜಸ್ ಎಷ್ಟು ? ಒಂದು ಟನ್ನಿಗೆ 400 ರಿಂದ 500 ರೂಪಾಯಿಗಳು. ಅದಕ್ಕೆ 200 ಅಥವ 250 ಕೊಟ್ಟಿರಬೇಕೆಂದು ಗೊತ್ತಾಗಿದೆ.

ಶ್ರೀ ಕೆ. ಎಚ್. ಪಾಟೀಲ್.—ಲೇಬರ್ ಛಾರ್ಜಸ್ ಮಾತ್ರ.

ಶ್ರೀ ಎಚ್. ಡಿ. ದೇವೇಗೌಡ.—ಯಾವುದೇ ಛಾರ್ಜ್ ಇರಲಿ, 'ನೋ ಲಾಸ್ ನೋ ಪ್ರಾಫಿಟ್ ಬೇಸಿಸ್‌ ಮೇಲೆ ಕೆಲಸಮಾಡಬೇಕೆಂಬ ತತ್ವ ಬಿಟ್ಟು ಲೇಬರ್ ಛಾರ್ಜಸ್ ಮಾತ್ರ ಲೆಕ್ಕ ಪಡೆದು ಫ್ಯಾಬ್ರಿಕೇಷನ್‌ಗೆ ಹಣ ಕೊಡುತ್ತೇವೆಂದು ಹೇಳುವ ಸಂದರ್ಭದಲ್ಲಿ ನಮಗೂ ನಿಮಗೂ ವ್ಯತ್ಯಾಸ ಇದೆ.

ಶ್ರೀ ಕೆ. ಎಚ್. ಪಾಟೀಲ್.—ಬಂದುಮಾಡಿ ಎಂದು ಹೇಳುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲ, ಬೇರೆಯವರಿಗೆ ಛಾರ್ಜ್‌ಮಾಡುವುದೇ ಅವರಿಗೂ ಮಾಡಬೇಕು, 400 ರಿಂದ 500 ರೂಪಾಯಿ ಆಗುವುದಕ್ಕೆ 20 ರೂಪಾಯಿ ಕೊಟ್ಟು ಮಾಡಿರುವುದಾದರೆ ತರಾತುರಿ ಮೇಲೆ ಓವರ್‌ಟೈಂ ವೇಜಸ್ ಕೊಟ್ಟು ಮಾಡಿಸುವುದೇನಿದೆ, ಅವಕ್ಕೆ ಮಂತ್ರಿಗಳು ತಮ್ಮ ಅಧಿಕಾರ ದುರುಪಯೋಗ ಮಾಡಿರುವ ರೀತಿ ವರ್ತಿಸಿದ್ದಾರೆ ಎಂದು ಹೇಳುವುದು. ಇವಕ್ಕೆ ಅವಕಾಶ ಕೊಡಬಾರದು. ಇದು ಯಾರಿಗೂ ಭೂಷಣಪ್ರಾಯವಾದ ವ್ಯವಹಾರವಲ್ಲ. ಜೊತೆಗೆ ಇದಕ್ಕೆ ಟ್ರಾನ್ಸ್‌ಪೋರ್ಟೇಷನ್. ಮಂತ್ರಿಗಳು ಉತ್ತರ ಕೊಡಬೇಕು ಎಂದು ಹೇಳುವಾಗ ವಿಷಯ ಸಂಗ್ರಹಿಸಿ ಹೇಳುವುದು. ನಿಬಂಧನೆ ಪ್ರಕಾರ ಮೈಲಿಗೆ 6 ರೂಪಾಯಿ ಛಾರ್ಜ್ ಮಾಡಬೇಕು. 300 ಚಿಲ್ಲರೆ ಮೈಲಿಗೆ ಒಂದು ಟ್ರಿಪ್‌ಗೆ ಎರಡು ಸಾವಿರ ರೂಪಾಯಿಯಾಗುತ್ತದೆ, ಒಂದೆರಡು ಟ್ರಿಪ್ ಹೋಗಿರಬಹುದು, ಸರಿಯಾಗಿ ಗೊತ್ತಿಲ್ಲ. ಇಲ್ಲಿಂದ ಸಾಮಾನು ತೆಗೆದುಕೊಂಡುಹೋಗಿ ಗದಗಿಗೆ ಕೊಟ್ಟು ಆ ಕಡೆಯಿಂದ ಬೆಂಗಳೂರಿಗೆ ಬೇರೆ ಸಾಮಾನುಗಳನ್ನು ತಂದರು ಎಂದು ಲೆಕ್ಕ ತೋರಿಸಿ ಆ ತಪ್ಪು ಲೆಕ್ಕದ ಮೇಲೆ ಫ್ಯಾಬ್ರಿಕೇಟ್ ಮಾಡಲು ಅವಕಾಶ ಕೊಡಬಾರದು. ಈ ಸಂಸ್ಥೆ ರಾಜ್ಯದ ಜನರ ಹಿತದೃಷ್ಟಿಯಿಂದ ಶುದ್ಧವಾದ ಕೆಲಸಮಾಡಬೇಕು.

ಶ್ರೀ ಕೆ. ಎಚ್. ಪಾಟೀಲ್.—ಏನು ಮಾಡಿದ್ದಾರೆಂದು ಹೇಳಿದರೆ ಎನ್‌ಕ್ವೈರಿ ಮಾಡಬಹುದು

ಶ್ರೀ ಎಚ್ ಡಿ. ದೇವೇಗೌಡ.—ಒಂದು ಟ್ರಿಪ್ಪಿಗೆ ಎರಡು ಸಾವಿರ ರೂಪಾಯಿ ಅಗುವುದಕ್ಕೆ ನಾಮಿನಲ್ ಛಾರ್ಜ್ 80 ರೂಪಾಯಿ ಫಿಕ್ಸ್ ಮಾಡಿದ್ದಾರೆ.

Sri K. H. PATIL.—I believe it is false ಅದು ನಿಜವಲ್ಲವೆಂದು ನಂಬುತ್ತೇನೆ.

Sri H. D. DEVE GOWDA.—You please place all the facts before the House. ಈ ರೀತಿ ಕೊಟ್ಟಿದ್ದರೆ ತಪ್ಪಾಗುವುದು.

ಶ್ರೀ ಕೆ. ಎಚ್. ಪಾಟೀಲ್.—80 ರೂಪಾಯಿ ಮಾಡಿರುವುದು ಸಾಧ್ಯವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನಮ್ಮ ಹತ್ತಿರವಿರುವುದನ್ನು ಸಭೆಯ ಮುಂದಿಟ್ಟಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್.—ಎದುರು ಪಕ್ಷದ ನಾಯಕರ ಪ್ರತಿಯೊಂದು ಮಾತಿಗೂ ನಾನು ಗೌರವ ಕೊಡುತ್ತೇನೆ. ಆದ್ದರಿಂದ ಅವರು ಸರಿಯಾಗಿ ಗೊತ್ತಿರುವುದನ್ನು ಮಾತ್ರ ಸಭೆಯ ಮುಂದಿಡಬೇಕು. ಚೆನ್ನಾಗಿ ಗೊತ್ತಿಲ್ಲದಿರುವುದನ್ನು ಇಲ್ಲಿ ಹೇಳುವುದು ಸಮರ್ಪಕವಾಗುವುದಿಲ್ಲ. ಎನ್‌ಕ್ವೈರಿ ಮಾಡಿ ಸಮರ್ಪಕವಾದ ವಿಚಾರ ಹೇಳಬೇಕು. ಹಾಗೆ ಮಾಡಿದರೆ ಯೋಗ್ಯವಾಗಿರುವುದು

ಶ್ರೀ ಕೋಣಂದೂರು ಲಿಂಗಪ್ಪ.—ಆಥಾರಿಟೇಟಿವ್ ಆಗಿ ಆಂಕಿ ಅಂಶ ಹೇಳಲು ನಾವು ಸರಕಾರದವರಲ್ಲ. ನಾವು ಹೇಳುವುದು ಸರಿ ಅಥವ ತಪ್ಪು ಎಂದು ಹೇಳುವ ಜವಾಬ್ದಾರಿ ಸರಕಾರದ್ದು.

Sri K. H. PATIL.—Unless the hon. member has got specific charges, he is not supposed to make them.

ಶ್ರೀ ಎಚ್. ಡಿ. ದೇವೇಗೌಡ.—ಸಭೆಯ ಮುಂದೆ ಯಾವ ವಿಷಯ ಪ್ರಸ್ತಾಪಿಸಬೇಕು ಎಂಬುದನ್ನು ಈ ಸಭೆಯ ಕಾರ್ಯಕಲಾಪಗಳನ್ನು ಹತ್ತು ವರ್ಷದಿಂದ ಅಭ್ಯಾಸಮಾಡಿ ತಿಳಿದುಕೊಂಡಿದ್ದೇನೆ. ಮಂತ್ರಿಗಳ ಉಪದೇಶದ ಅವಶ್ಯಕತೆಯಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಉಪದೇಶವಲ್ಲ, ಮಾನ್ಯ ವಿರೋಧ ಪಕ್ಷದ ನಾಯಕರು ಏನಾದರೂ ಹೇಳಬಹುದೇ? When the hon. Leader of the opposition is making a charge, he must be quite sure of the charge; if the charge is not specific it becomes useless. I would like him to be specific.

ಶ್ರೀ ಎಚ್. ದೇವೇಗೌಡ.—ಈ ಸಭೆಯಲ್ಲಿ ಒಬ್ಬ ಸದಸ್ಯರು ಮತ್ತೊಬ್ಬ ಸದಸ್ಯರ ವಿರುದ್ಧ ಹೇಳತಕ್ಕ ಕಾಲದಲ್ಲಿ ಆ ಸದಸ್ಯನಿಗೆ ಎಷ್ಟು ಹಕ್ಕು ಇರುತ್ತದೆಯೋ ಅದನ್ನು ನಿರಾಕರಣೆ ಮಾಡಲಿಕ್ಕೂ ಅಷ್ಟೇ ಹಕ್ಕು ಇರುತ್ತದೆ. ಅದಕ್ಕೆ ಕೆಲವು ನಿಯಮಗಳನ್ನು ಅನುಸರಿಸಿ ಮಾತನಾಡಬೇಕಾಗುತ್ತದೆ. ಆದರೆ ಸಭೆಯ ಸದಸ್ಯರ ಮೇಲೆ ಆರೋಪ ಮಾಡುವಾಗ A person who is involved, whether he is a member or a Minister, has got every rinht to refute. That is the previlege he has got. ಇಷ್ಟು ಮಾತ್ರ ಹೇಳುತ್ತೇನೆ, ನಾನು ಏನು ಹೇಳುತ್ತಾ ಇದ್ದೇನೆ, ಅದು ಗಾಳಿಗೋಪುರದ ಮಾತಲ್ಲ. ಅದಕ್ಕೆ ಸಂಬಂಧಪಟ್ಟ ಫೈಲನ್ನು ಸಭೆಯ ಮುಂದೆ ತರಿಸಿ, ಏನಾದರೂ ಉತ್ಪ್ರೇಕ್ಷೆಯುತವಾದ ಮಾತನ್ನು ನಾನು ಹೇಳಿ

ದ್ದೇನೆ ಎಂದರೆ ಮಾನ್ಯ ಮಂತ್ರಿಗಳನ್ನು ನಾನು ಕ್ಷಮೆ ಕೇಳುತ್ತೇನೆ. ಒಬ್ಬ ಮಂತ್ರಿಗಳ ಚಾರಿತ್ರ್ಯಕ್ಕೆ, ಕೀರ್ತಿಗೆ ಕಳಂಕ ತರುವ ಕೆಲಸ ಮಾಡಿದ್ದರೆ ಕ್ಷಮೆ ಕೇಳುತ್ತೇನೆ. 80 ರೂಪಾಯಿಗಳ ಟ್ರಾನ್ಸ್‌ಪೋರ್ಟ್ ಚಾರ್ಜಸ್ ಏನಾದರೂ ಮಾಡಿದ್ದರೆ ಇವತ್ತು ತಾವು ರಿಕಾರ್ಡುಗಳನ್ನು ತರಿಸಿ, You please direct the concerned officer to place those records before this House. ಒಂದು ವೇಳೆ ನಾನು ಅಸತ್ಯವನ್ನು ನುಡಿದಿದ್ದರೆ ಆರುಗಂಟೆಗೆ ಸಭೆ ಏಳುವುದಕ್ಕೆ ಮುಂಚೆ ನಿಮಗೆ ಕ್ಷಮೆ ಕೇಳುತ್ತೇನೆ ಎಂದು ಈ ಸಂದರ್ಭದಲ್ಲಿ ನಾನು ಸ್ಪಷ್ಟವಾಗಿ ಹೇಳುವುದಕ್ಕೆ ತಯಾರಾಗಿದ್ದೇನೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ, ಮಿನಿಸ್ಟರ್‌ರವರು ಏನು ಹೇಳಿದ್ದಾರೆ ಎಂದರೆ ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ಗೆ ಒಬ್ಬ ಮ್ಯಾನೇಜಿಂಗ್ ಡೈರೆಕ್ಟರ್ ಅನ್ನು ಪೋಸ್ಟ್ ಮಾಡಿ ಅವರು ರೈತರಿಗೆ ಬೇಕಾದಂಥ ಉಪಕರಣಗಳನ್ನು ಕೊಡತಕ್ಕದ್ದು ಯೋಗ್ಯವಲ್ಲ, ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ ಎಂದು. One of the Directors who belongs to their own party has opposed it. I have not collected information from any official. I am speaking with all the responsibility, ರೈತರಿಗೆ ಬೇಕಾದ ಪದಾರ್ಥಗಳನ್ನು ಉಪಕರಣಗಳನ್ನು ಬೇರೆ ರೀತಿ ಉಪಯೋಗ ಮಾಡತಕ್ಕಂಥಾದ್ದು ಯೋಗ್ಯವಾದದ್ದಲ್ಲ ಎಂದು ಹೇಳಿದರೂ ಕೂಡ ಮಂತ್ರಿಗಳ ಒತ್ತಡದಿಂದ ಈ ಒಂದು ವ್ಯವಹಾರ ಆಗಿದೆ, ಇದು ಸರಿಯಾದುದು ಅಲ್ಲ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ, ಇವತ್ತು ರೈತನ ಬಗ್ಗೆ ನಾವು ಅನುಕಂಪದಿಂದ ಮಾತನಾಡುತ್ತೇವೆ. ಅದು ಸ್ವಾಭಾವಿಕ. 216 ಜನ ಸದಸ್ಯರುಗಳಲ್ಲಿ ಸುಮಾರು 8—10 ಜನ ಅರ್ಬನ್ ಏರಿಯಾದಿಂದ ಬಂದವರನ್ನು ಬಿಟ್ಟರೆ, ಬಾಕಿ ಸದಸ್ಯರು ಗ್ರಾಮಾಂತರ ಪ್ರದೇಶದಿಂದ ಬಂದಂಥವರು. ಅಗ್ರಿಕಲ್ಚರ್ ಇಂಜಿನಿಯರಿಂಗ್ ಸೆಕ್ಷನ್ ಅನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಪರಿಮಿತಿಯೊಳಗೆ ವರ್ಗಾಯಿಸಿದ್ದಾರೆ. ಇದರಿಂದ ರೈತನಿಗೆ ಅನುಕೂಲವಾಗುತ್ತದೆಯೇ ? ಇದು ಒಂದು ವ್ಯಾಪಾರ ಸಂಸ್ಥೆ, ನಿಜ, ಇದು ಲಾಭ ನಷ್ಟಗಳ ತಃಖ್ತೆಯನ್ನು ನೋಡುವ ವ್ಯಾಪಾರಿ ಸಂಸ್ಥೆಯಾಗಬಾರದು. ರೈತರಿಗೆ ಫಲಕಾರಿಯಾಗುವ ರೀತಿಯಲ್ಲಿ ಕೆಲಸಕಾರ್ಯಗಳು ನಡೆಯಬೇಕಾಗುತ್ತದೆ. ಇಂಜಿನಿಯರಿಂಗ್ ಸೆಕ್ಷನ್ ಅನ್ನು ಟ್ರಾನ್ಸ್‌ಫರ್ ಮಾಡಿದ ಮೇಲೆ, ಆ ಟ್ರ್ಯಾಕ್ಟರ್ ಸರ್ವಿಸ್ ಆಗಲೀ, ಬುಲ್ಡೋಜರ್ ಸರ್ವಿಸ್ ಆಗಲೀ, ರೈತನಿಗೆ ಬೇಕಾದ ಯಾವುದೇ ಸರ್ವಿಸ್ ಆಗಲೀ ತೆಗೆದುಕೊಳ್ಳತಕ್ಕದ್ದನ್ನು ನೋಡುವುದಾದರೆ ಅದು ಬಹುಶಃ ಮಾರ್ವಾಡಿ ಲೆಕ್ಕ ಎಂದು ಹೇಳಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಈ ದಿಸೆಯಲ್ಲಿ ಗಮನಕೊಡಬೇಕು. ಕೇವಲ ಗದಗ್ ಏರಿಯಾಕ್ಕೆ ತಾವು ಮಂತ್ರಿಗಳಾಗಿದ್ದೀರಿ ಎನ್ನುವ ಲೆಕ್ಕ ಹಿಡಿಯಬಾರದು. ಕೆಲವು ಇನ್‌ಸ್ಟಿಟ್ಯೂಷನ್ಸ್ ಅನ್ನು ಬಿಲ್ಡ್ ಅಪ್ ಮಾಡತಕ್ಕ ಬಗ್ಗೆ ತಾವು ಬಹಳ ಆಸಕ್ತಿ ವಹಿಸುವುದಕ್ಕೆ ಬದಲಾಗಿ ಇಡೀ ರಾಜ್ಯದ ಜನತೆಯ ಏಳಿಗೆಗೋಸ್ಕರ ತಾವು ಹೋರಾಟ ಮಾಡಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇವೆ. 35 ಹಾರ್ಸ್ ಪವರ್‌ನ ಟ್ರ್ಯಾಕ್ಟರ್ ನಮ್ಮ ಜಮೀನಿನಲ್ಲಿ ಒಂದು ಗಂಟೆ ಕೆಲಸ ಮಾಡಬೇಕಾದರೆ 18 ರೂಪಾಯಿ ಕೊಡಬೇಕು. 50 ಹಾರ್ಸ್ ಪವರ್‌ನ ಟ್ರ್ಯಾಕ್ಟರ್ ನಮ್ಮ ಜಮೀನಿನಲ್ಲಿ ಒಂದು ಗಂಟೆ ಕೆಲಸ ಮಾಡಬೇಕಾದರೆ, 25 ರೂಪಾಯಿ, 65 ಹಾರ್ಸ್ ಪವರ್‌ನ ಟ್ರ್ಯಾಕ್ಟರಿಗೆ ಒಂದು ಗಂಟೆಗೆ 30 ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಹಿಂದೆ 23 ರೂಪಾಯಿಗಳನ್ನು ಕೊಟ್ಟರೆ ಒಂದು ಎಕರೆ ಭೂಮಿಯನ್ನು ಉಳುಮೆ ಮಾಡುವ ಸಂದರ್ಭ ಇತ್ತು. ಇವತ್ತು ಇಂಜಿನಿಯರಿಂಗ್ ಸೆಕ್ಷನ್ ಅನ್ನು ಅವರಿಗೆ ಟ್ರಾನ್ಸ್‌ಫರ್ ಮಾಡಿದ ಮೇಲೆ ಒಂದು ಗಂಟೆಗೆ 60 ರೂಪಾಯಿ ಅನ್ನು ಉಳುಮೆ ಮಾಡುವುದಕ್ಕೆ ಕೊಡಬೇಕಾಗುತ್ತದೆ. ಡ್ರೈವರ್‌ಗೆ, ಇದನ್ನು ನಡೆಸತಕ್ಕವರಿಗೆ ಊಟ ಐದು ರೂಪಾಯಿ ಬೋನಸ್ ಕೊಟ್ಟುಕೊಂಡು ಬಂದರೆ ಏನಾಗುತ್ತದೆ? ರೈತನ ಆರ್ಥಿಕ ಪರಿಸ್ಥಿತಿಗೆ ಹೊಂದಿಕೊಳ್ಳತಕ್ಕ ರೀತಿಯಲ್ಲಿ ದರಗಳನ್ನು ನಿಗದಿ ಮಾಡಿದ್ದಾರೆಯೇ ಎಂದು ನಾನು ಹೇಳುತ್ತೇನೆ. ರಾಜ್ಯದಲ್ಲಿ 70 ಪರ್ಸೆಂಟ್ ರೈತಾಪಿ ಜನರು ಇದ್ದಾರೆ. ಇವರ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಈ ದಿಸೆಯಲ್ಲಿ ತಾವು ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ ಮಾನ್ಯ ಸಭಾಧ್ಯಕ್ಷಿಣಿಯವರೇ, ವ್ಯವಸಾಯ ಮಂತ್ರಿಗಳು ಬೋರ್ಡ್ ಆಫ್ ಡೈರೆಕ್ಟರ್ಸ್ ಮೀಟಿಂಗ್‌ಗೆ ಹೋಗುತ್ತಾರೆಂದು ಕೇಳಿದ್ದೇನೆ, ನಾನು ಅದಕ್ಕೆ ಅಡ್ಡಿ ಹಿಡಿಸುವುದಕ್ಕೆ ಹೋಗುವುದಿಲ್ಲ. ಅವರು ರೂಲ್ಸ್ ಪುಸ್ತಕ ತೆಗೆದಿದ್ದರು, ವಿರೋಧ ಪಕ್ಷದ ನಾಯಕರು ಆಪಾದನೆ ಮಾಡುವ ಕಾಲದಲ್ಲಿ ರೂಲ್ಸ್ ನೋಡಬೇಕು ಎಂದು. ಹೆಚ್ಚು ಇಲ್ಲದಿದ್ದರೂ ಮಾನ್ಯ ಕೆ. ಎಚ್. ಪಾಟೀಲರಷ್ಟೇ ನಾನು ರೂಲ್ಸ್ ಬಗ್ಗೆ ಅಭ್ಯಾಸ ಮಾಡಿಕೊಂಡಿದ್ದೇನೆ. ಬುಲ್ಡೋಜರ್‌ಗಳ ವ್ಯವಹಾರಕ್ಕೆ, ಟ್ರ್ಯಾಕ್ಟರ್ಸ್ ಏನು ಕೊಡುತ್ತಾರೆ ಅದಕ್ಕೆ ಸರ್ಕಾರ ಸಬ್ಸಿಡೈಸ್ ಮಾಡಬೇಕು. ಸರ್ಕಾರ ಇದರ ಬಗ್ಗೆ ಎಷ್ಟೇ ಖರ್ಚು ಮಾಡಲೀ, ಹಿಂದೆ ಒಂದು ಎಕರೆಗೆ ಏನು 25 ರೂಪಾಯಿ ಖರ್ಚು ಆಗುತ್ತಿತ್ತು ಆ ಮಟ್ಟಕ್ಕೆ ಸರ್ವಿಸ

(ಶ್ರೀ ಎಚ್. ಡಿ. ದೇವೇಗೌಡ)

ಕೊಡುವುದಕ್ಕೆ ಸರ್ಕಾರ ತನ್ನ ನೀತಿಯನ್ನು ಬದಲಾವಣೆ ಮಾಡಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಹುಲಕೋಟಿ ಸಂಸ್ಥೆ ಇದೆ, ಅದಕ್ಕೆ ಬುಲ್ಡೋಜರ್ ಸರ್ವಿಸ್ ಕೊಟ್ಟಿದ್ದೇವೆ. ಹಾರ್ಟಿಕಲ್ಚರಲ್ ಗಾರ್ಡನ್ ಮಾಡಿದ್ದೇವೆ ಎಂದು ಅವರು ಮಾನ್ಯ ಸಭೆಯಲ್ಲಿ ಹೇಳಿದರು. ಬುಲ್ಡೋಜರ್ ಸರ್ವೀಸ್ ಅನ್ನು ಅಗ್ರಿಕಲ್ಚರ್ ಪರ್ಪಸ್‌ಗೆ ಕೊಡುವುದಾದರೆ 60 ರೂಪಾಯಿ, ನಾನ್ ಅಗ್ರಿಕಲ್ಚರ್ ಪರ್ಪಸ್‌ಗೆ ಕೊಡುವುದಾದರೆ 90 ರೂಪಾಯಿ ಎಂದು ಇದೆ, ಇಲ್ಲಿ ವಾದ ವಿವಾದ ಪ್ರಾರಂಭವಾದದ್ದು. ಮ್ಯಾನೇಜಿಂಗ್ ಡೈರೆಕ್ಟರ್‌ಗೂ ಮತ್ತು ಕೆ.ಎಚ್. ಪಾಟೀಲ್‌ರಿಗೂ ಇಲ್ಲೇ ವಾದ ವಿವಾದ ನಡೆಯಿತು. ಅದನ್ನು ನಾನು ಇಲ್ಲಿ ಹೇಳುವುದಕ್ಕಾಗುವುದಿಲ್ಲ. ವಾದ ವಿವಾದ ಪ್ರಾರಂಭವಾದ ಮೇಲೆ ಆ ಅಧಿಕಾರಿಯನ್ನು ಹೊರಗೆ ಹಾಕಿದ್ದಾರೆ. ಅವರು ನಮ್ಮ ಚಿಕ್ಕಪ್ಪನ ಮಗ ಅಲ್ಲ, ಇನ್ನೊಬ್ಬರು ಬರುತ್ತಾರೆ. ನನ್ನ ಆಪಾದನೆ ಏನು ಎಂದರೆ, ನಾನ್ ಅಗ್ರಿಕಲ್ಚರ್ ಪರ್ಪಸ್‌ಗೆ ಬುಲ್ಡೋಜರ್ಸ್ ಕೊಡುವುದಕ್ಕೆ ಕೇಂದ್ರದ ಮಂತ್ರಿಗಳು ಬಂದು ಅಸ್ತಿಭಾರವನ್ನು ಹಾಕಿದರು. ಈ ನೀತಿಯಿಂದ ಬುಲ್ಡೋಜರ್ಸ್‌ನ್ನು ನಮ್ಮ ನಿಮ್ಮ ರೈತರು ತೆಗೆದುಕೊಳ್ಳಬೇಕಾದರೆ ಅದಕ್ಕೆ ಅರ್ಜಿಯನ್ನು ಕೊಡಬೇಕು, ಡಿಪಾಸಿಟ್ ಕೊಡಬೇಕು, ಆಮೇಲೆ ಇವರು ಸರ್ವೀಸ್ ಕೊಡಬೇಕು. ಇಷ್ಟು ಮಾತ್ರ ಹೇಳುತ್ತೇನೆ, ಈ ಸಂಸ್ಥೆಯ ಚೇರ್ಮನ್ Senior-most IAS officer. ಅವರು ಇದಕ್ಕೆ ಅವಕಾಶ ಕೊಡಬಾರದು. ರಾಜಕಾರಣಿಗಳ ಆಯುಷ್ಯ ಅಲ್ಪ. ಇವತ್ತು ಇರುತ್ತೇವೆ ನಾಳೆ ಹೋಗುತ್ತೇವೆ. ನಮ್ಮ ಹಿರಿಯ ಅಧಿಕಾರಿಗಳು ಐ. ಎ. ಎಸ್ ಆದವರು ರಾಜಕಾರಣಿಗಳ ಒತ್ತಡಕ್ಕೆ ಮಣಿಯಬಾರದು. ಈ ಒಂದು ವ್ಯವಹಾರದಲ್ಲಿ ನಾನ್ ಅಗ್ರಿಕಲ್ಚರ್ ಪರ್ಪಸ್ ಗೆ ಏನು ಬಿಲ್ ಮಾಡಿದರು? ನಾನ್ ಅಗ್ರಿಕಲ್ಚರಲ್ ಪರ್ಪಸ್‌ಗೆ ಏನು ರೇಟು ಇತ್ತು, ಅದನ್ನು ಕಿತ್ತು ಹಾಕಿ ಯಾವುದಕ್ಕೆ ಎಂದು ಕೊಟ್ಟರು? ಅದನ್ನು ಅಗ್ರಿಕಲ್ಚರ್ ಪರ್ಪಸ್ ಆಗಿ ಟ್ರೀಟ್ ಮಾಡಬೇಕು ಎಂದು ಒಂದು ಹೊಸ ನಿರ್ಣಯ ತೆಗೆದುಕೊಂಡಿದ್ದಾರೆ ಎಂದು ಕೇಳಿದ್ದೇನೆ. ಇದು ಹಸ್ತಕ್ಷೇಪ ಅಲ್ಲವೇ ? ಇದನ್ನು ಹಸ್ತಕ್ಷೇಪ ಎಂದು ಕರೆಯೋಣವೇ ? ಅಥವಾ ಇದು ರಾಜ್ಯದ ಜನತೆಯ ಹಿತದೃಷ್ಟಿಯಿಂದ ತೆಗೆದುಕೊಂಡಂಥ ನಿರ್ಣಯ ಎಂದು ಕರೆಯೋಣವೇ? ಯಾವ ನಿರ್ಣಯ ಎಂದು ಕರೆಯಬೇಕು ಮಾನ್ಯ ಮಲ್ಲಪ್ಪನವರೇ ದಯ ಮಾಡಿ ತಿಳಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ರೈತರಿಗೆ ಟ್ರಾನ್ಸ್‌ಪೋರ್ಟ್ ಚಾರ್ಜಸ್ ಬಗ್ಗೆ ಏನು ರೇಟ್ ಇದೆ? ಅವರು ಗದ್ದೆಗೆ ಔಷಧಿ ಹೊಡೆಯಬೇಕು ಎಂದರೆ ಔಷಧಿಯಿಲ್ಲ. ನಾವು ಏನು ಮಾಡುವುದು? ಪರಿಸ್ಥಿತಿ ಹಾಗೆ ಇದೆ. ರೈತರ ಬಗ್ಗೆ ಬೇಕಾದಷ್ಟು ಮಾತನಾಡುತ್ತಾರೆ. ರೈತರು ಸರ್ಕಾರದ ಬೆನ್ನುಮೂಳೆ ಎಂದು ಹೇಳುತ್ತಿದ್ದು ಅದು ಮರೆತು ಹೋಯಿತು. ಇವತ್ತು ರೈತನ ಸ್ಥಿತಿಯನ್ನು ನೋಡುವುದಕ್ಕಾಗುವುದಿಲ್ಲ?

ಶ್ರೀ ಎಂ. ಮಲ್ಲಪ್ಪ.—ಸೀಮೆ ಎಣ್ಣೆ ಅಭಾವ ಇಡೀ ಭಾರತದಲ್ಲೇ ಇದೆ, ಪ್ರಪಂಚದಲ್ಲೇ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ಉಳಿದಿರುವುದು ಒಂದೇ. ರಿಗ್ಸ್ ಕೂಡ ಹೊರಗಡೆಯಿಂದ ತರತಕ್ಕದ್ದು ಇದೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ರಿಗ್ಸ್ ಕೊಡತಕ್ಕ ಕಾಲದಲ್ಲಿ ಚಾರ್ಜ್ ಮಾಡುತ್ತಾರೆ, ಪರ್ ಫೀಟ್ 35 ರೂಪಾಯಿಗಳು, ಇದಕ್ಕಿಂತ ಚೀಪ್ ಹೊರಗಡೆ ಖಾಸಗಿ ಸಂಸ್ಥೆಗಳಲ್ಲಿ ಸಿಕ್ಕುತ್ತವೆಂದು ತಿಳಿದುಕೊಂಡಿದ್ದೇನೆ, ರಿಗ್ಸ್ ಕೊಡತಕ್ಕ, ಟ್ರ್ಯಾಕ್ಟರ್ಸ್ ಕೊಡತಕ್ಕ ಬುಲ ಡೋಜರ್ಸ್ ಕೊಡತಕ್ಕ ಕಾಲದಲ್ಲಿ ಸಬ್ಸಿಡೈಸ್ಡ್ ರೇಟಿನಲ್ಲಿ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಕೊನೆಯದಾಗಿ 1971-72 ನೇ ಸಾಲಿನಲ್ಲಿ ಕಾಟನ್ ಕಲ್ಟಿವೇಷನ್‌ಗೆ ಸಂಬಂಧಪಟ್ಟಂಥ ಸಬ್ಸಿಡಿ ಏನು ಕೊಟ್ಟಿದ್ದಾರೆ, 1971—72 ಮಾರ್ಚಿ 31 ರಲ್ಲಿ ಹಣ ಸೇವಿಂಗ್ಸ್ ಆಗಬಾರದು ಎಂದು ನಮ್ಮ ವ್ಯವಸಾಯದ ಇಲಾಖೆಯವರು ಖರ್ಚು ಮಾಡಬೇಕಾಗಿದ್ದಂಥ ಹಣವನ್ನು ಡ್ರಾ ಮಾಡಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ವತಿಯಿಂದ ಇಟ್ಟ ಹಣ ಹೇಗೆ ವಿತರಣೆಯಾಗಿದೆ; 1973—74 ರಲ್ಲಿ ಸಬ್ಸಿಡಿ ಹಣ ಖರ್ಚಾಗಿದೆ. ಅದರಲ್ಲಿ ಗದಗ್ ಕೋ ಆಪರೇಟಿವ್ ಕಾಟನ್ ಸೊಸೈಟಿಗೆ ಎಷ್ಟು ಹೋಗಿದೆ: ಆಮೇಲೆ ರಾಜ್ಯದ ಬೇರೆ ಬೇರೆ ಭಾಗದಲ್ಲಿ ಇರುವವರಿಗೆ ಎಷ್ಟು ಹೋಗಿದೆ; 16 ಲಕ್ಷ ರೂಪಾಯಿ ಹಣದಲ್ಲಿ ಗದಗ್ ಕಾಟನ್ ಕೋ ಆಪರೇಟಿವ್ ಸೊಸೈಟಿ ಮುಖಾಂತರ ಎಷ್ಟು ವಿತರಣೆಯಾಗಿದೆ; ಫರ್ಟಿಲೈಸರ್ಸ್ ಸಬ್ಸಿಡಿ ಕೊಟ್ಟಿರತಕ್ಕದ್ದು, ಪೆಸ್ಟಿಸೈಡ್ ಸಬ್ಸಿಡಿ ಕೊಟ್ಟಿರತಕ್ಕದ್ದು ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣ ಉಪಯೋಗವಾಗಿದೆ; ಯಾವ ಸಂಸ್ಥೆ ಮುಖಾಂತರ ರೈತರಿಗೆ ವಿನಿಯೋಗವಾಗಿದೆ ಎನ್ನತಕ್ಕ ಎಲ್ಲಾ ವಿವರಗಳನ್ನು ಸಭೆಯ ಮುಂದೆ ಇಡಿಸಬೇಕೆಂದು ಅಧ್ಯಕ್ಷಿಣಿಯವರಲ್ಲಿ ಕೇಳುತ್ತೇನೆ. ಹಾರಿಕೆ

ಉತ್ತರ ಕೊಡುವ ಮುಖಾಂತರ ಸರ್ಕಾರದವರು ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆ ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ 16 ಲಕ್ಷ ರೂಪಾಯಿ ವ್ಯವಹಾರದ ಬಗ್ಗೆ ಸರ್ಕಾರ ಎಲ್ಲಕ್ಕೂ ವಿವರಣೆಗಳನ್ನು ಕೊಡಬೇಕು. ಬಹುತೇಕ ಹಣ, ಬಹುಶಃ ಪೂರ್ತಿ ಹಣ ಎಂದರೂ ತಪ್ಪಾಗುವುದಿಲ್ಲ. ಈ 16 ಲಕ್ಷ ರೂಪಾಯಿ ಗದಗ್ ಕಾಟನ್ ಕೋ ಆಪರೇಟಿವ್ ಸೊಸೈಟಿ ಮುಖಾಂತರವೇ ವಿತರಣೆ ಆಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಈ ವ್ಯವಹಾರವನ್ನು ಅವ್ಯವಹಾರ ಎಂದು ಕರೆಯೋಣವೇ? ಅಥವಾ ಸುವ್ಯವಹಾರ ಎಂದು ಕರೆಯೋಣವೇ? ಈ ಎಲ್ಲಾ ವಿವರಗಳನ್ನು ಇಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಬಗ್ಗೆ ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ನಾನು ಬಹಳ ಕಾಲವನ್ನು ತೆಗೆದುಕೊಂಡಿದ್ದೇನೆ. ನನ್ನ ಮಿತ್ರರು ಅನೇಕರು ಚೀಮಾರಿ ಹಾಕತಕ್ಕ ಕಾಲ ಬರುತ್ತದೆ. ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಅಲ್ಲಿಯ ಅಧಿಕಾರಿಗಳ ಬಗ್ಗೆ ನನ್ನ ಅಪಾದನೆಯಿಲ್ಲ ಆದರೆ ಇಷ್ಟು ಮಾತ್ರ ಹೇಳುತ್ತೇನೆ, ಅಧಿಕಾರಿಗಳು ರಾಜಕಾರಣಿಗಳು ಆಗಬಾರದು, ಆ ಪ್ರವರ್ತನೆಯನ್ನು ಬೆಳೆಸಲಿಕ್ಕೆ ಮಂತ್ರಿಗಳು ಕೂಡ ಅವಕಾಶ ಕೊಡಬಾರದು, ಇಷ್ಟು ಹೇಳುತ್ತೇನೆ ಯಾರು ಸತ್‌ಸಂಪ್ರದಾಯವನ್ನು ಹಾಕಿ ಕೊಂಡು ರಾಜ್ಯದಲ್ಲಿ ಆಡಳಿತವನ್ನು ನಡೆಸುತ್ತಾರೆ ಅವರು ಏನು ಘೋಷಣೆ ಮಾಡುತ್ತಾರೆ ಅದರಂತೆ ನಡೆಯಬೇಕು. ಆ ಸತ್‌ಸಂಪ್ರದಾಯವನ್ನು ಮರೆತು ಇಂದು ಅದು ನುಚ್ಚು ನೂರಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ನನ್ನ ಮಿತ್ರರು ಆಗಿರತಕ್ಕ ದಿವಂಗತ ಗೋಪಾಲಗೌಡರು ಒಂದು ಮಾತು ಹೇಳಿರುವುದನ್ನು ಮುಖ್ಯಮಂತ್ರಿಗಳು ಸಭೆಯಲ್ಲಿ ಇಲ್ಲ – ಬೆಳಿಗ್ಗೆ ಮಾತನಾಡುವಾಗ ಹೇಳಿದೆ. ರಾಜ್ಯದಲ್ಲಿ ಒಬ್ಬ ನಾಯಕ ಅಧಿಕಾರಕ್ಕೆ ಬಂದರೆ ರಾಜ್ಯದ ವ್ಯವಹಾರವನ್ನು ನಿರ್ವಹಣೆ ಮಾಡುವುದಕ್ಕೆ ಅವರಿಗೆ ಸಾಕಷ್ಟು ಅವಕಾಶ ಸಿಗಬೇಕು. ಈಗ ರಾಜಕೀಯ ವಿಚಾರ ಮಾತನಾಡುವುದಕ್ಕೆ ನಾನು ಹೋಗುವುದಿಲ್ಲ ಆದರೆ ಮುಖ್ಯಮಂತ್ರಿಯವರ ಅಳಿಯಂದಿರ ವ್ಯಾಪಾರ ಎಲ್ಲಾ ಕಡೆ ಪ್ರಸರಿಸಿದೆ. It is just like a cancer ಗ್ರೇಪ್ ಗ್ರೋಯರ್ಸ್ ಕೋ ಆಪರೇಟಿವ್ ಸೊಸೈಟಿಗೆ ಅವರು ವೈಸ್ ಪ್ರೆಸಿಡೆಂಟ್ ಹಾರ್ಟಿಕಲ್ಚರ್ ಡೈರೆಕ್ಟರ್ ಪ್ರೆಸಿಡೆಂಟ್ 5 ಲಕ್ಷ ರೂಪಾಯಿ ವಂತಿಗೆ ಕೊಡುವುದಕ್ಕೆ ಸರ್ಕಾರ ಮುಂದೆ ಬಂದಿದೆ, ಫೈನಾನ್ಸಿಯಲ್ ಅಸಿಸ್ಟೆನ್ಸ್ ಕೇಳಿದ್ದಾರೆ. ಅದು ಇನ್ನೂ ಕೊಟ್ಟಿಲ್ಲ, ಅವರ ಬಗ್ಗೆ ಅವರ ಒತ್ತಡ ಕೂಡ ಇದೆಯೆಂದು ಕೇಳಿದ್ದೇನೆ. ಒಂದು ಮಾತು ಹೇಳುತ್ತೇನೆ, ರಾಜ್ಯದಲ್ಲಿ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಆದರೆ ಒಂದು ಸಾರಿ ಅನಿಸುತ್ತದೆ 1500 ರೂಪಾಯಿ 2 ಸಾವಿರ ರೂಪಾಯಿ ಅವರಿಗೆ ಬರತಕ್ಕ ಸಂಬಳವನ್ನು ಯಾರೂ ತಪ್ಪಿಸುವುದಕ್ಕೆ ಸಾಧ್ಯವಿಲ್ಲ. At the mos; they can transper them. ಅದು ವಿನಃ ಇನ್ನು ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಇವರ ಕೈಯಲ್ಲಿ ಇದ್ದೇವೆಂದು ಅವರು ಹೆದರಬೇಕಿಲ್ಲ, ಅನ್ಯಾಯ ಮಾಡಿದರೆ ಕೋರ್ಟಿಗೆ ಹೋಗಬಹುದು. ನಮ್ಮ ಸೀನಿಯರ್ ಆಫೀಸರ್ಸ್‌ಗಳನ್ನು ನಾನು ಕೇಳಿಕೊಳ್ಳುವುದೇನೆಂದರೆ ಸಮಯ ಬಂದಾಗ ಅವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಹಿಂದುಮುಂದೆ ನೋಡಬಾರದು. I appeal throug this House that every senior officer must rise up to the occasion. ಕೇವಲ 3ನೇ ದರ್ಜೆ 4ನೇ ದರ್ಜೆ ನೌಕರರಂತೆ ಕ್ರಿಂಜ್ ಮಾಡಬೇಕಿಲ್ಲ. ಸಣ್ಣ ಪುಟ್ಟ ಲಾಭಕ್ಕೋಸ್ಕರ ಮಂತ್ರಿಗಳ ಬಾಲಬಡಕರ ಹಾಗೆ ವರ್ತನೆ ಮಾಡುವ ಪ್ರವೃತ್ತಿಯನ್ನು ಹಿರಿಯ ಅಧಿಕಾರಿಗಳು ತಡೆಗಟ್ಟಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಿ, ಇವೊತ್ತು ಹಾರ್ಟಿಕಲ್ಚರ್ ಬಗ್ಗೆ ಹೇಳುವುದಾದರೆ ಡಿಪಾರ್ಟ್‌ಮೆಂಟ್ ಬೆಳೆದಿದೆ. ಮೊದಲು ಬರೀ ಲಾಲ್‌ಬಾಗ್ ಪ್ರೆಮಿಸಸ್ ಒಳಗೆ ಇದ್ದು ಮುಂದೆ ಹೋಗಿರಲಿಲ್ಲ. ಬಹುಶಃ ಶ್ರೀ ನಾರಾಯಣಗೌಡರು ಬಂದ ಮೇಲೆ ಅದಕ್ಕೆ ಹೊಸ ಶಕ್ತಿ ಬಂತು ಎಂದು ತಿಳಿದುಕೊಂಡಿದ್ದೇನೆ, ಅದು ಬೆಳೆದುಕೊಂಡು ಬಂದಿದೆ. ಅಲ್ಲಿ ಏನು ಕೆಲಸ ಮಾಡಲಿಲ್ಲ ಎಂದು ನಾನು ಹೇಳುತ್ತಾ ಇಲ್ಲ ಈ ಡಿಪಾರ್ಟ್‌ಮೆಂಟಿನಲ್ಲಿ ಇರತಕ್ಕ ಲೋಪದೋಷಗಳ ಬಗ್ಗೆ ಹಲವಾರು ವಿಷಯಗಳು ಇವೆ. ಅದನ್ನು ಈ ಸಭೆಯಲ್ಲಿ ಇಡುವುದಕ್ಕೆ ನಾನು ಹಿಂದೆಮುಂದೆ ನೋಡುವುದಿಲ್ಲ, ಇವೊತ್ತು ಶ್ರೀಮಾನ್ ಹನುಮೇಗೌಡರು ಸೋಮನಹಳ್ಳಿಯ ಪೊಟೆಟೋ ಗತಿ ಏನಾಗಿದೆ ಎಂದು ಹೇಳುತ್ತಾರೆ, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ರೆಸಲ್ಯೂಷನ್ ಆಗಿದೆ, ಅಲ್ಲಿ ಏನು ಅವ್ಯವಹಾರ ನಡೆಯುತ್ತಿದೆ ಎಂಬ ಎಲ್ಲಾ ಮಾಹಿತಿ ಕೊಟ್ಟು ಹನುಮೇಗೌಡರು ಮಾತನಾಡುವವರು ಇದ್ದಾರೆ. ಹಾಸನದಲ್ಲಿ ಕೋಲ್ಡ್ ಸ್ಟೋರೇಜ್ ಹಾಕಬೇಕು ಎಂದು ಪದೇ ಪದೇ ಹೇಳಿರುವುದನ್ನೇ ಹೇಳುತ್ತಾರೆ. ಮಂತ್ರಿಗಳು ಜವಾಬ್ದಾರಿ ರಹಿತವಾಗಿ ಮಾತನಾಡಬಾರದು ಎಂದು ಹೇಳಿದರು. ಹುಲುಕೋಟೆ ಸೊಸೈಟಿ ಚೇರ್‌ಮನ್ ಅವರ ಅಣ್ಣನ ಮಗ ಎಂದು ಹೇಳಿದಾಗ ಅಲ್ಲ ಎಂದು ಹೇಳಿದರು. ನನಗೆ ತಿಳಿದಹಾಗೆ ಮೇಲ್ಮನೆಯಲ್ಲಿ ಅಸೆಟ್ಸ್ ಮತ್ತು ಲಯಾಬಿಲಿಟಿಸ್ ಮಂತ್ರಿಗಳು ಇಟ್ಟಿರತಕ್ಕಂಥದ್ದು ತೋರಿಸಿದೆ. ಡೆಪಾಸಿಟ್ ವಿಶಾಲ ಕರ್ನಾಟಕ ಡೈಲಿ ನ್ಯೂಸ್ ಪೇಪರ್, ಹುಬ್ಬಿ ಇದರಲ್ಲಿ ನೋಡಿದೆ. ಅದು ಎಷ್ಟಾದರೂ

(ಶ್ರೀ ಎಚ್. ಡಿ. ದೇವೇಗೌಡ)

ಮಾಡಿಕೊಳ್ಳಲಿ, ಷೇರ್ ಇನ್ ಡೆಪಾಸಿಟ್, ವೇಸ್ ಅಂಡ್ ಮೀನ್ಸ್ ಅಡ್ಡಿಬರುವುದಿಲ್ಲ. ಕ್ಯಾಪಿಟಲ್ ಇನ್ ಕೃಷ್ಣ ಡೈರಿ ಫಾರಂ ಅಟ್ ಹುಲುಕೋಟೆ. ಈ ಬಗ್ಗೆ ಹೋದ ಸಾರಿ ಹೇಳಿದಾಗ ನನ್ನನ್ನು ಪೂರ್ ಫೆಲೋ ಎಂದು ಕರೆದರು, ನಾನು ಹೇಳಿದೆ ನಾನು ಸಣ್ಣ ಮನುಷ್ಯ, ದೊಡ್ಡ ಮನುಷ್ಯ ಆಗುವುದಕ್ಕೆ ಸಾಧ್ಯವಿಲ್ಲ. ದೊಡ್ಡ ಮನುಷ್ಯ ಆಗಬೇಕಾದರೆ ಬೇರೆ ಬೇರೆ ಕಡೆಗಳಿಂದ ಹಣ ಬಂದು ಸೇರಿದರೆ ದೊಡ್ಡ ಮನುಷ್ಯ ಆಗುವುದಕ್ಕೆ ಸಾಧ್ಯವಾಗುತ್ತದೆ ಎಂದು. ನನಗೆ ಆ ಆಶೆ ಇಲ್ಲ. ಕೃಷ್ಣ ಡೈರಿ ಫಾರಂ ಅಟ್ ಹುಲುಕೋಟೆ ಇವರ ಹೆಸರಿನಲ್ಲಿ 50 ಸಾವಿರ ರೂಪಾಯಿ ಬಂಡವಾಳ ಇದೆ.

4–00 P.M.

ಅವರ ಮನೆ ಮಕ್ಕಳ ಹೆಸರು ಹೇಳುವುದು ಬೇಡ. ಅದನ್ನು ಅವರು ಕೊಟ್ಟಿರತಕ್ಕಂಥ ಅಸೆಟ್ಸ್ ಅಂಡ್ ಲಯಬಿಲಿಟೀಸ್ ಸ್ಟೇಟ್‌ಮೆಂಟ್‌ನಲ್ಲಿ ಹೇಳಿಕೊಂಡಿದ್ದಾರೆ. ಮತ್ತು ಹುಲಕೋಟಿ ಕೋಆಪರೇಟಿವ್ ಕ್ಯಾಟಲ್ ಫೀಡಿಂಗ್ ಸೊಸೈಟಿ ಬಗ್ಗೆ ಹೇಳುತ್ತೇನೆ. ಅದು ನನಗೆ ಸಂಬಂಧವೇ ಇಲ್ಲ ಎಂದು ಹೇಳುತ್ತಾರೆ. ಈವೊತ್ತು ಮೇಲ್ಮನೆಯಲ್ಲಿ ಉತ್ತರ ಕೊಟ್ಟಿದ್ದಾರೆ, 8 ಲಕ್ಷ ಚಿಲ್ಲರೆ ರೂಪಾಯಿ ಇದೆ ಎಂದು ಉತ್ತರ ಕೊಟ್ಟಿದ್ದಾರೆ. ಹಾಗಾದರೆ ಇದು ಶ್ರೀಮಂತ ಮನೆತನದವರಿಂದ ಬಂದ ಬಂಡವಾಳವೇ. ಇದರ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಪ್ರಾರಂಭದಲ್ಲಿ ಕೆ. ಎಚ್. ಪಾಟೀಲರ ಆಸ್ತಿ ಏನು ಇತ್ತು, ಈವೊತ್ತು ಏನು ಇದೆ ನೋಡಿ, ಹಾಗೆಯೇ ಎಚ್. ಡಿ. ದೇವೇ ಗೌಡರ ಆಸ್ತಿ ಬಗ್ಗೆ ಹೇಳುವುದಾದರೆ ನಾನು ರಾಜಕಾರಿಣಿಯಾಗಿ ಬರುವುದಕ್ಕೆ ಮುಂಚೆ ನಮ್ಮ ತಂದೆ ಆಸ್ತಿ ಏನು ಇತ್ತು, ಈವೊತ್ತು ಎಷ್ಟು ಮಾಡಿದ್ದೇನೆ ಅದನ್ನೂ ಹೇಳುತ್ತೇನೆ. ಆದುದ ರಿಂದ ಈ ಬಗ್ಗೆ ತನಿಖೆ ಆಗಬೇಕು ಎಂದು ಹೇಳುತ್ತೇನೆ.

Sri D. B. KALMANKAR.—If the hon. Member thinks that the Hon. Minister has made a wrong statement and that his information is authoritative, why does he not bring in a privilege motion ? This is the statement laid on the Table of Upper House.

ಶ್ರೀ ಹೆಚ್. ಡಿ. ದೇವೇಗೌಡ.— ಈ ಬಗ್ಗೆ ದಿಗಂಬರರಾವ್ ಅವರಿಗೆ ಹೇಳಬೇಕಾದರೆ ಸರ್ಕಾರ ದವರೇ ಮೇಲ್ಮನೆಯಲ್ಲಿ ಮಂತ್ರಿಗಳ ಆಸ್ತಿಪಾಸ್ತಿ ವಿವರಗಳ ಬಗ್ಗೆ ಒದಗಿಸಿದ್ದಾರೆ. ಪ್ರಿವಿಲೇಜ್ ಮೋಷನ್ ತರಬೇಕಾದರೆ ತರೋಣ. ಅದಕ್ಕೆ ಅಧ್ಯಕ್ಷರು ಅನುಮತಿ ಕೊಡುತ್ತಾರೆಂದು ನಾನು ಆಶಿಸುತ್ತೇನೆ. ಪಾರ್ಲಿಮೆಂಟ್‌ನಲ್ಲಿ ಈ ಬಗ್ಗೆ ಶ್ರೀಮಾನ್ ಧಿಲ್ಲಾನ್‌ರವರು ಕೊಟ್ಟಿರತಕ್ಕಂಥ ರೂಲಿಂಗ್ ತಮಗೆ ಗೊತ್ತಿದೆ. ಆದರೆ ಆ ಪ್ರಿವಿಲೇಜ್ ಮೋಷನ್ ಗತಿ ಏನಾಗುತ್ತೆ ಅಂತ ಗೊತ್ತು. ಅದನ್ನು ನೀವೂ ಕೂಡ ತಿಳಿದುಕೊಂಡಿದ್ದೀರಿ, ಹೆಚ್ಚಿಗೆ ವ್ಯಾಖ್ಯಾನ ಬೇಡ. ಶ್ರೀಮಾನ್ ಕೆ. ಎಚ್. ಪಾಟೀಲರು ಮಾಹೆಯಾನಾ 80 ರೂಪಾಯಿ ಸಂಬಳದ ಮೇಲೆ ಒಂದು ಸಹಕಾರಿ ಸಂಘದಲ್ಲಿ ನೌಕರ ರಾಗಿದ್ದರು ಎಂದು ತಿಳಿದುಕೊಂಡಿದ್ದೇನೆ. ಇದರಲ್ಲಿ ತಪ್ಪು ಇದ್ದರೆ ತಿದ್ದಿಕೊಳ್ಳುತ್ತೇನೆ. ಒಂದಾ ನೊಂದು ಕಾಲದಲ್ಲಿ ಅದರಲ್ಲಿ ಒಂದು ವರ್ಷ ಕೆಲಸ ಮಾಡಿದ್ದರು ಎಂದು ತಿಳಿದುಕೊಂಡಿದ್ದೇನೆ. ಹೀಗಿದ್ದವರು ಈಗ 8 ಲಕ್ಷ ರೂಪಾಯಿ ಆಸ್ತಿ ಸಂಗ್ರಹ ಮಾಡಿದ್ದಾರೆ ಎಂದರೆ ಬಹುಶಃ ಉದ್ಯೋಗ ಮಾಡಿ ಮಾಡಿರಬಹುದು.

ಶ್ರೀ ಎಂ. ಎಸ್. ಕೃಷ್ಣನ್.—80 ರೂಪಾಯಿನಿಂದ 8 ಲಕ್ಷ ರೂಪಾಯಿ ಮಾಡಲು ಹೇಗೆ ಸಾಧ್ಯ ? ಯಾವ ಕಾರ್ಮಿಕ ಇಷ್ಟೊಂದು ಮಾಡಿದ್ದಾನೆ ತಿಳಿಸಿ.

Sri H. D. DEVEGOWDA —A talented business man can build up his assets. ಆದುದರಿಂದ ಈ ಬಗ್ಗೆ ತನಿಖೆ ಆಗಬೇಕು ಎಂದು ಹೇಳುತ್ತೇನೆ.

ಇನ್ನು ಮುಖ್ಯಮಂತ್ರಿಗಳು ಲೋಕಪಾಲ, ಲೋಕ ಆಯುಕ್ತ ಮಸೂದೆಯನ್ನು ತರುತ್ತೇವೆ ಎಂದು ಹೇಳಿದ್ದರು. ಆದರೆ ಈವೊತ್ತಿನ ಇವರ ಪರಿಸ್ಥಿತಿಯನ್ನು ನೋಡಿದರೆ ಅದನ್ನು ತರುತ್ತಾರೋ ಇಲ್ಲವೋ ಗೊತ್ತಿಲ್ಲ. The latest developments during the last three or four days are going fast. At this rate I do not have the confidence whether the

Chief Minister will be in a position to bring the Lok Pal or Lokayukt Bill. But I want such a measure to enquire into the assets and liabilities of every politician, ಮಿನಿಸ್ಟರ್ ಆಗಿರಲಿ, ಪಾಲಿಟಿಷಿಯನ್ ಆಗಿರಲಿ ಅವರು ಯಾರೇ ಆಗಿರಲಿ ತನಿಖೆ ಆಗಬೇಕು.

ಇನ್ನು ಕೊನೆಯದಾಗಿ ಒಂದೇ ಒಂದು ಮಾತನ್ನು ಹೇಳುತ್ತೇನೆ. ಶ್ರೀಮಾನ್ ಕೆ. ಎಚ್. ಪಾಟೀಲ್‌ರವರು ಕೇವಲ ಗದಗ್ ಮತ್ತು ಅಕ್ಕಪಕ್ಕದ ಸಹಕಾರೀ ಸಂಸ್ಥೆಯ ಬೆಳವಣಿಗೆಯಲ್ಲಿ ಏನು ಒಂದು ಆಸಕ್ತಿಯನ್ನು ಇಟ್ಟುಕೊಂಡಿದ್ದಾರೋ ಅದನ್ನು ಮಾರತು ರಾಜ್ಯದ 70 ಪರ್ಸೆಂಟ್ ಇರತಕ್ಕ ವಕ್ಕಲಿಗರ ಏಳಿಗೆಗಾಗಿ ಎಂದರೆ ರಾಜ್ಯದಲ್ಲಿರುವ ನತದೃಷ್ಟ ರೈತರು ಸುಮಾರು $2\frac{1}{2}$ ಕೋಟಿ ಜನರು ಏನು ಇದ್ದಾರೋ, ಈ ವ್ಯವಸಾಯ ಉದ್ಯಮದಲ್ಲಿ ನಿರತರಾಗಿರತಕ್ಕಂಥಾವರಿಗೆ ಅವರ ಏಳಿಗೆಗಾಗಿ ದುಡಿಯಬೇಕು. ಇಲ್ಲದೇ ಹೋದರೆ ಅವರು ಆ ಸ್ಥಾನವನ್ನು ಖಾಲಿ ಮಾಡಿ, ತೆರವು ಮಾಡಿಕೊಟ್ಟು ಚೆನ್ನಾಗಿ ದುಡಿಯುವ, ನಿಷ್ಠೆಯಿಂದ ಕೆಲಸ ಮಾಡುವ ಯೋಗ್ಯ ವ್ಯಕ್ತಿಗೆ ಬಿಟ್ಟುಕೊಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಅಧ್ಯಕ್ಷರೆ, ಕೃಷಿ ಮಂತ್ರಿಗಳು ಮಂಡಿಸಿದಂಥ 14 ಕೋಟಿ ಚಿಲ್ಲರೆ ರೂಪಾಯಿಗಳ ಬೇಡಿಕೆಗೆ ನನ್ನ ಅನುಮೋದನೆಯನ್ನು ಕೊಡುವುದರ ಸಲುವಾಗಿ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಮೊಟ್ಟ ಮೊದಲನೆಯದಾಗಿ ಹೇಳುವುದಾದರೆ ಈ ದೇಶದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ವಾಸ ಮಾಡತಕ್ಕಂಥಾವರ ಮೂಲಉದ್ಯೋಗ ಕೃಷಿ. ಈ ದೇಶದಲ್ಲಿ ವ್ಯವಸಾಯವನ್ನು ಅವಲಂಬಿಸಿಕೊಂಡಿರತಕ್ಕಂಥ ಸುಮಾರು 100ಕ್ಕೆ 70 ಜನ ಇರುವಂಥ ವಕ್ಕಲಿಗ ಏನು ಇದ್ದಾನೋ ಅವನು ಅಜ್ಞಾನಿ. ಆ ರೀತಿ ಇರುವ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವ ಯೋಜನೆಯನ್ನು ಈ ವ್ಯವಸಾಯ ಇಲಾಖೆಯಲ್ಲಿ ಅಷ್ಟೊಂದು ಕ್ರಮಬದ್ಧವಾಗಿ ಹಾಕಿಕೊಂಡಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಅವರನ್ನು ಅಕ್ಷರಸ್ಥರನ್ನಾಗಿ ಮಾಡುವ ಯೋಜನೆಯನ್ನು ಶ್ರೀ ಬದ್ರಿನಾರಾಯಣ್‌ರವರು ಹಾಕಿಕೊಂಡಿದ್ದಾರೆ. ಅವರನ್ನು ಯಾವ ಅಕ್ಷರಸ್ಥರನ್ನಾಗಿ ಮಾಡುತ್ತಾರೋ ನೋಡಬೇಕು. ಈವೊತ್ತು ಇರತಕ್ಕಂಥ ವಕ್ಕಲಿಗನ ವಿಷಯದಲ್ಲಿ ಹೇಳಬೇಕಾದರೆ ಅವನು ದಡ್ಡ. ಹೇಗೆಂದರೆ ಈ ವಕ್ಕಲಿಗನ ಮನೆತನದಲ್ಲಿ ಬುದ್ಧಿವಂತನಾಗಿರುವವನು ಇದ್ದರೆ, ನೌಕರಿಗೆ ಕಳಿಸುತ್ತಾರೆ, ಅದಕ್ಕಿಂತ ಕಡಿಮೆ ಬುದ್ಧಿ ಇದ್ದರೆ ವ್ಯಾಪಾರಕ್ಕೆ ಹಾಕುತ್ತಾರೆ, ದಡ್ಡನಾಗಿರುವವರನ್ನು ಇದ್ದರೆ ಅವನನ್ನು ವಕ್ಕಲುತನಕ್ಕೆ ಬಿಟ್ಟುಬಿಡುತ್ತಾರೆ. ಆ ರೀತಿಯಾಗಿ ಈ ದಡ್ಡರನ್ನು ವಿದ್ಯಾವಂತರನ್ನಾಗಿ ಮಾಡಿ ಉದ್ಯೋಗದ ಕಡೆಗೆ ಕಳಿಸುವುದಕ್ಕೆ ಅಷ್ಟೊಂದು ಗಮನ ಕೊಡುವುದಿಲ್ಲ ಆದುದರಿಂದ ಈ ಬಗ್ಗೆ ನಾನು ಒಂದು ವಿಷಯವನ್ನು ಹೇಳಬೇಕಾಗಿದೆ. ಈವೊತ್ತಿನ ದಿವಸ ಈ ಒಂದು ಡಿಮ್ಯಾಂಡ್‌ಗೆ 14 ಕೋಟಿ ಚಿಲ್ಲರೆ ರೂಪಾಯಿ ಇಟ್ಟಿರತಕ್ಕಂಥಾದ್ದನ್ನು ನೋಡಿದರೆ ಅದರಲ್ಲಿ 30 ಪರ್ಸೆಂಟು ಈ ವ್ಯವಸಾಯದ ಸಿಬ್ಬಂದಿಗಾಗಿ ಖರ್ಚಾಗುತ್ತದೆ. ಇನ್ನು ಉಳಿದದ್ದು 9 ಕೋಟಿ ರೂಪಾಯಿ ಹಣ ಸ್ವಲ್ಪ ಕಡಿಮೆ. ಈ ಒಂದು ಮೂಲ ಉದ್ಯೋಗವನ್ನೇ ಅವಲಂಬಿಸಿಕೊಂಡಿರತಕ್ಕ ವಕ್ಕಲಿಗನ ವಿನಿಯೋಗಕ್ಕೆ ಖರ್ಚು ಮಾಡತಕ್ಕಂಥ ಹಣ ಕಡಿಮೆ. ಏತಕ್ಕೆಂದರೆ ವಿದ್ಯಾವಂತರು ಇದ್ದರೆ ಅವರನ್ನು ಬೇರೆ ಉದ್ಯೋಗಗಳಿಗೆ ಕಳಿಸಿಕೊಡುತ್ತಾರೆ. ಮತ್ತು ನೀವು ಬೇರೆ ಬೇರೆ ಡಿಮ್ಯಾಂಡುಗಳಿಗೆ ಹೆಚ್ಚು ಹಣವನ್ನು ಕೊಟ್ಟು ಇದಕ್ಕೆ ಕೇವಲ ಕಡಿಮೆ ಹಣ ಕೊಟ್ಟದ್ದು ದುರಾದೃಷ್ಟಕರ. ಆದುದರಿಂದ ಇದಕ್ಕೆ ಹೆಚ್ಚಿನ ಹಣ ಒದಗಿಸಬೇಕು ಎಂದು ನಾನಾದರೂ ಕೂಡ ಹೇಳುತ್ತೇನೆ. ಮತ್ತು ಈ ಅನಕ್ಷರಸ್ಥರ ಶೋಷಣೆ ಎಲ್ಲಾ ಹಂತದಲ್ಲೂ ನಡೆಯುತ್ತಾ ಇದೆ ಎಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಈವೊತ್ತಿನ ದಿವಸ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಬೇಕು. ಏತಕ್ಕೆಂದರೆ ತಾವು ಮಾಡುವಂಥ ವ್ಯವಸಾಯದಲ್ಲಿ ಅವಕ್ಕೆ ಗೊಬ್ಬರವನ್ನು ಹಾಕಬೇಕಾದರೆ, ಬೀಜ ಬಿತ್ತಬೇಕಾದರೆ, ಸ್ಪ್ರೇಯರ್ ಹೊಡೆಯಬೇಕಾದರೆ, ಮತ್ತು ಬೆಳೆಯನ್ನು ಸಂರಕ್ಷಣೆ ಮಾಡಬೇಕಾದರೆ ಇವುಗಳನ್ನು ಯಾವ ಯಾವ ಕಾಲದಲ್ಲಿ ಮಾಡಬೇಕು ಎನ್ನುವುದೂ ಕೂಡ ಗೊತ್ತಿಲ್ಲ. ಆದ ದರಿಂದ ಅವರನ್ನು ಅಕ್ಷರಸ್ಥರನ್ನಾಗಿ ಮಾಡಿದರೆ ಇವೆಲ್ಲವೂ ಗೊತ್ತಾಗುತ್ತದೆ. ಇನ್ನು ಈ ರೈತರಿಗೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿನವರು ಟ್ರಾಕ್ಟರ್ಸ್ ಏನು ಕೊಡುತ್ತಾರೋ ಪಂಪು ಸೆಟ್ಟುಗಳನ್ನು ಏನು ಕೊಡುತ್ತಾರೋ ಅದರಲ್ಲಿ ಏನಾದರೂ ಒಂದು ಸಣ್ಣ ದೋಷ ಕಂಡುಬಂದರೆ ಅವನಿಗೆ ಅದನ್ನು ಯಾವ ರೀತಿ ದುರಸ್ತಿ ಮಾಡಬೇಕು ಎನ್ನುವ ಪರಿಣತೆ ಇರುವುದಿಲ್ಲ. ಈ ರೀತಿ ತೊಂದರೆ ಬಂದಾಗ ಆತನು ಜಿಲ್ಲಾ ಹೆಡ್‌ಕ್ವಾರ್ಟರ್ಸ್‌ಗೆ ಹೋಗಿ ಯಾವನಾದರೂ ಒಬ್ಬ ಮೆಕ್ಯಾನಿಕ್‌ನ್ನು ಹಿಡಿದು ರಿಪೇರಿ ಮಾಡಿಸಬೇಕು. ಹಾಗೆ ಅದನ್ನು ರಿಪೇರಿ ಮಾಡಿಸುವ ತನಕ ಅವನ ವೇಳೆಯೆಲ್ಲಾ ಹಾಳಾಗಿ

(ಶ್ರೀ ಆರ್. ಎಸ್. ಪಾಟೀಲ್)

ಇರುವ ಪೈರು ನಷ್ಟವಾಗುತ್ತದೆ, ಇದರಿಂದ ಬೆಳೆಯೂ ಕೂಡ ಹೋಗುತ್ತದೆ. ಆದುದರಿಂದ ಅವರನ್ನು ಅಕ್ಷರಸ್ತರನ್ನಾಗಿ ಮಾಡುವಂಥ ಯೋಜನೆಯನ್ನು ಹಾಕಿಕೊಳ್ಳಬೇಕು ಎಂದು ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ದೇಶದಲ್ಲಿ ಅಗ್ರಿಕಲ್‌ಚರಲ್ ಸ್ಕೂಲ್ಸ್ 10 ಮಾತ್ರ ಇವೆ. ನಮ್ಮ ದೇಶದ 70 ಪರ್ಸೆಂಟ್ ಇರತಕ್ಕಂಥ ವಕ್ಕಲುತನದ ಕಾರ್ಯವನ್ನು ಇದು ಮಾಡುತ್ತಿದೆ. ಈ 10 ಶಾಲೆಗಳಲ್ಲಿ ಇರತಕ್ಕಂಥ ವಿದ್ಯಾರ್ಥಿಗಳ ಪ್ರವೇಶ ಕೇವಲ 365. ಈ ಶಾಲೆಗಳನ್ನು ತಾಲ್ಲೂಕು ಮಟ್ಟದಲ್ಲಿ ಗ್ರೂಪ್ ಪಂಚಾಯಿತಿ ಮಟ್ಟದಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ತೆರೆಯಬೇಕು. ಈವೊತ್ತಿನ ದಿವಸ ನಮ್ಮ ದೇಶದಲ್ಲಿ ಆತ್ಮಾವಲಂಬನೆ ಮಾಡತಕ್ಕಂಥ ಶಿಕ್ಷಣ ಇಲ್ಲ, ಸ್ವಾವಲಂಬನೆ ಮಾಡತಕ್ಕಂಥ ಶಿಕ್ಷಣ ಇಲ್ಲ, ತಾವು ಸ್ವಾಭಿಮಾನಕ್ಕಾಗಿ ಹಣ ಖರ್ಚುಮಾಡುವುದು ಸರಿಯಲ್ಲ. ಆದುದರಿಂದ ಈ ವಕ್ಕಲುತನಕ್ಕೆ ಉಪಯೋಗವಾಗತಕ್ಕಂಥ ಶಿಕ್ಷಣ ಏನು ಇದೆಯೋ ಅದು ಆ ಮನುಷ್ಯನ ಆತ್ಮಾವಲಂಬನೆ ಮತ್ತು ಸ್ವಾವಲಂಬನೆ ಮಾಡತಕ್ಕಂಥ ಶಿಕ್ಷಣ ಆಗಬೇಕು.

ಇನ್ನು ಇತರ ಕಾಲೇಜುಗಳ ಶಿಕ್ಷಣಕ್ಕೆ ಏನು ಹೆಚ್ಚು ಹಣವನ್ನು ವಿನಿಯೋಗ ಮಾಡುತ್ತಿದ್ದೀರೋ ಅಷ್ಟೇ ಪ್ರಮಾಣದಲ್ಲಿ ಇದಕ್ಕೂ ಖರ್ಚು ಮಾಡಿದರೆ ಅದು ನಿರುಪಯೋಗವಾಗಲಾರದು. ಏತಕ್ಕೆಂದರೆ ಗ್ರಾಮಾಂತರ ಪ್ರದೇಶವಲ್ಲ ಇರತಕ್ಕಂಥ ವಕ್ಕಲಿಗನು ತನ್ನ ಉದ್ಯೋಗದ ಕಡೆಗೆ ಹೆಚ್ಚಾಗಿ ಗಮನ ಕೊಡುವುದಕ್ಕೆ, ಅವನನ್ನು ಅಕ್ಷರಸ್ತರನ್ನಾಗಿ ಮಾಡಿದರೆ ಅದರಿಂದ ಏನೂ ತಪ್ಪಾಗಲಿಕ್ಕಿಲ್ಲ. ಅದನ್ನು ಮಾಡಬೇಕು ಎಂದು ಹೇಳುತ್ತೇನೆ. ಈ ಕಡೆ ಮುತುವರ್ಜಿ ವಹಿಸಿ ಪ್ರತಿಯೊಂದು ತಾಲ್ಲೂಕಿಗೆ ಅಗ್ರಿಕಲ್ಚರಲ್ ಸ್ಕೂಲ್ ಮತ್ತು ಗ್ರೂಪ್ ಆಫ್ ವಿಲೇಜಸ್ ಎಲ್ಲಿರುತ್ತದೆ ಅಲ್ಲಿ ಅಥವಾ ಪಂಚಾಯಿತಿ ಮಟ್ಟದಲ್ಲಿ ಒಂದು ಸಣ್ಣ ಅಗ್ರಿಕಲ್ಚರಲ್ ಸ್ಕೂಲ್ ತೆಗೆಯುವಂತೆ ಏರ್ಪಾಡು ಮಾಡಿದರೆ ಈ ಒಂದು ಉದ್ಯಮಕ್ಕೆ ಬೆಲೆ ಬಂದು ಈ ದೇಶದಲ್ಲಿ ಒಕ್ಕಲುತನಕ್ಕೆ ಬೆಲೆ ಬರುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಈ ದೇಶದಲ್ಲಿರತಕ್ಕ ಒಕ್ಕಲುತನದ ಜನರಿಗೆ ಸಂಘಟನಾ ಶಕ್ತಿ ಇಲ್ಲದೆ, ತಾಲ್ಲೂಕು ಆಫೀಸಿಗೆ ಹೋಗಿ ಅಥವಾ ಸರ್ಕಾರಿ ಅಧಿಕಾರಿಗಳ ಹತ್ತಿರ ಹೋಗಿ ಸಂಘಟನಾತ್ಮಕವಾಗಿ ಈಡೇರಿಸುವಂಥ ಶಕ್ತಿ ಇಲ್ಲದೆ ಇರುವುದರಿಂದ ಅವರಿಗೆ ಏನೇನು ಬೇಕೋ ಎಂದು ಊಹಿಸಿ ಅವರಿಗೆ ಕೊಡಬೇಕಾದ ಸೌಕರ್ಯಗಳನ್ನು ಒದಗಿಸುವುದರಲ್ಲಿ ಅಧಿಕಾರಿಗಳು ಪ್ರಾಮಾಣಿಕರಾಗಿರಬೇಕಲ್ಲದೆ, ಅವರಿಗೆ ಒದಗಿಸತಕ್ಕ ಎಲ್ಲ ಕೃಷಿ ಉಪಕರಣಗಳೂ ಉತ್ತಮ ಮಟ್ಟದ್ದಾಗಿರಬೇಕು, ಅವರಿಗೆ ಕೊಡತಕ್ಕ ಬೀಜ ಉತ್ತಮ ಮಟ್ಟದ್ದಾಗಿರಬೇಕು. ಬೀಜವನ್ನು ಒದಗಿಸುವುದರ ವಿಚಾರ ಹೇಳಬೇಕು ಎಂದರೆ ಉತ್ಪಾದನೆ ಮಾಡತಕ್ಕ ಬೀಜ ಒಕ್ಕಲಿಗನ ಹತ್ತಿರ ಇಟ್ಟಿರುತ್ತೀರಿ. ಒಕ್ಕಲಿಗನ ಕೈ ಬಿಟ್ಟು ಮುಂದೆ ಹೋಗಿ ಮತ್ತೆ ಒಕ್ಕಲಿಗನ ಕೈಗೆ ಬಂದಾಗ ಅದರಲ್ಲಿ ಅಡಲ್ಟರೇಷನ್ 25 ರಿಂದ 40 ಪರ್ಸೆಂಟ್‌ವರೆಗೆ ಬರುತ್ತದೆ. ಇದಕ್ಕೆ ಯಾರು ಕಾರಣರು ಎನ್ನುವುದನ್ನು ಕಂಡುಹಿಡಿಯಬೇಕು. ಈ ಬೀಜವನ್ನು ತೆಗೆದುಕೊಂಡು ಹೋಗಿ ನಮ್ಮ ಭೂಮಿಯಲ್ಲಿ ಹಾಕಿ ಅವು ಹುಟ್ಟದೆ ಹೋದರೆ ಏನು ಮಾಡುವುದು? ಹೈಬ್ರಿಡ್ ಜೋಳದಲ್ಲಿ ಯಾವುದಾದರೂ ಮತ್ತೊಂದು ಬೀಜ ಸೇರಿಸಿದ್ದರೆ ಅದು ಕಂಡು ಬರುವುದು ಬಹಳ ದಿವಸಗಳ ನಂತರ. ಇದನ್ನು ತೆಗೆದುಹಾಕಿ ಮತ್ತೊಮ್ಮೆ ನಾಟಿ ಹಾಕಬೇಕು. ಇದು ಸಾಧ್ಯವಾಗುವುದಿಲ್ಲ. ಹೀಗೆ ಆಗತಕ್ಕ ನಷ್ಟವನ್ನು ತಪ್ಪಿಸುವ ಸಲುವಾಗಿ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಬೇಕು. ಸೀಡ್ ಸಪ್ಲೈ ವ್ಯವಸ್ಥೆಯನ್ನು ಆಗ್ರೋ ಇಂಡಸ್ಟ್ರೀಸ್‌ನವರಿಗೆ ಬೀಜದ ಉತ್ಪಾದನೆ ಮತ್ತು ವಿತರಣೆ ಎರಡನ್ನೂ ವಹಿಸಿಕೊಟ್ಟಿರುತ್ತೀರಿ. ಆಗ್ರೋ ಇಂಡಸ್ಟ್ರೀಸ್‌ನವರಿಗೆ ಅವರದೇ ಆದ ಎಷ್ಟೋ ಮುಖ್ಯವಾದ ಕೆಲಸಗಳಿರುವುದರಿಂದ ಇದರ ಕಡೆಗೆ ಅಷ್ಟು ಮುತುವರ್ಜಿ ವಹಿಸಿ ಮಾಡುತ್ತಿಲ್ಲ ಎನ್ನುವುದು ಎಲ್ಲರೂ ಒಪ್ಪತಕ್ಕ ಮಾತು. ಆದ್ದರಿಂದ ಬೀಜದ ಉತ್ಪಾದನೆ, ಅದರ ಸಂಸ್ಕರಣ ಮತ್ತು ವಿತರಣೆ ಮಾಡುವುದರ ಸಲುವಾಗಿ ಸೀಡ್ ಕಾರ್ಪೊರೇಷನ್ ಅಸ್ತಿತ್ವಕ್ಕೆ ತರಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಹಿಂದಿನ ವರ್ಷದ ಬಜೆಟ್ ಭಾಷಣದಲ್ಲಿ, ಸೀಡ್ ಕಾರ್ಪೊರೇಷನ್ ಮಾಡಬೇಕೆಂಬ ಸಲಹೆಯನ್ನು ಕೊಟ್ಟಾಗ ಅದರ ಬಗ್ಗೆ ವಿಚಾರ ಮಾಡುವುದಾಗಿ ಹೇಳಿದರು. ಇಲ್ಲಿಯವರೆಗೂ ಒಂದು ವರ್ಷ ಕಳೆದುಹೋದರೂ ಇನ್ನೂ ಕ್ರಮ ತೆಗೆದುಕೊಂಡಿಲ್ಲ.

ಗೊಬ್ಬರದ ವಿಷಯವಾಗಿ ಹೇಳಬೇಕು ಎಂದರೆ ಹಿಂದೆ ಎಸ್ಟಿಮೇಟ್ಸ್ ಕಮಿಟಿಯವರು ಮಂಗಳೂರಿಗೆ ಹೋಗಿದ್ದಾಗ್ಗೆ ಎಷ್ಟೋ ಗೊಬ್ಬರ ಮಂಗಳೂರು ಬಂದರಿನಲ್ಲಿ ಬಿದ್ದಿದ್ದುದನ್ನು ಕಣ್ಣಾರೆ ಕಂಡೆವು. ಆ ಗೊಬ್ಬರವನ್ನು ಎತ್ತಲು ಏಕೆ ತಡವಾಯಿತು, ಎರಡು ಮೂರು ತಿಂಗಳು ಓಪನ್ ಏರ್‌ನಲ್ಲಿ ಬಿದ್ದಿದ್ದಕ್ಕೆ ಹೊಣೆ ಯಾರು, ಯಾರು ಅದಕ್ಕೆ ಜವಾಬ್ದಾರರು, ಅದನ್ನು ವಿತರಣೆ ಮಾಡುವ ಸಂಘಸಂಸ್ಥೆಗಳಿಂದ ವಿಳಂಬವಾಯಿತೇ ಹೇಗೆ ಎನ್ನುವುದನ್ನು ತಿಳಿಸಬೇಕು. ಸಂಘಸಂಸ್ಥೆಗಳು ಒಕ್ಕಲಿಗನಿಗೆ ಕೊಡುವ ಗೊಬ್ಬರವನ್ನು ತೂಕ ಮಾಡಿಕೊಡುವುದಿಲ್ಲ. ಒಂದು ಚೀಲದಲ್ಲಿ ಐದು ಹತ್ತು ಕೇಜಿ ಗೊಬ್ಬರ ಕಡಮೆ ಬರುತ್ತದೆ. ತೂಕ ಮಾಡದೆಯೇ ರೈತ ಎತ್ತಿಕೊಳ್ಳಬೇಕು. ಈ ಹೊರೆಯೆಲ್ಲ ಮೂಕಪ್ರಾಣಿಯಂತಿರುವ ಒಕ್ಕಲಿಗನ ಮೇಲೆ ಬೀಳುತ್ತದೆ. ಆದ್ದರಿಂದ ಕೋ ಆಪರೇಟಿವ್ ಸೊಸೈಟಿ ಅಥವಾ ಯಾರು ಗೊಬ್ಬರವನ್ನು ವಿತರಣೆ ಮಾಡುತ್ತಾರೆಯೋ ಅವರು ಪ್ರತಿಯೊಂದು ಚೀಲವನ್ನೂ ತೂಕ ಮಾಡಿಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಗೊಬ್ಬರದ ಹಂಚಿಕೆಯನ್ನು ಹೋದ ವರ್ಷ ಎಷ್ಟೊಂದು ಅವಸರದಲ್ಲಿ ಮಾಡಲಾಯಿತು ಎಂದರೆ ಹಿಂದಿನ ವರ್ಷ ಮೊದಲಿನಿಂದಲೂ ಗೊಬ್ಬರಕ್ಕಾಗಿ ಬಿ.ಡಿ.ಒ. ಹತ್ತಿರ ಎರಡು ಲಕ್ಷ ರೂಪಾಯಿ ಕೊಡಬೇಕೆಂದು ಕೇಳಿದಾಗ ಕ್ಷಾಮ ಪ್ರದೇಶದಲ್ಲಿ ನಡೆದಂಥ ಅವಾಂತರವೆಂದರೆ ಮಳೆ ಇಲ್ಲ, ನೀರಿಲ್ಲ, ಅಲ್ಲಿಯ ಜನ ಗೊಬ್ಬರ ತೆಗೆದುಕೊಂಡು ಎರಡು ರೂಪಾಯಿ ಹೆಚ್ಚಿನ ಬೆಲೆಗೆ ಒಬ್ಬ ವ್ಯಾಪಾರಸ್ಥನಿಗೆ ಕೊಟ್ಟು ಹೋದದ್ದು ಎಲ್ಲ ತಾಲ್ಲೂಕುಗಳಲ್ಲಿಯೂ ಕಂಡು ಬಂದಿದೆ. ನಮಗೆ ಬೇಕಾದಷ್ಟು ಪ್ರಮಾಣದಲ್ಲಿ ಗೊಬ್ಬರವಿಲ್ಲ, ಇರುವುದು ಕಡಮೆ. ಅದು ವ್ಯಾಪಾರಸ್ಥರಿಗೆ ಹೋದನಂತರ 10-15 ರೂಪಾಯಿ ಹೆಚ್ಚು ಕೊಡಬೇಕೆಂದು ಕೇಳುವಂಥ ಪ್ರಸಂಗ ಬಂತು. ಇಂಥ ಪ್ರಸಂಗ ಮುಂದೆ ತಲೆದೋರದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು.

ಈ ದೇಶದಲ್ಲಿ ಒಡ್ಡಿನ ಯೋಜನೆ, ಸಾಯಿಲ್ ಕನ್‌ಸರ್ವೇಷನ್ ಕ್ರಮಗಳನ್ನು ಹಿಂದೆ ಇಷ್ಟೊಂದು ಪ್ರಮಾಣದಲ್ಲಿ ತೆಗೆದುಕೊಂಡಿರಲಿಲ್ಲ. 1972ರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಮಪಾತಳಿ ಒಡ್ಡುಗಳನ್ನು ಹಾಕುವ ಯೋಜನೆಯನ್ನು ಹಾಕಿದ್ದಾರೆ. ಅದಕ್ಕೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಹಿಂದಿನಿಂದ ಮಾಡಿದ್ದಷ್ಟು ಕೆಲಸವನ್ನು ಒಂದು ವರ್ಷದಲ್ಲಿ ನಮ್ಮ ಸರ್ಕಾರದವರು ಮಾಡಿದ್ದಾರೆ. ಎಷ್ಟೋ ಲಕ್ಷ ಎಕರೆಗಳಿಗೆ ಸಮಪಾತಳಿ ಒಡ್ಡುಗಳನ್ನು ಹಾಕಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಇದರಿಂದ ಭೂಮಿ ಎಷ್ಟೋ ಲಾಭಾಂಶವನ್ನು ಪಡೆದಿದೆ ಎಂದರೆ ಅತಿಶಯೋಕ್ತಿಯಾಗಲಾರದು. ನಮ್ಮ ಕಡೆ ಬ್ಲಾಕ್ ಸಾಯಿಲ್‌ನಲ್ಲಿ ಸಮಪಾತಳಿ ಒಡ್ಡು ಹಾಕುವ ಕಾರ್ಯಕ್ರಮವನ್ನು ಯಾರೂ ಇದುವರೆಗೂ ಹಾಕಿಕೊಂಡಿದ್ದಿಲ್ಲ. ಕ್ಷಾಮಪೀಡಿತ ಪ್ರದೇಶಗಳಲ್ಲಿ ಸಮಪಾತಳಿ ಒಡ್ಡುಗಳನ್ನು ಹಾಕುವ ಸಲುವಾಗಿ ಅಪ್ಪಣೆ ಕೊಡಿಸಿದ್ದರಿಂದ, ಕರೆ ಭೂಮಿಯಲ್ಲಿ ಕೂಡ ಸಮಪಾತಳಿ ಒಡ್ಡು ಹಾಕಿದರೆ ಅದರಿಂದ ಲಾಭದಾಯಕವಾದ ಪರಿಣಾಮ ಬರುತ್ತದೆ ಎನ್ನುವುದು ಕಂಡು ಬಂದಿತು.

ಒಕ್ಕಲುತನದ ಮೇಲೆ ಅವಲಂಬಿಸಿದರೆ ದೇಶದ ಪ್ರಗತಿಯಾಗಲಾರದು. ಅದರಿಂದ ಒಕ್ಕಲಿಗರ ಸ್ಥಿತಿಯೂ ಉತ್ತಮವಾಗಲಾರದು. ಒಕ್ಕಲಿಗರಿಗೆ ಆಧಾರವಾದ ಕೆಲವೊಂದು ಕೈಗಾರಿಕೆಗಳನ್ನು ಸ್ಥಾಪಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಯಾವ ಸಂಸ್ಥೆಗಳ ಮುಖಾಂತರವಾಗಲಿಲ್ಲ, ಯಾರಾದರೂ ವ್ಯಕ್ತಿಗಳ ಮುಖಾಂತರವಾಗಲೀ ಸಾಧ್ಯವಾಗದೆ ಇದ್ದರೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಖಾಂತರ ಅಥವಾ ಇಂಥ ಯಾವುದಾದರೂ ಕಾರ್ಪೊರೇಷನ್ ಮುಖಾಂತರ ಕೈಗಾರಿಕೆಗಳನ್ನು ತೆಗೆಯಬೇಕು ಮತ್ತು ಕೈಗಾರಿಕೆಯನ್ನು ಯಾವ ಪ್ರಮಾಣದಲ್ಲಿ ತೆಗೆಯಬೇಕು, ಯಾವ ಕಡೆ ತೆಗೆಯಬೇಕು ಎಂಥದ್ದು ತೆಗೆಯಬೇಕು, ಎನ್ನುವುದರ ಬಗ್ಗೆ ಇಲ್ಲಿಯವರೆಗೆ ಎಷ್ಟು ಯೋಜನೆಗಳನ್ನು ಸಿದ್ಧಪಡಿಸಿದ್ದಾರೆ, ಎಲ್ಲಿ ಯಾವ ಕಡೆ ಕಾರ್ಯಕ್ರಮಗಳನ್ನು ತೆಗೆಯಲಿಕ್ಕೆ ಯೋಚಿಸಿದ್ದಾರೆ ಎನ್ನುವುದನ್ನು ಸಭೆಗೆ ತಿಳಿಸಬೇಕು. ಮಣ್ಣಿನ ಪ್ರಯೋಗಾಲಯಗಳನ್ನು ಪ್ರತಿಯೊಂದು ಜಿಲ್ಲೆಯಲ್ಲಿಯೂ ತೆಗೆಯುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಈಗಾಗಲೇ 14 ಜಿಲ್ಲೆಗಳಲ್ಲಿ ಸ್ಥಾಪಿತವಾಗಿವೆ ಎಂದು ಕೇಳಿದ್ದೇನೆ. ಇವು ಜಿಲ್ಲೆಯಲ್ಲಿ ಒಂದು ಕಡೆ ಇರುವುದರಿಂದ ಯಾವ ರೈತನೂ ಅಲ್ಲಿಗೆ ಹೋಗುವುದಿಲ್ಲ. ಪ್ರತಿಯೊಬ್ಬ ರೈತನಿಗೂ ಬೇಕಾದ ಮಾಹಿತಿಯನ್ನು ಅವನು ಇರುವ ಸ್ಥಳದಲ್ಲಿಯೇ ಒದಗಿಸುವ ಏರ್ಪಾಡನ್ನು ಮಾಡಬೇಕೆಂದು ಹೇಳಿದರೆ ತಪ್ಪಾಗಲಾರದು.

ಸ್ಯಾಂಪಲ್ ಸರ್ವೆ—ಈ ದಿಸೆಯಲ್ಲಿ ಏನೂ ಆಗಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಈ ರಾಜ್ಯದಲ್ಲಿ ಭೀಕರ ಬರಗಾಲ ತಲೆದೋರಿದೆ. ಬಿತ್ತನೆ ಕಾಲ ಸಮೀಪಕ್ಕೆ ಬರುತ್ತಿದೆ. ರೈತ ತನ್ನ ಉಪಜೀವನಕ್ಕಾಗಿ ತನ್ನಲ್ಲಿದ್ದ ದನಕರುಗಳನ್ನು ಮಾರಿ ಬೀಜವನ್ನು ತಿಂದುಹಾಕಿದ್ದಾನೆ, ದನಕರು

(ಶ್ರೀ ಆರ್. ಎಸ್. ಪಾಟೀಲ್)

ಗಳು ಮತ್ತು ಬಿತ್ತನೆ ಬೀಜವಿಲ್ಲದೆ ಬಿತ್ತನೆ ಮಾಡುವುದು ಹೇಗೆ, ಈ ಪರಿಸ್ಥಿತಿಯನ್ನು ಯಾವ ತರಹ ಎದುರಿಸಬೇಕು ಎನ್ನುವ ಭಯ ಅವರಲ್ಲಿ ಕಾಣುತ್ತಿದೆ. ಬಜೆಟ್ಟಿನಲ್ಲಿ ಸುಮಾರು ಹಣವನ್ನು ಇಟ್ಟಿದ್ದಾರೆ. ಅದನ್ನು ಯಾವ ರೀತಿ ವಿನಿಯೋಗ ಮಾಡಬೇಕು ಎಂದರೆ ಎತ್ತುಗಳನ್ನು ಕೊಳ್ಳುವ ಸಲುವಾಗಿ ಬೀಜಗಳನ್ನು ಒದಗಿಸುವ ಸಲುವಾಗಿ ಇವುಗಳೆಲ್ಲಕ್ಕೂ ಈಗಿನಿಂದಲೇ ಯೋಜನೆಗಳನ್ನು ಹಾಕಿಕೊಂಡರೆ ವಾಸ್ತವವಾಗುತ್ತದೆ. ಮಳೆ ಬಿದ್ದು, ಒಕ್ಕಲಿಗ ಬಿತ್ತನೆಗೆ ಹೊರಡುವಾಗ ಉಪಕರಣಗಳನ್ನು ಕೊಡುತ್ತೇವೆಂದು ಹೋದರೆ ಯಾವ ಉಪಯೋಗಕ್ಕೂ ಬರಲಾರದು ಎಂದು ನನ್ನ ಭಾವನೆ.

ಅಶ್ವಿನಿ ಮಳೆ ಅರ್ಧ ಕಳೆಯಿತು. ಭರಣಿ. ಕೃತ್ತಿಕೆ ಮಳೆಗಳು ಬರಬೇಕಾಗಿದೆ. ಬಿತ್ತನೆ ಬೀಜವನ್ನು ತಾವು ಈಗಲೇ ಶೇಖರಣೆ ಮಾಡಿರಬೇಕು. ಯಾರ ಹತ್ತಿರ ಶೇಖರಣೆ ಮಾಡಿದ್ದೀರಿ ಅದನ್ನು ಅವರ ಮನೆಯಲ್ಲಿಯೇ ಇಟ್ಟಿದ್ದೀರಿ. ಮನೆಯಲ್ಲಿ ಇಟ್ಟಂಥ ಬೀಜ ಎಸೆನ್ಷಿಯಲ್ ಕಮಾಡಿಟೀಸ್ ಆಕ್ಟ್ ಪ್ರಕಾರ ಬೀಜವನ್ನು ಇಟ್ಟಿದ್ದರೆ ಅದನ್ನು ಕೂಡ ಜಫ್ತಿ ಮಾಡುವಂಥ ಸಂಭವವಿದೆ. ಇಂಥವರಲ್ಲಿ ಬಿತ್ತನೆ ಬೀಜವನ್ನು ಇಟ್ಟಿದ್ದೇವೆ, ಅದನ್ನು ಯಾರೂ ಮುಟ್ಟಬಾರದು ಎಂದು ಸರ್ಟಿಫಿಕೇಟ್ ಅವರಿಗೆ ಕೊಡಿರಿ. ಇಲ್ಲವಾದರೆ ಅವರಿಂದ ತೆಗೆದುಕೊಂಡು ಸರ್ಕಾರದಲ್ಲಿ ಇಟ್ಟುಕೊಳ್ಳಿರಿ. ಒಟ್ಟಿನಲ್ಲಿ ಒಕ್ಕಲಿಗರ ಹತ್ತಿರ ಇರುವ ಬಿತ್ತನೆ ಬೀಜವನ್ನು ಕಾಪಾಡುವುದಕ್ಕೆ ಬೇಕಾದ ಕ್ರಮಗಳನ್ನು ತೆಗೆದುಕೊಳ್ಳಿರಿ ಎಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ.

ಇನ್ನೊಂದು ಇದರಲ್ಲಿ ಲ್ಯಾಂಡ್ ರೆಕ್ಲಮೇಷನ್‌ಗಾಗಿ ಬಹಳ ಕಡಿಮೆ ದುಡ್ಡು ಕೊಟ್ಟಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಕೆಲವೊಂದು ವಾಟರುಲಾಗ್ ಆಗುತ್ತದೆ. ಇಂತಹ ಕೊಳಚೆ ಪ್ರಾಜೆಕ್ಟನ್ನು ದುರಸ್ತು ಮಾಡಿದರೆ ನಮ್ಮ ಹಳ್ಳಿಗಾಡಿನ ಜನಕ್ಕೆ ಬಹು ಅನುಕೂಲವಾಗುತ್ತದೆ, ನಮ್ಮ ಭಾಗದಲ್ಲಿ ಸುಮಾರು ಮೂರು ಸಾವಿರ ಎಕರೆಗಳು ಇಂತಹ ಪ್ರದೇಶಗಳಲ್ಲಿವೆ. ಇದರಲ್ಲಿ 300 ಎಕರೆಯಷ್ಟು ಪ್ರದೇಶಆರಿಸಿ ಮಾಡಿದರೆ ಅನುಕೂಲವಾಗುತ್ತದೆ, ರೆಕ್ಲಮೇಷನ್ ಪ್ರೋಗ್ರಾಂನಲ್ಲಿ ಇದನ್ನೂ ಸೇರಿಸಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ನಮ್ಮಲ್ಲಿರುವ ಮೂರು ಸಾವಿರ ಎಕರೆಗಳಷ್ಟು ಭಾಗದಲ್ಲಿ ಪ್ರತಿ ವರ್ಷವೂ ಸುಮಾರು ಹತ್ತು, ಹದಿನೈದು ಎಕರೆಗಳಷ್ಟು ನಷ್ಟವಾಗುತ್ತಿದೆ. ಇದರಿಂದ ನಮಗೆ ಇರುವ ಮೂರು ಸಾವಿರ ಎಕರೆಗಳೂ ಹಾಳಾಗಿ ಹೋಗಬಹುದು ಎನ್ನುವ ಬಯ ನಮಗೆ ಬಂದಿದೆ.

ಇನ್ನೊಂದು ಇಂಟೆನ್ಸೀವ್ ಅಗ್ರಿಕಲ್ಚರಲ್ ಏರಿಯಾ ಪ್ರೋಗ್ರಾಂ ಎಂದು ಮಾಡಿ ಇದನ್ನು ಪಂಚಾಯತಿವೈಸು ಮಾಡಬೇಕೆಂದು ಹೇಳುತ್ತಿದ್ದಾರೆ. ಪ್ರತಿಯೊಂದು ಪಂಚಾಯತಿಯವರೂ ಇಂತಹ ಹಳ್ಳಿಗಳ ಪ್ರೋಗ್ರಾಂ ಮಾಡುವುದು ಬಹಳ ಕಷ್ಟವಾದುದು. ಇಂದು ಇರುವ ಪಂಚಾಯತಿಗಳಲ್ಲಿ ಸತ್ವವಿಲ್ಲದಿರುವುದರಿಂದ ಪಂಚಾಯತಿಯವರೊಡನೆ ಇಲ್ಲಿರುವ ಗ್ರಾಮಸೇವಕರನ್ನೂ ಹಾಗೂ ಹಳ್ಳಿಗಳಲ್ಲಿರುವ ಮುಖ್ಯ ಜನರನ್ನೂ ಕೂಡಿಸಿಕೊಂಡು ಯೋಚನೆ ಮಾಡುವುದು ಸರಿಯಾಗಿರುತ್ತವೆ. ಇಂದು ಇದರಲ್ಲಿ ಪಬ್ಲಿಕ್ ಪಾರ್ಟಿಸಿಪೇಷನ್ ಬರಬರುತ್ತಾ ಶೂನ್ಯವಾಗುತ್ತದೆ. ಒಕ್ಕಲುತನಕ್ಕೆ ಮುಖ್ಯವಾಗಿ ಒಂದು ಯೋಜನೆ ಮಾಡಿ ಎಲ್ಲೆಲ್ಲಿ ಜೋಳ ಬೆಳೆ ಮಾಡಬಹುದು, ಎಷ್ಟು ಖರ್ಚು ಬರುತ್ತದೆ ಇವನ್ನೆಲ್ಲಾ ಕಳೆದ ಹತ್ತು ವರ್ಷಗಳಿಂದ ಬರೆದಿರುವ ಲೆಕ್ಕಗಳನ್ನು ನೋಡಿ ಇದಕ್ಕೆ ತಕ್ಕ ಆಯವ್ಯಯ ನೋಡಿಕೊಂಡು ಒಂದು ಪ್ರೋಗ್ರಾಂ ಮಾಡಬೇಕು. ಈಗ ಇರುವ ಪಂಚಾಯತಿಗಳು ನಿಷ್ಕ್ರಿಯವಾಗಿರುವುದರಿಂದ ಇಥರ ಬಗ್ಗೆ ಸರಿಯಾದ ಯೋಜನೆ ಸರಕಾರದ ಕಡೆಗೆ ಹಳ್ಳಿಗಳಿಂದ ಬರುತ್ತಿಲ್ಲ. ಇದರ ಕಡೆಗೆ ಒಂದು ವ್ಯವಸ್ಥೆ ಮಾಡಿ ಸರಿಯಾದ ರೀತಿಯಲ್ಲಿ ಆಯ ಹಳ್ಳಿಗಳಲ್ಲಿರುವ ಪಟೇಲರುಗಳು ಹಾಗೂ ಗ್ರಾಮಸೇವಕರುಗಳು ಮತ್ತು ಮುಖ್ಯ ಜನರನ್ನೂ ಕೂಡಿಸಿ ಹಳ್ಳಿಗೆ ತಕ್ಕಂತಹ ಒಂದು ಪ್ರೋಗ್ರಾಂ ಮಾಡಿ ಸರಕಾರಕ್ಕೆ ಕಳುಹಿಸಬೇಕು. ಇದರ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ನಮ್ಮ ಕಡೆ ಹೈಬ್ರಿಡ್ ಕಾಟನ್ ಸೀಡುಗಳೆಂದು ಕೊಡುತ್ತಾರೆ. ಇದು ನಮ್ಮ ಒಕ್ಕಲುತನ ಮಾಡುವವರಿಗೆ ಬಹಳ ಮುಖ್ಯವಾಗಿ ಬೇಕಾಗಿರುವುದು, ಆದರೆ ಇದರಲ್ಲಿ ಚೆನ್ನಾಗಿಲ್ಲದೇ ಇರುವ ಬೀಜಗಳು ಇದ್ದರೂ ಇದನ್ನು ಇಲ್ಲಿರುವ ಅಧಿಕಾರಿಗಳ ಸಹಾಯದಿಂದ ಸರಿಯಾಗಿದೆ ಎಂದು ಸರ್ಟಿಫಿಕೇಟು ಕೊಟ್ಟು ಇದರಿಂದ ಬೀಜ ಕೊಡುತ್ತಿದ್ದಾರೆ. ಆದರೆ ಕೊಡುವ ಬೀಜಗಳು ಸರಿಯಾಗಿರುವುದಿಲ್ಲ ಮತ್ತು ಬೀಜಗಳನ್ನು ಮಾಡುವವರು ಸಾಧಾರಣವಾಗಿ ಹೆಚ್ಚು ಸ್ಥಿತಿಯುಳ್ಳ ಶ್ರೀಮಂತರೇ ಇದ್ದಾರೆ. ಇವರುಗಳೇ ಬೀಜಗಳನ್ನು ಉತ್ಪಾದನೆ ಮಾಡುತ್ತಿರುವುದರಿಂದ ಇದರಲ್ಲಿ ಸುಮಾರು ಮೂವತ್ತು ನಲವತ್ತು ಸಾವಿರದಷ್ಟು ಲಾಭ ಸಂಪಾದನೆ ಮಾಡುತ್ತಿದ್ದಾರೆ. ಇದರಿಂದೇ

ನಾಗುತ್ತದೆ ಎಂದರೆ ಸ್ಥಿತಿವಂತರನ್ನು ಮತ್ತಷ್ಟು ಶ್ರೀಮಂತರನ್ನಾಗಿ ಮಾಡುವ ಪದ್ಧತಿ ಹೆಚ್ಚಾಗುತ್ತಿದೆ. ಆದುದರಿಂದ ಇಂತಹ ಶ್ರೀಮಂತರ ಕೈಯಿಂದ ಇದನ್ನು ತಪ್ಪಿಸಿ ಮಧ್ಯಮ ವರ್ಗದವರ ಮೂಲಕ ಬೀಜಗಳನ್ನು ಉತ್ಪಾದನೆ ಮಾಡಲು ಅವಕಾಶ ಕೊಟ್ಟರೆ ಬಡಜನರಿಗೆ ಅನುಕೂಲವಾಗುತ್ತದೆ. ಇಂತಹ ಶ್ರೀಮಂತರ ಕೈವಾಡವನ್ನು ಆದಷ್ಟು ತಡೆ ಹಿಡಿಯಲು ಪ್ರಯತ್ನ ಮಾಡಬೇಕು. ಇವರು ಅಧಿಕಾರಿಗಳ ಸಹಕಾರ ಪಡೆದು ಸುಳ್ಳು ಸರ್ಟಿಫಿಕೇಟುಗಳನ್ನು ಪಡೆದು ಉಪಯೋಗವಿಲ್ಲದ ಬೀಜಗಳನ್ನು ಮಾರಾಟ ಮಾಡುವುದರಿಂದ ಜನರಿಗೆ ತೊಂದರೆಯಾಗುತ್ತಿದೆ. ಇದರಿಂದಾಗಿ ಪ್ರಾಮಾಣಿಕವಾದ ಬೀಜ ಈಗ ಸಿಗುತ್ತಿಲ್ಲ.

ಇನ್ನು ಇಂಟಿಗ್ರೇಟೇಡ್ ಡ್ರೈಲ್ಯಾಂಡ್ಸ್ ಪ್ರೋಗ್ರಾಂ ಎಂದು ಅಭಾವ ಪ್ರದೇಶಗಳಲ್ಲಿ ಮಾಡುತ್ತಿದ್ದಾರೆ. ನಮ್ಮ ಬಿಜಾಪುರ ಜಿಲ್ಲೆಯೂ ಇದರಲ್ಲಿ ಬರುತ್ತದೆ. ಆದರೆ ಕೇವಲ ಇಂತಹ ಬರಗಾಲ ಪ್ರದೇಶಗಳಲ್ಲಿ ಈ ಯೋಜನೆ ಮಾಡುವುದಕ್ಕಿಂತ ರಾಜ್ಯದಲ್ಲಿ ಎಲ್ಲೆಲ್ಲಿ ಬರಗಾಲದ ಪ್ರದೇಶಗಳು ಎಂದು ಇರುತ್ತವೋ ಅಂತಹ ಪ್ರದೇಶಗಳಲ್ಲೂ ಈ ಯೋಜನೆ ಮಾಡಬೇಕೆಂದು ನನ್ನ ಸಲಹೆ. ಬೆಳಗಾಂನಲ್ಲಿ ಐದು ತಾಲ್ಲೂಕುಗಳು ಯಾವಾಗಲೂ ಬರಗಾಲಕ್ಕೆ ಸಿಕ್ಕುವ ಪ್ರದೇಶಗಳಾಗಿವೆ, ಒಂದಲ್ಲ ಒಂದು ರೀತಿ ಇವು ಬರಗಾಲದಿಂದ ನರಳುತ್ತಿವೆ, ಇಂತಹ ಪ್ರೋಗ್ರಾಂನ್ನು ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕಾ ಮಟ್ಟದಲ್ಲಿ ಅನ್ವಯಿಸುವಂತೆ ಮಾಡಬೇಕು ಎಂದು ನಾನು ತಮ್ಮಲ್ಲಿ ಕೇಳುತ್ತೇನೆ. ಇನ್ನು ಕೃಷಿ ಇಲಾಖೆಯ ಅಧಿಕಾರಿಗಳಲ್ಲಿ ನಮ್ಮ ತಾಲ್ಲೂಕಿನವರ ಮಟ್ಟಿಗೆ ಒಂದು ಸಲಹೆಯನ್ನು ಕೊಡಬೇಕಾಗಿದೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು 20 ಸಾವಿರ ಎಕರೆಯಷ್ಟು ಪ್ರದೇಶಗಳು ಗುಡ್ಡಗಾಡಿನ ಪ್ರದೇಶಗಳಾಗಿವೆ. ಇದು ಮರ್ರಿ ಸಾಯಿಲ್ ಎಂದರೆ ಕೆಂಪು ಮಣ್ಣು ಕೂಡಿದ ಭೂಮಿ ಇಲ್ಲಿದೆ. ಈ ಭಾಗದಲ್ಲಿ ಕೇವಲ 20 ಇಂಚು ಮಳೆ ಮಾತ್ರ ಬರುತ್ತೆ. ಇಲ್ಲಿ ಬೇರೆ ಯಾವ ರೀತಿ ಬೆಳೆ ಮಾಡಲು ಆಗುವುದಿಲ್ಲ. ಇಲ್ಲಿ ಸಣಬಿನ ಗಿಡಗಳನ್ನು ಬೆಳೆಸಬಹುದು. ನಮ್ಮ ಒಕ್ಕಲುತನ ಮಾಡುವವರಿಗೆ ಮುಖ್ಯವಾಗಿ ನಾರು ಬೇಕಾಗುತ್ತದೆ, ಹಗ್ಗ ಬೇಕಾಗುತ್ತದೆ ಕಾಳು ಕಡ್ಡಿ ತುಂಬಲು ಚೀಲಗಳು ಬೇಕಾಗುತ್ತವೆ. ನಾರು ಉತ್ಪಾದನೆ ಸಾಕಷ್ಟು ಪ್ರಮಾಣದಲ್ಲಿಲ್ಲ. ಒಂದು ಮಣ ಸಣಬಿಗೆ ಈಗ 16 ರಿಂದ 20 ರೂಪಾಯಿವರೆಗೆ ಕೊಡಬೇಕಾಗುತ್ತದೆ, ಇದರಿಂದಾಗಿ ಸಣಬು ಕೊರತೆ ಹೆಚ್ಚಾಗಿದೆ, ಈ ಭಾಗದಲ್ಲಿ ನಾರಿನ ಕೈಗಾರಿಕೆಯ ಒಂದು ಯೋಜನೆ ಹಾಕಿದರೆ ಇದರಿಂದ ಹತ್ತು ಸಾವಿರ ಎಕರೆ ಇರುವ ಗುಡ್ಡಗಾಡಿನ ಪ್ರದೇಶಗಳು ಅಭಿವೃದ್ಧಿಯಾಗುತ್ತದೆ ಸುಮಾರು ಒಂದು ಸಾವಿರ ಜನರಿಗೆ ಉದ್ಯೋಗವೂ ಸಿಗಲು ಅವಕಾಶವಾಗುತ್ತದೆ, ಅಲ್ಲದೆ ನಾರಿನ ಇತರ ಸಾಮಾನುಗಳನ್ನು ಮಾಡಲು ಇಲ್ಲಿ ಒಂದು ಕಾರ್ಖಾನೆ ಹಾಕಿದರೆ ಅನುಕೂಲವಾಗುತ್ತದೆ ಎಂದು ಇದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಸಾಯಿಲ್ ಕನ್‌ಸರ್‌ವೇಷನ್ ಕೆಲಸಗಳನ್ನು ಬರಗಾಲದ ಪ್ರದೇಶಗಳಾದ ಬೀದರು, ಗುಲ್ಬರ್ಗಾ, ಬಿಜಾಪುರದ ಐದು ತಾಲ್ಲೂಕುಗಳಲ್ಲಿ ಮಾಡಬೇಕೆಂದು ಮಾಡುತ್ತಿದ್ದಾರೆ ಮತ್ತು ಹೆಚ್ಚು ಜನರಿಗೆ ಕೆಲಸಗಳನ್ನು ಇದರಲ್ಲಿ ಒದಗಿಸಿಕೊಡುತ್ತಿದ್ದಾರೆ. ನಮ್ಮ ರಾಮದುರ್ಗದಲ್ಲಿ ನಡೆಯಬೇಕಾಗಿದ್ದ ಸಾಯಿಲ್ ಕನ್ಸರ್‌ವೇಷನ್‌ಗಳನ್ನು ತಡೆದು ಗುಲ್ಬರ್ಗಾ ಇಂತಹ ಭಾಗಗಳಲ್ಲಿ ಹೆಚ್ಚು ಮಾಡಲು ಯತ್ನ ಮಾಡಿ ಈಗ ಸುಮಾರು ನಾಲ್ಕಾರು ಸಾವಿರ ಜನರಿಗೆ ಕೆಲಸಗಳನ್ನು ಒದಗಿಸಿಕೊಟ್ಟಿದ್ದಾರೆ. ಈ ರೀತಿ ಸಾಯಿಲ್ ಕನ್‌ಸರ್‌ವೇಷನ್ ಕೆಲಸಗಳನ್ನು ಹೆಚ್ಚು ಮಾಡಬೇಕು.

ಇನ್ನು ಅರಣ್ಯದ ವಿಷಯದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕಾಗೋಡು ತಿಮ್ಮಪ್ಪನವರು, ಹಾಗೂ ಮಂಗಳೂರು ಕಡೆಯಿಂದ ಬಂದಿರುವ ಸದಸ್ಯರು ಹೇಳುವ ಹಾಗೆ ಅರಣ್ಯದ ಉತ್ಪನ್ನವನ್ನು ಜಾಸ್ತಿ ಮಾಡಬೇಕು, ಮಾನ್ಯ ಸದಸ್ಯರು ಹೇಳುವಂತೆ ನಮ್ಮ ಅರಣ್ಯ ಖಾತೆ ಮಂತ್ರಿಗಳು ಈ ಇಲಾಖೆ ವಹಿಸಿದಾಗಿನಿಂದ ಅರಣ್ಯದಿಂದ ಹೆಚ್ಚು ಉತ್ಪನ್ನ ಬರುವಂತಹ ಕೆಲಸಗಳನ್ನು ಮಾಡಿದ್ದಾರೆ ಇದಕ್ಕಾಗಿ ಅವರ ಬಗ್ಗೆ ಒಂದೆರಡು ಒಳ್ಳೆಯ ಮಾತುಗಳನ್ನು ಹೇಳಿ ಅವರನ್ನು ಅಭಿನಂದಿಸಬೇಕಾಗಿದೆ. ಈ ಇಲಾಖೆಯಲ್ಲಿ ಭ್ರಷ್ಟಾಚಾರ ಹಾಗೂ ಕಳ್ಳಸಾಗಾಣಿಕೆ ಇವುಗಳಿಂದ ಅರಣ್ಯದ ಉತ್ಪನ್ನಗಳು ಕಡಿಮೆಯಾಗುತ್ತಿದ್ದವು. ನಮ್ಮ ಸಚಿವರು ಅಧಿಕಾರಕ್ಕೆ ಬಂದ ಮೇಲೆ ಇದರ ಬಗ್ಗೆ ಒಂದು ರೀತಿಯಾದ ಹೆಚ್ಚು ವ್ಯವಸ್ಥಿತವಾದ ಕಾರ್ಯಕ್ರಮವನ್ನು ಹಾಕಿಕೊಂಡು ಇಂದು ನಮ್ಮ ಅರಣ್ಯದಿಂದ ಸುಮಾರು 14 ಕೋಟಿಯಷ್ಟು ಹೆಚ್ಚು ಉತ್ಪನ್ನ ಬರುತ್ತಿದ್ದದ್ದು ಈಗ ಇದು 19 ಕೋಟಿಯವರೆಗೆ ಹೆಚ್ಚು ಬರುತ್ತಿದೆ. ಇದನ್ನು ನೋಡಿದರೆ ನಮ್ಮ ಮಂತ್ರಿಗಳ ಒಕ್ಕಲುತನದ ಅಭಿವೃದ್ಧಿ ಇವರ ಧಾರ್ಷ್ಟ್ಯಕ್ಕೆ ಹಾಗೂ ಚಾಕಚಕ್ಯತೆ ಯಾವ ರೀತಿ ಇದೆ ಎನ್ನುವುದು ಎಲ್ಲರಿಗೂ ಗೊತ್ತಾಗುತ್ತದೆ. ಇನ್ನೊಂದು ಉದಾಹರಣೆ ಹೇಳಬೇಕಾದರೆ ದಾಂಡೇಲಿ ಪೇಪರ್ ಮಿಲ್ಸ್‌ಗಾಗಿ ಬೇಕಾದ ರಾ ಮೆಟೀರಿಯಲ್‌ಗಳನ್ನು ಕೊಡುವಾಗ ಮೊದಲು ಟನ್ನಿಗೆ 1.25 ಇದ್ದುದನ್ನು ಇಂದು ಟನ್ನಿಗೆ 15 ರೂಪಾಯಿ

(ಶ್ರೀ ಆರ್. ಎಸ್. ಪಾಟೀಲ್)

ಗಳಂತೆ ಇದರ ದರವನ್ನು ಏರಿಸಿದ್ದಾರೆ, ಇದು ಒಂದು ಅಭಿನಂದನೆ ಮಾಡಬೇಕಾದ ಸಂಗತಿ, ಹಾಗೆ ಕಾಡಿನಲ್ಲಿ ಬೆಳೆಯುವ ಯೂಕಲಿಪ್ಟಸ್ ಎಂದರೆ ನೀಲಗಿರಿ ಗಿಡಗಳ ಬೆಲೆಯನ್ನು ಮರ ಒಂದಕ್ಕೆ 25 ರೂಪಾಯಿನಂತೆ ಮಾರುತ್ತಿದ್ದರು. ಈಗ ಮರ ಒಂದಕ್ಕೆ 40 ರೂಪಾಯಿನಂತೆ ಮಾರುತ್ತಿದ್ದಾರೆ. ಇದರಿಂದಾಗಿ ಇಂದು ಪ್ಲೈವುಡ್ ಮ್ಯಾನುಫ್ಯಾಕ್ಚರು ಮಾಡುವವರು ಅವರ ಪದಾರ್ಥಗಳ ಬೆಲೆಯನ್ನೂ ಶೇಕಡಾ 15 ರಷ್ಟು ಹೆಚ್ಚು ಮಾಡಿ ವ್ಯಾಪಾರ ಮಾಡುತ್ತಿದ್ದಾರೆ. ಇದನ್ನು ನೋಡಿದರೆ ನಮ್ಮ ಮಂತ್ರಿಗಳ ಚಾಕಚಕ್ಯತೆ ಯಾವ ರೀತಿ ಇದೆ ಎನ್ನುವುದು ಚೆನ್ನಾಗಿ ಗೊತ್ತಾಗುತ್ತದೆ, ಅರಣ್ಯಗಳಿಂದ ಈಗ ಹೆಚ್ಚು ಉತ್ಪನ್ನ ಬರಲು ಅವಕಾಶವಾಯಿತು, ಇಂತಹ ಒಳ್ಳೆಯ ಕಾರ್ಯಕ್ರಮಗಳನ್ನು ನಮ್ಮ ಮಾನ್ಯ ಮಂತ್ರಿಗಳು ಅರಣ್ಯ ಖಾತೆಯಲ್ಲಿ ಮಾಡಿರುವುದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ, ಇದಲ್ಲದೆ ಇಲ್ಲಿ ಫಾರೆಸ್ಟು ಕಾರ್ಪೊರೇಷನ್ ಎಂದು ಮಾಡಿದ್ದಾರೆ, ಇದರ ಮೂಲಕ ಪ್ಲಾಂಟೇಷನ್‌ಗಳನ್ನು ಮಾಡಿ ಫಾರೆಸ್ಟ್ ಓರಿಯಂಟೆಡ್ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಸಹಾಯವಾಗಿದೆ. ಈಗಾಗಲೇ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಕೆಲಸ ಮಾಡುತ್ತಿದೆ. ಇದನ್ನು ನೋಡಿದರೆ ನಮ್ಮ ಅರಣ್ಯ ಖಾತೆ ಇನ್ನಷ್ಟು ಅಭಿವೃದ್ಧಿಗೆ ಬರುವುದರಲ್ಲಿ ಸಂಶಯವಿಲ್ಲ. ಇಂತಹ ಮೆಚ್ಚುಗೆಯ ಕೆಲಸಗಳು ಶ್ರೀಮಾನ್ ಪಾಟೀಲರವರ ಕಾಲದಲ್ಲಿ ಇನ್ನೂ ಹೆಚ್ಚಾಗಿ ಬರಲಿ ಮತ್ತು ಒಕ್ಕಲುತನದ ಇಲಾಖೆಯಲ್ಲೂ ಜನತೆಗೆ ಉಪಯೋಗವಾಗುವಂತಹ ಕಾರ್ಯಕ್ರಮಗಳನ್ನು ಧೈರ್ಯದಿಂದ ಜಾರಿಗೆ ತರಲಿ ಎಂದು ಆಶಿಸುತ್ತೇನೆ, ಮತ್ತು ಅಧ್ಯಕ್ಷರು ನನಗೆ ಮಾತಾಡಲು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನೂ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

4–30 P.M.

† ಶ್ರೀ ಬಿ. ವಿ. ಕಕ್ಕಿಲಾಯ (ಬಂಟವಾಳ).—ಸನ್ಮಾನ್ಯ ಅಧ್ಯಕ್ಷರೇ, ವ್ಯವಸಾಯ ಮತ್ತು ಅರಣ್ಯ ಇಲಾಖೆಗಳ ಬಗ್ಗೆ ಮಂಡಿಸಿರುವ ಡಿಮ್ಯಾಂಡ್‌ಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ನೀಲಕಾಂತಿ ಗಿಡಗಳನ್ನು ಬೆಳೆಸುವುದಕ್ಕೆ ಪ್ರಾರಂಭ ಮಾಡಿದ ಸಚಿವರು ಇಲ್ಲ ಇಲ್ಲ. ವ್ಯವಸಾಯ ಇಲಾಖೆಯವರು ಹಸಿರು ಕ್ರಾಂತಿಯನ್ನು ಆರಂಭ ಮಾಡಿ ಬಹಳ ವರ್ಷಗಳಾಯಿತು. ಆದರೆ ಅದರ ಕ್ರಾಂತಿಯ ಪರಿಣಾಮ ಕೇಂದ್ರದ ನಾಯಕರು ಹೇಳಿದ ಹಾಗೆ, ಇದು ಈಗ ಹೋಗುವ ರೀತಿಯಲ್ಲಿಯೇ ಮುಂದುವರೆದರೆ ಈ ಕ್ರಾಂತಿ ಹಸಿರಾಗಿ ಉಳಿಯದೆ, ಇದು ಕೆಂಪು ಕ್ರಾಂತಿಯಾಗಿ ಮಾರ್ಪಾಟಾಗಬಹುದು. ಈ ಮಾತನ್ನು ನಾನು ಇನ್ನೊಮ್ಮೆ ತಮ್ಮ ಜ್ಞಾಪಕಕ್ಕೆ ತರಬೇಕೆಂದಿದ್ದೇನೆ. ಏಕೆಂದರೆ ಈ ಇಲಾಖೆಯ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡು ನೋಡಿದರೆ, ಸಮಾಜದಲ್ಲಿ ಯಾವ ರೀತಿಯಲ್ಲಿ ರೈತರಿಗೆ ಸಹಾಯವಾಗಬೇಕು, ಅವನ ಆದಾಯ ಹೆಚ್ಚಾಗಬೇಕು, ಉತ್ಪಾದನೆ ಜಾಸ್ತಿಯಾಗಬೇಕು ಅನ್ನುವ ಕಾರಣಕ್ಕೋಸ್ಕರ ಈ ಇಲಾಖೆ ಕೆಲಸ ಮಾಡಬೇಕಾಗಿತ್ತೋ, ಅದರ ಬದಲು ಈ ಇಲಾಖೆಯವರು ರೈತನನ್ನು ಶೋಷಣೆ ಮಾಡುವುದಕ್ಕೆ ಬೇಕಾದ ರೀತಿಯಲ್ಲಿ ತಮ್ಮ ಧೋರಣೆಯನ್ನು ಅಳವಡಿಸಿಕೊಂಡು ಹೋಗುತ್ತಿದ್ದಾರೆಂದು ಹೇಳಬೇಕಾಗಿದೆ. ಇದಕ್ಕೆ ಒಂದೆರಡು ಉದಾಹರಣೆಗಳನ್ನು ತಮ್ಮ ಮುಂದಿಡುತ್ತೇನೆ. ಈಗ ಕೆಲವು ವರ್ಷಗಳ ಹಿಂದೆ ಅಂದರೆ ಮೂರು ವರ್ಷಗಳ ಹಿಂದೆ ಪೆಸ್ಟಿಸೈಡ್ಸನ್ನು ರೈತರಿಗೆ ಸರ್ಕಾರದವರು ಒದಗಿಸುವ ಬಗ್ಗೆ ಸಬ್ಸಿಡಿಯನ್ನು ಕೊಡುತ್ತಿದ್ದರು. ಅದೇ ಸಮಯದಲ್ಲಿ ಈ ಔಷಧಗಳನ್ನು ತಯಾರು ಮಾಡತಕ್ಕಂಥ ಕಂಪನಿಗಳವರು ಚೆನ್ನಾಗಿ ಪ್ರಚಾರವನ್ನು ಸಹ ಮಾಡಿದರು. ಈ ಪೆಸ್ಟಿಸೈಡ್ಸ್‌ನ ಜೊತೆಗೆ ನೈಟ್ರೋಜಿನಸ್ ಫರ್ಟಿಲೈಜರ್ಸ್ ಕೂಡ ಉಪಯೋಗಕ್ಕೆ ಬಂದಿತು. ಭತ್ತ, ಜೋಳದ ಹೊಸ ಹೊಸ ತಳಿಗಳು ಬಂದಂತೆ, ರೋಗಕ್ಕೆ ತುತ್ತಾಗುವ ತಳಿಗಳು ಸಹ ಬಂದವು. ರೋಗಗಳು ಜಾಸ್ತಿಯಾದಂತೆ ಪೆಸ್ಟಿಸೈಡ್ಸ್‌ನ ಉಪಯೋಗ ಕೂಡ ಜಾಸ್ತಿಯಾಯಿತು. ಪೆಸ್ಟಿಸೈಡ್ಸ್‌ನ ಉಪಯೋಗ ಜಾಸ್ತಿಯಾದ ಕಾಲಕ್ಕೆ ಸರ್ಕಾರದವರು ಕೊಡುತ್ತಿದ್ದ ಸಬ್ಸಿಡಿಯನ್ನು ನಿಲ್ಲಿಸಿದರು. ಇದರ ಜೊತೆಗೆ ಈಗ ಪೆಸ್ಟಿಸೈಡ್ಸ್‌ನ ಬೆಲೆ ಜಾಸ್ತಿಯಾಗಿರುವುದಲ್ಲದೆ ಅದು ಸಿಗುವುದೂ ಸಹ ಕಷ್ಟವಾಗಿದೆ. ಇದರ ಬಗ್ಗೆ ನನ್ನ ಒಂದು ಅನುಭವವನ್ನು ಹೇಳಬೇಕೆಂದರೆ, ಕಳೆದ ವರ್ಷ ಮಳೆಗಾಲದಲ್ಲಿ ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ 8 ಸಾವಿರ ಎಕ್ರೇರ್ ಜಮೀನಿನಲ್ಲಿ ಭತ್ತದ ಬೆಳೆಗೆ ಮಿಲಿಬಗ್ ಎಂಬ ರೋಗ ಬಂತು. ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಈ ಬಗ್ಗೆ ಸರ್ಕಾರದ ಗಮನಕ್ಕೆ ತಂದರೂ ಕೂಡ ಸರ್ಕಾರದವರು ಒಂದೇ ಒಂದು ಕೆ.ಜಿ. ಪೆಸ್ಟಿಸೈಡ್ಸನ್ನು ಅಲ್ಲಿಗೆ ಕಳಿಸಿ

ಕೊಡಲಿಲ್ಲ. ಇದರಿಂದ ಮೊದಲನೆಯ ಬೆಳೆ ಸಂಪೂರ್ಣವಾಗಿ ಈ ರೋಗದ ಹಾವಳಿಯಿಂದ ಹಾಳಾಯಿತು. ಅಲ್ಲಿನ ಅಧಿಕಾರಿಗಳು ಕೊಡುವ ಲೆಕ್ಕದ ಪ್ರಕಾರ ಒಂದು ಲಕ್ಷ ಕ್ವಿಂಟಾಲ್ ಭತ್ತದ ಬೆಳೆ ಕೆಟ್ಟು ಹೋಯಿತು. ಆಮೇಲೆ ಆ ರೋಗದ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ರೈತರು ಚಳುವಳಿ ನಡೆಸಿದ ಮೇಲೆ ಎರಡನೇ ಬೆಳೆ ಬರುವ ಕಾಲಕ್ಕೆ ಸ್ವಲ್ಪಮಟ್ಟಿಗೆ ಈ ಔಷಧವನ್ನು ಒದಗಿಸಿಕೊಟ್ಟರು. ಎರಡನೆಯ ಬೆಳೆ ಅಲ್ಲಿ 4 ಸಾವಿರದಿಂದ ಹಿಡಿದು 5 ಸಾವಿರ ಎಕ್ಕೇರ್ ಜಮೀನಿನಲ್ಲಿ ಆಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಈಗ ಕೋರಂನ ಕೊರತೆ ಕಾಣುತ್ತಿದೆ. ಕ್ಯಾಬಿನೆಟ್ ಮಂತ್ರಿಗಳು ಸಹ ಯಾರೂ ಇಲ್ಲ. ಕೇವಲ ನಾವು ಇಲ್ಲಿ ಅರಣ್ಯರೋಧನ ಮಾಡಬೇಕಾಗಿದೆ. ನಾವು ಹೇಳುವುದನ್ನು ಕೇಳಲು ಯಾವ ಮಂತ್ರಿಗಳು ಸಹ ಇಲ್ಲ.

ಅಧ್ಯಕ್ಷರು.— ಕೋರಂ ಇದೆ ; ತಾವು ಕುಳಿತುಕೊಳ್ಳಿ.

ಶ್ರೀ ಬಿ. ವಿ. ಕಕ್ಕಿಲಾಯ.—ಇಂದು ಪೆಸ್ಟಿಸೈಡ್ಸ್‌ನ ಬೆಲೆ ಒಂದು ಕೆ.ಜಿ.ಗೆ 11 ರೂಪಾಯಿಗಳಾಗುತ್ತದೆ. ಒಂದು ಎಕರೆಗೆ ಇದನ್ನು ಉಪಯೋಗ ಮಾಡಬೇಕೆಂದರೆ ಸುಮಾರು 120 ರೂಪಾಯಿಗಳ ಖರ್ಚು ಬರುತ್ತದೆ. ಸಾಧಾರಣವಾದ ರೈತ ಇದನ್ನು ಉಪಯೋಗ ಮಾಡುವುದಕ್ಕಾಗುವುದಿಲ್ಲ. ನಮ್ಮ ಮಂತ್ರಿಗಳು ಅಲ್ಲಿಗೆ ಬಂದಾಗ ಒಂದು ಆಶ್ವಾಸನೆಯನ್ನು ಕೊಟ್ಟರು ; ಏನೆಂದರೆ, ಈ ಔಷಧವನ್ನು ಉಪಯೋಗ ಮಾಡುತ್ತೇವೆ, ಇದಕ್ಕೆ ಆಗತಕ್ಕಂಥ ಖರ್ಚನ್ನು ಕೇಂದ್ರ ಸರ್ಕಾರದಿಂದ ಮುಫತ್ತಾಗಿ ಬರುವ ಹಾಗೆ ನೋಡಿಕೊಳ್ಳುತ್ತೇವೆ, ಅವರೇನಾದರು ಸಾಲವಾಗಿ ಕೊಟ್ಟಿದ್ದರೆ ಅದನ್ನು ರೈಟ್-ಆಫ್ ಮಾಡುವ ಹಾಗೆ ಪ್ರಯತ್ನ ಮಾಡುತ್ತೇವೆಂದು ಹೇಳಿದರು. ಈ ಔಷಧವನ್ನು ಉಪಯೋಗ ಮಾಡಿದ್ದರಿಂದ ಎರಡನೇ ಬೆಳೆ ಸ್ವಲ್ಪ ಬಂತು. ಈಗ ಸರ್ಕಾರದವರು ಏನು ಮಾಡುತ್ತಿದ್ದಾರೆಂದರೆ, ಇದಕ್ಕಾಗಿ ಖರ್ಚು ಮಾಡಿದ 12 ಲಕ್ಷ ರೂಪಾಯಿಗಳನ್ನು ರೈತರಿಂದ ವಸೂಲಿ ಮಾಡುವುದಕ್ಕೆ ಹೊರಟಿದ್ದಾರೆ. ಅಂಡರ್ ಲ್ಯಾಂಡ್ ರೆವಿನ್ಯೂ ರಿಕವರಿ ಮೂಲಕ ವಸೂಲಿ ಮಾಡುವುದಕ್ಕೆ ಕ್ರಮ ಕೈಕೊಂಡಿದ್ದಾರೆ. ಈ ಮಿಲಿಬಗ್ ರೋಗ ಒಂದು ಸಲ ಬಂದರೆ ಅದು ಮೂರು ನಾಲ್ಕು ವರ್ಷಗಳ ಕಾಲದವರೆಗೆ ಹೋಗುವುದಿಲವೆಂದು ಇಲಾಖಾ ಅಧಿಕಾರಿಗಳು ಹೇಳುತ್ತಿದ್ದಾರೆ. ಈ ಕಾರಣದಿಂದ, ದೊಡ್ಡ ದೊಡ್ಡ ರೋಗಗಳು ಬಂದಾಗ ಸರ್ಕಾರದವರೇ ಉಚಿತವಾಗಿ ಯಾವ ರೀತಿ ಔಷಧಗಳನ್ನು ಹಂಚುತ್ತಾರೋ, ಅದೇ ರೀತಿ ಇದನ್ನು ಸಹ ಎಂಡಮಿಕ್ ಪೆಸ್ಟ್ ಎಂದು ಟ್ರೀಟ್ ಮಾಡಿ, ಈ ರೋಗ ಸಂಪೂರ್ಣವಾಗಿ ಕಿತ್ತುಹೋಗುವ ತನಕ ಪೆಸ್ಟಿಸೈಡ್ಸ್‌ನ್ನು ರೈತರಿಗೆ ಉಚಿತವಾಗಿ ಸರ್ಕಾರದವರು ಒದಗಿಸುವುದು ಸರ್ಕಾರದ ಕರ್ತವ್ಯವಾಗಿದೆ. ಇದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ರೀತಿ ಮಾಡದೇ ಹೋದರೆ, ಈ ಔಷಧವನ್ನು ತಯಾರು ಮಾಡುವಂತಹ ಕಂಪನಿಯವರಿಗೆ ಸರ್ಕಾರದವರೇ ಲಾಭ ಮಾಡಿಕೊಟ್ಟಂತಾಗುತ್ತದೆ. ಮತ್ತು ರೈತರಿಗೆ ಸಹಾಯ ಮಾಡುವ ಯೋಜನೆ ಸರ್ಕಾರಕ್ಕೆ ಇಲ್ಲ ಎಂದು ರೈತರು ತಿಳಿದುಕೊಂಡರೆ ತಪ್ಪಾಗಲಾರದು. ಈ ದೃಷ್ಟಿಯಿಂದಲಾದರೂ ಸಹ ಇಷ್ಟರವರೆಗೆ ಉಪಯೋಗ ಮಾಡಿದ ಔಷಧಗಳ ಖರ್ಚು ಏನಿದೆ ಅದನ್ನು ವಸೂಲಿ ಮಾಡುವುದಕ್ಕೆ ಹೊರಟಿದ್ದಾರೆ ಅದನ್ನು ತಡೆಗಟ್ಟಬೇಕಲ್ಲದೆ, ಇನ್ನು ಮುಂದೆಯೂ ಸಹ ಉಚಿತವಾಗಿ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಯಾವ ಉದ್ದೇಶಕ್ಕೋಸ್ಕರ ಇದೆ ಎಂಬುದನ್ನು ನಾವು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಇಂದು ಈ ರೀತಿಯ ಕಾರ್ಪೊರೇಷನ್ ಪಂಜಾಬ್, ಕೇರಳಾ ಮುಂತಾದ ಅನೇಕ ರಾಜ್ಯಗಳಲ್ಲಿ ಇವೆ. ಆದರೆ ನಮ್ಮ ರಾಜ್ಯದ ಹಾಗೆ ಬೇರೆ ಯಾವ ರಾಜ್ಯಗಳಲ್ಲಿಯೂ ದಳ್ಳಾಳಿಗಳ ಕೆಲಸ ಮಾಡುವ ಸಂಸ್ಥೆಗಳಾಗಿ ದುಡಿಯುತ್ತಿಲ್ಲ. ರೈತರಿಗೆ ಬೇಕಾದ ಉಪಕರಣಗಳನ್ನು ಉತ್ಪಾದನೆ ಮಾಡಿ ಕೊಡುವ ಕೈಗಾರಿಕೆಗಳಾಗಿ ಹಾಗೂ ಸಣ್ಣ ಸಣ್ಣ ರೈತರ ವ್ಯವಸಾಯಕ್ಕೆ ಅನುಕೂಲವಾಗುವಂತಹ ಸಾಧನಸಲಕರಣೆಗಳನ್ನು ಒದಗಿಸುವ ಸಂಸ್ಥೆಗಳಾಗಿ ಕೆಲಸ ಮಾಡುತ್ತಿವೆ. ಈ ಬಗ್ಗೆ ನನಗೆ ವೈಯಕ್ತಿಕವಾಗಿ ಗೊತ್ತಿರುವ ಒಂದು ಅಂಶವನ್ನು ಇಲ್ಲಿ ಹೇಳುತ್ತೇನೆ. ಕೇರಳಾದಲ್ಲಿರುವ ಅಗ್ರಿಕಲ್ಚರಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಅವರು ಕುಬೋಟಾ ಎಂಬ ಪವರ್ ಟಿಲ್ಲರ್ಸ್‌ಗಳನ್ನು ತಯಾರಿಸಿ ಕಡಿಮೆ ಬೆಲೆಗೆ ರೈತರಿಗೆ ಒದಗಿಸುತ್ತಿದ್ದಾರೆ. ಈ ಪವರ್ ಟಿಲ್ಲರ್ಸ್‌ಗೆ ಬೇಕಾದ ಬಿಡಿ ಭಾಗಗಳನ್ನು ಶೇಕಡ 70 ರವರೆಗೆ ಅವರೇ ತಯಾರು ಮಾಡುತ್ತಿದ್ದಾರೆ. ಕೇವಲ ಇಂಜಿನ್ ಮತ್ತು ಗೇರನ್ನು ಮಾತ್ರ ಇಂಪೋರ್ಟ್ ಮಾಡಿಕೊಂಡು ಇಲ್ಲಿಯೇ ಅಸೆಂಬಲ್ ಮಾಡುತ್ತಿದ್ದಾರೆ. ಇದನ್ನು ಒಂದು ದೊಡ್ಡ ಸಂಸ್ಥೆಯಾಗಿ ನಡೆಸುತ್ತಿರುವುದಲ್ಲದೆ, ಟ್ರೈಲರ್ಸ್‌ನ್ನು ಕೂಡ ತಯಾರು ಮಾಡುತ್ತಿದ್ದಾರೆ. ಮತ್ತು ಬಹಳ ಕಡಿಮೆ ದರದಲ್ಲಿ ರೈತರಿಗೆ ಒದಗಿಸುತ್ತಿದ್ದಾರೆ.

(ಶ್ರೀ ಬಿ. ವಿ. ಕಕ್ಕಿಲಾಯ)

ಇಂಥಾ ಕೆಲಸಗಳನ್ನು ನಮ್ಮ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮಾಡುತ್ತಿಲ್ಲ. ಆದರೆ ಗದಗಿನ ಹತ್ತಿ ಗಿರಣಿಗೆ ಹಣವನ್ನು ಕೊಟ್ಟಿದ್ದಾರೆ. ಧಾರವಾಡ ಸಕ್ಕರೆ ಕಾರ್ಖಾನೆಗೆ ಹಣವನ್ನು ಕೊಟ್ಟಿದ್ದಾರೆ. ಈವಿಚಾರವನ್ನೂ ಮಾನ್ಯ ವಿರೋಧಪಕ್ಷದ ನಾಯಕರೂ ಹೇಳಿದ್ದಾರೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ತಾವು ಮಾಡುವ ಕರ್ತವ್ಯವನ್ನು ಬಿಟ್ಟು ಗದಗಿನ ಹತ್ತಿ ಗಿರಣಿಗೆ ಏತಕ್ಕೆ ಹಣವನ್ನು ಕೊಡಬೇಕು? ಹತ್ತಿ ಗಿರಣಿಗೆ ಹಣವನ್ನು ಕೊಡಬೇಕಾದರೆ ಇಂಡಸ್ಟ್ರೀ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬೇರೆ ಇದೆ. ಅನೇಕ ಕಮರ್ಷಿಯಲ್ ಬ್ಯಾಂಕುಗಳು ಇವೆ. ಕೋಆಪರೇಟಿವ್ ಬ್ಯಾಂಕುಗಳು ಇವೆ. ಅವುಗಳು ಅದಕ್ಕೆ ಬೇಕಾದ ಹಣವನ್ನು ಒದಗಿಸುವುದಕ್ಕೆ ಸಾಧ್ಯವಿದೆ. ರೈತನಿಗೆ ಬೇಕಾದ ವ್ಯವಸಾಯದ ಸಲಕರಣೆಗಳು, ಫರ್ಟಿಲೈಜರ್ಸ್, ಪೆಸ್ಟಿಸೈಡ್ಸ್ ಒದಗಿಸುವುದಕ್ಕೆ ಹಣವಿಲ್ಲ ಎಂದು ಹೇಳಿ ಆಗ್ರೋ ಇಂಡಸ್ಟ್ರೀಸ್‌ನಿಂದ ಕಂಪನಿ ಗಿರಣಿಗಳನ್ನು, ಸಕ್ಕರೆ ಕಂಪೆನಿಗಳನ್ನು ಬೆಳೆಸುವುದಕ್ಕೆ ಹಣವನ್ನು ಡೈವರ್ಟ್ ಮಾಡುತ್ತಿದ್ದಾರೆ. ಇದು ರೈತರ ಮೇಲೆ ಮಾಡಿದಂತಹ ಅನ್ಯಾಯವಾಗಿದೆ ಎಂದು ನಾನು ಹೇಳಬಯಸುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯ. ಈಗ ಇವರು ಅಗ್ರಿಕಲ್ಚರಲ್ ಯೂನಿವರ್ಸಿಟಿಯನ್ನು ಮಾಡುವುದಕ್ಕೆ ಹೊರಟಿದ್ದಾರೆ. ಮತ್ತು ಅಗ್ರಿಕಲ್ಚರಲ್ ಕಾಲೇಜುಗಳನ್ನು ಮಾಡುವುದಕ್ಕೆ ಹೊರಟಿದ್ದಾರೆ. ಬಡತನದಲ್ಲಿರುವ ರೈತ ಅಗ್ರಿಕಲ್ಚರಲ್ ಕಾಲೇಜಿನಲ್ಲಿ ಓದುವುದಕ್ಕೆ ಬರುವುದಿಲ್ಲ. ಈಗ ಬಡವನ ಶೋಷಣೆಯಾಗುತ್ತಿದೆ. ಆದ್ದರಿಂದ ರೈತನ ಬಡತನವನ್ನು ದೂರ ಮಾಡುವುದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳದೆ ಯೂನಿವರ್ಸಿಟಿಗಳನ್ನು ಮಾಡುವುದಕ್ಕೆ ಹೋಗುತ್ತಿದ್ದಾರೆ. ಈಗಾಗಲೇ ಅಗ್ರಿಕಲ್ಚರಲ್ ಡಿಗ್ರಿ ಪಡೆದ ವಿದ್ಯಾರ್ಥಿಗಳು ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ವಿಧಾನ ಸೌಧದ ಮುಂದೆ ಅನ್ನ ಸತ್ಯಾಗ್ರಹ ಮಾಡಿದರು. ಅಗ್ರಿಕಲ್ಚರಲ್ ಕಾಲೇಜಿನಲ್ಲಿ 4 ವರ್ಷ ವ್ಯಾಸಂಗ ಮಾಡಿ ಡಿಗ್ರಿ ಪಡೆದುಕೊಂಡು ಬಂದ ವಿದ್ಯಾರ್ಥಿ ಕೃಷಿಯ ಅಭಿವೃದ್ಧಿದಾಗಿ ರೈತರಿಗೆ ಅನುಕೂಲ ಮಾಡುವ ಸ್ಥಿತಿಯಲ್ಲಿರಬೇಕು. ಮತ್ತು ಅವರು ಡಿಗ್ರಿಗಳನ್ನು ಪಡೆದುಕೊಂಡುಬಂದಮೇಲೆ ಅವರಿಗೆ ಉದ್ಯೋಗಗಳನ್ನು ಒದಗಿಸತಕ್ಕಂಥಾ ವ್ಯವಸ್ಥೆಯನ್ನು ಮಾಡಿಲ್ಲ.

ಈಗ ಮಂಗಳೂರಿನಲ್ಲಿ ಫಿಷರೀಸ್ ಕಾಲೇಜನ್ನು ಮಾಡಿದ್ದಾರೆ. ಇಡೀ ಭಾರತದಲ್ಲೇ ಒಂದೇ ಒಂದು ಫೀಷರೀಸ್ ಕಾಲೇಜು ಇದೆ. ನಮ್ಮಲ್ಲಿ ಇಂಜನಿಯರಿಂಗ್ ಕಾಲೇಜುಗಳು ಇವೆ, ಮೆಡಿಕಲ್ ಕಾಲೇಜುಗಳು ಇವೆ. ಈ ಕಾಲೇಜುಗಳಿಂದ ಅನೇಕರು ಪದವಿಧರರಾಗಿ ಬರುತ್ತಿದ್ದಾರೆ. ಆದರೆ ಇವರಿಗೆ ಉದ್ಯೋಗವನ್ನು ಕಲ್ಪನೆ ಮಾಡಿಕೊಟ್ಟಿಲ್ಲ. ಅಗ್ರಿಕಲ್ಚರಲ್ ಆಗಲೀ ಫೀಷರೀಸ್ ಆಗಲೀ ಆ ಕಾಲೇಜುಗಳಲ್ಲಿ ಡಿಗ್ರಿಗಳನ್ನು ಪಡೆದುಕೊಂಡು ಬಂದಂತಹವರನ್ನು ಉತ್ಪಾದನೆಯನ್ನು ಜಾಸ್ತಿ ಮಾಡುವುದಕ್ಕೆ ಬೇಕಾದಂತಹ ರೀತಿಯಲ್ಲಿ ಅವರನ್ನು ಬಳಸಿಕೊಳ್ಳುತ್ತಾ ಇಲ್ಲ. ಅವರನ್ನು ಕೃಷಿ ಅಭಿವೃದ್ಧಿಗೆ ಉಪಯೋಗಿಸಿಕೊಳ್ಳಬೇಕು ಎನ್ನುವ ಉದ್ದೇಶ ಇಲ್ಲ. ಏನೋ ಅವರಿಗೆ 4 ವರ್ಷ ಅಗ್ರಿಕಲ್ಚರಲ್ ಕೋರ್ಸ್ ಕಲಿಸಬೇಕು, ಅವರನ್ನು ಪದವಿಧರರನ್ನು ಮಾಡಬೇಕು ಎನ್ನುವ ಉದ್ದೇಶದಿಂದ ಅವರಿಗೆ ಆ ವಿದ್ಯೆಯನ್ನು ಕಲಿಸುತ್ತಾರೆ. ಆದರೆ ಅವರಿಗೆ ಉದ್ಯೋಗವನ್ನು ಒದಗಿಸುವ ವಿಷಯದಲ್ಲಿ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದಾರೆ. ಅವರಿಗೆ ವಿದ್ಯೆಯನ್ನು ಕಲಿಸಿದರೆ ಸಾಕು ಎಂದು ಸರ್ಕಾರದ ಭಾವನೆ ಇದ್ದಹಾಗೆ ಕಾಣುತ್ತದೆ.

ವ್ಯವಸಾಯವನ್ನು ಅಭಿವೃದ್ಧಿಪಡಿಸಬೇಕಾದರೆ ಅದರ ಜೊತೆಯಲ್ಲಿಯೇ ಅದಕ್ಕೆ ಬೇಕಾದಂತಹ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕು. ಈ ಬಗ್ಗೆ ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ಇತ್ತೀಚೆಗೆ ಕೇರಳದಲ್ಲಿ ವ್ಯವಸಾಯದ ಕಲೆಕ್ಟೀವ್ ಫಾರಂ ಮಾಡುವುದಕ್ಕೆ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಅಲ್ಲಿ ಕಲೆಕ್ಟೀವ್ ಫಾರಂ ಮಾಡುವುದಕ್ಕೆ 1450 ಹೆಕ್ಟೇರ್ ಪ್ರದೇಶವನ್ನು ತಗೆದುಕೊಂಡು ಅದನ್ನು 5 ವಿಭಾಗಗಳಾಗಿ ವಿಂಗಡಣೆ ಮಾಡಿ ಒಂದೊಂದು ಭಾಗದಲ್ಲಿ 50-50 ಜನ ಆಗ್ರಿಕಲ್ಚರಲ್ ಲೇಬರರ್ಸ್ ಅನ್ನು ಇಟ್ಟು 1250 ಎಕರೆಯಲ್ಲಿ 250 ಕೃಷಿ ಕುಟುಂಬಗಳು ಸಹಕಾರ ಸಂಘಗಳ ಮೂಲಕ ವ್ಯವಸಾಯ ಮಾಡುವುದಕ್ಕೆ ಯೋಜನೆಯನ್ನು ಹಾಕಿದ್ದಾರೆ. ಅದರಲ್ಲಿ ಬರತಕ್ಕಂಥಾ ಉತ್ಪನ್ನದಲ್ಲಿ ಸೊಸೈಟಿಯ ಖರ್ಚು ಮತ್ತು ರಿಜರ್ವ್ ಫಂಡ್, ಟ್ರ್ಯಾಕ್ಟರನ್ನು ಉಪಯೋಗಿಸಿಕೊಂಡದ್ದಕ್ಕೆ ಕೊಡಬೇಕಾದ ಹಣ ಮತ್ತು ಸರ್ಕಾರಕ್ಕೆ ಕೊಡಬೇಕಾದಂತಹ ಹಣ ಎಲ್ಲಾ ಕಳೆದು ಎಷ್ಟು ನೆಟ್ ಪ್ರಾಫಿಟ್ ಬರುತ್ತದೆ ಅದನ್ನು 250 ಕುಟುಂಬಗಳೂ ಹಂಚಿಕೆ ಪಡೆಯುವಂತಹ ಯೋಜನೆಯನ್ನು ಹಾಕಿದ್ದಾರೆ. ಪ್ರತಿಯೊಂದು ಕುಟುಂಬಕ್ಕೂ ಒಂದು ಮನೆ, ಎರಡು ಎಕರೆ ಹೊಲ ಸ್ವಂತಕ್ಕೆ ಕೊಟ್ಟು ಅದರಲ್ಲಿ ಅವರು ತಮಗೆ ಬೇಕಾದ ಹಾಗೆ ಉಪ

ಸಂಪಾದನೆ ಮಾಡಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಟ್ಟು ಒಂದು ಯೋಜನೆಯನ್ನು ಕಾರ್ಯ ರೂಪಕ್ಕೆ ತಂದಿದ್ದಾರೆ. ಈ ರೀತಿಯಾಗಿ ಕೇರಳದಲ್ಲಿ ಕಲೆಕ್ಟೀವ್ ಫಾರಂ ಮಾಡುವುದಕ್ಕೆ ಸರ್ಕಾರದವರು ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಅದಕ್ಕಿಂತ ಹೆಚ್ಚು ಅನುಕೂಲತೆ ಮತ್ತು ಹೆಚ್ಚು ವಿಸ್ತೀರ್ಣ ಇರುವ ನಮ್ಮ ರಾಜ್ಯದಲ್ಲಿ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ಅಂಥಾ ಯೋಜನೆಯನ್ನು ಮಾಡುವುದಕ್ಕೆ ಸಾಧ್ಯ ಇದೆ.

ಟೆಕ್ನಲಾಜಿಕಲ್ ಡೆವಲಪ್‌ಮೆಂಟ್ ಮೂಲಕ ಕೃಷಿ ಅಭಿವೃದ್ಧಿಗೆ ಪ್ರಯತ್ನ ಮಾಡಬೇಕು. ಇದರಿಂದ ನಮ್ಮ ದೇಶದಲ್ಲಿ ಹಸಿರುಕ್ರಾಂತಿ ಬರುವಹಾಗೆ ಮಾಡಿ ಜನ ಜೀವನಮಟ್ಟವನ್ನು ಸುಧಾರಿಸುವುದಕ್ಕೆ ಪ್ರಯತ್ನ ಮಾಡಬೇಕು. ಈ ರೀತಿ ಮಾಡುವುದಾದರೆ ಸಾಮಾಜಿಕ ಬೆಳವಣಿಗೆಗೆ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರದವರು ಇದನ್ನು ಯೋಚನೆ ಮಾಡಬೇಕೆಂದು ನಾನು ಹೇಳುತ್ತೇನೆ. ಅರಣ್ಯ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ನಾನು ಹೇಳಬಯಸುತ್ತೇನೆ. ನಮ್ಮ ಮೈಸೂರು ರಾಜ್ಯದಲ್ಲಿ 18.3 ಪರ್ಸೆಂಟ್ ಅರಣ್ಯ ಇದೆ. ಇದು ಅಖಿಲಭಾರತದ ಆವರೇಜಿಗಿಂತ ಕಡಿಮೆ ಇದೆ. ಎಲ್ಲೆಲ್ಲಿ ಸಾಧ್ಯವಾಗುತ್ತದೆಯೋ ಅಲ್ಲೆಲ್ಲಾ ಕಾಡನ್ನು ಬೆಳೆಸುವುದಕ್ಕೆ ಇಲಾಖೆಯವರು ಪ್ರಯತ್ನ ಮಾಡಬೇಕು. ಈಗ ಸುಮಾರು 20–25 ವರ್ಷಗಳಿಂದ ಅರಣ್ಯದಲ್ಲಿ ಕೆಲವರು ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಅವರನ್ನೂ ಕೂಡ ಹೊರಗೆ ಹಾಕಿ, ಅಲ್ಲಿ ಕಾಡನ್ನು ಬೆಳೆಸಬೇಕು ಎಂದು ನಮ್ಮ ಮಾನ್ಯ ಅರಣ್ಯ ಶಾಖೆಯ ಮಂತ್ರಿಗಳು ಯೋಚನೆ ಮಾಡುತ್ತಿದ್ದಾರೆ. ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮನೆ ಇರುವ ಜಾಗಕ್ಕೂ ಮತ್ತು ಕಾಡಿಗೂ ಮಧ್ಯೆ ಮಾರ್ಜಿನ್ 50 ಗಜ ಇರಬೇಕೆಂದು ಕಾನೂನು ಇತ್ತು. ಆದರೆ ನಮ್ಮ ದಕ್ಷಿಣಕನ್ನಡ ಜಿಲ್ಲೆ ಮೈಸೂರು ರಾಜ್ಯಕ್ಕೆ ಸೇರಿದ ಮೇಲೆ ಇಲ್ಲಿ 400 ಗಜ ಮಾರ್ಜಿನ್ ಇರಬೇಕೆಂದು ಕಾನೂನು ಮಾಡಿದ್ದಾರೆ. ಇದರಿಂದ ನಮ್ಮ ಜಿಲ್ಲೆಯಲ್ಲಿ ಅನೇಕರಿಗೆ ತೊಂದರೆಯಾಗಿದೆ. 50 ಗಜ ಬಿಟ್ಟು ಮನೆ ಕಟ್ಟಿಕೊಂಡು ತೆಂಗು ಅಡಿಕೆ ಬೆಳೆಸಿರುವವರು ಅದನ್ನು ಬಿಟ್ಟುಹೋಗಬೇಕೆಂದು ಹೇಳುತ್ತಿದ್ದಾರೆ ಅರಣ್ಯ ಬೇಡ ಎಂದು ನಾವು ಹೇಳುವುದಿಲ್ಲ. ಅರಣ್ಯ ಬೇಕು. ಈಗ ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ 57 ಪರ್ಸೆಂಟ ಪ್ರದೇಶ ಅರಣ್ಯ ಇಲಾಖೆಯವರ ಸ್ವಾಧೀನದಲ್ಲಿದೆ. ಉತ್ತರಕನ್ನಡ ಜಿಲ್ಲೆಯಲ್ಲಿ 83 ಪರ್ಸೆಂಟ್ ಅರಣ್ಯ ಇಲಾಖೆಯವರ ಕೈಯಲ್ಲಿದೆ. ಆದ್ದರಿಂದ ಅಲ್ಲಿರುವ ರೈತರಿಗೆ ಅರಣ್ಯಭೂಮಿಯನ್ನು ರೈತರಿಗೆ ವ್ಯವಸಾಯಕ್ಕೆ ಬಿಟ್ಟುಕೊಟ್ಟರೆ ಏನೂ ಅನ್ಯಾಯವಾಗುವುದಿಲ್ಲ. ಈಗ ಅರಣ್ಯದಲ್ಲಿ ಮನೆ ಕಟ್ಟಿಕೊಂಡಿರುವವರನ್ನು ಅಲ್ಲಿಂದ ಓಡಿಸಬೇಕು ಎಂದು ಹೇಳುವುದು ಸರಿಯಲ್ಲ.

ಈಗ ನೀರಾವರಿ ಯೋಜನೆಯನ್ನು ಕೈಗೊಳ್ಳುವಂತೆ ಅರಣ್ಯ ಯೋಜನೆಯನ್ನೂ ಕೈಗೊಂಡು ಎಲ್ಲಾ ಕಡೆಗಳಲ್ಲಿಯೂ ಅರಣ್ಯವನ್ನು ಬೆಳೆಸಿ ಎಲ್ಲಾ ಕಡೆಗಳಲ್ಲಿಯೂ ಮಳೆ ಬರುವಂತೆ ಮಾಡಬೇಕು. ನಮ್ಮಲ್ಲಿ ಸಾಕಷ್ಟು ಮಳೆ ಇದೆ. ಈಗ ಇದ್ದಂತಹ ರೈತರನ್ನು ಎಬ್ಬಿಸಿ, ಮಳೆ ಬರುವುದಕ್ಕೆ ಹೆಚ್ಚು ಕಾಡು ಬೆಳೆಸುತ್ತೇವೆಂದು ಪ್ರಯತ್ನ ಮಾಡಬೇಕಾಗಿಲ್ಲ. ಆದರೆ ಈಗ ಇರುವಂತಹ ಅರಣ್ಯವನ್ನು ರಕ್ಷಣೆ ಮಾಡಬೇಕು. ನಮ್ಮ ಮಂತ್ರಿಯವರು ಉತ್ಪತ್ತಿ ಜಾಸ್ತಿಯಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಆದರೆ ನೀವು ಒಂದು ಕಡೆ ರೈತರನ್ನು ಹೊರಗಡೆ ಹಾಕುತ್ತಿದ್ದೀರಿ ; ಇನ್ನೊಂದು ಕಡೆಯಿಂದ ಕಾಡು ಕಾಡನ್ನೇ ಸಂಪೂರ್ಣವಾಗಿ ಕಡಿದು ಹಾಕುತ್ತಿದ್ದೀರಿ. ಇನ್ನು ಎರಡು ಮೂರು ವರ್ಷ ತಾವು ಮಂತ್ರಿಯಾಗಿ 14 ಕೋಟಿ ಇದ್ದದ್ದು 19 ಕೋಟಿ, 19 ಕೋಟಿ ಇದ್ದದ್ದು 20 ಕೋಟಿಯಾಗಿದೆ ಎಂದು ಲೆಕ್ಕ ತೋರಿಸಬಹುದು. ಆದರೆ ಇವತ್ತು ತಮ್ಮ ನೀತಿಯಿಂದ ದಕ್ಷಿಣಕನ್ನಡ ಜಿಲ್ಲೆ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಕಾಡು ಹೋಗಿ ನಾಡಾಗುತ್ತಿದೆ. ಎಲ್ಲಾ ಕ್ಲಿಯರ್ ಫೆಲ್ಲಿಂಗ್ಸ್ ಮಾಡುತ್ತಿದ್ದಾರೆ. ಇವೊತ್ತಿನ ದಿವಸ ನೆಟ್ಟ ಗಿಡ ಮರವಾಗುವ ತನಕ ಯಾವ ಮರವನ್ನು ಸಹ ಕಡಿಯಬಾರದು. ಇಂಥ ಯೋಜನೆಯನ್ನು ಮಾಡುವುದನ್ನು ಬಿಟ್ಟು ಜನರ ಕಣ್ಣಿಗೆ ಮಣ್ಣು ಹಾಕುವುದಕ್ಕೋಸ್ಕರ, ಇಂಥ ಅಂಕಿ ಸಂಖ್ಯೆಗಳನ್ನು ಕೊಡುವುದಕ್ಕೆ ಹೋಗಬೇಡಿ. ಇವತ್ತು ಎಲ್ಲಿ ಕಡಿಮೆ ಅರಣ್ಯ ಇದೆ. ಅಲ್ಲಿ ಇನ್ನೂ ಹೆಚ್ಚು ಅರಣ್ಯವನ್ನು ಬೆಳೆಯಬೇಕು. ಅದೂ ಅಲ್ಲದೆ ನೀವು ಕಾಡು ಬೆಳೆಸುವ ಭೂಮಿಯಲ್ಲಿ ಕ್ಯಾಶ್ಯುನಟ್ ಮತ್ತು ಕೆಶುರಿನಾ ಮರಗಳನ್ನು ಹೆಚ್ಚು ಹೆಚ್ಚು ಬೆಳೆಸಿದರೆ ಅದರಿಂದ ವಿದೇಶೀ ವಿನಿಮಯ ಸಹ ಗಳಿಸುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲದೆ ಇಂಥ ಮರಗಳನ್ನು ಬೆಳೆಸುವುದರಿಂದ ನಮಗೆ ಭೂಮಿಯಲ್ಲಿ ನೀರು ಸಹ ಜಾಸ್ತಿ ಸಿಗುವುದಕ್ಕೆ ಅನುಕೂಲವಾಗುತ್ತದೆ. ಇಂಥ ಯೋಜನೆಗಳನ್ನು ತಾವು ಹಾಕಿಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಕಾಡಿನ ಮರಗಳನ್ನು ಕಡಿದು ಸಾಗಿಸುವುದರ ಬಗ್ಗೆ ನನ್ನ ಇತರ ಮಿತ್ರರು ಹೆಚ್ಚು ಹೇಳುತ್ತಾರೆ. ನನ್ನ ತಿಳಿವಳಿಕೆಯ ಮಟ್ಟಿಗೆ ಒಂದು ಕಡೆ ಒಬ್ಬರಿಗೆ 50 ಎಕರೆ ಕಾಡು ಕೊಟ್ಟಿದ್ದರೆ ಅವರು 500 ಎಕರೆ ಕ್ಲಿಯರ್ ಮಾಡಿದಂತಹ ನಿದರ್ಶನ ಇದೆ. ಅದಕ್ಕೆ ಕಾರಣರಾದ ಅಧಿಕಾರಿಗಳನ್ನು ಸಸ್‌ಪೆನ್‌ಶನ್ನಿನಲ್ಲಿಟ್ಟಿದ್ದೀರಿ ಎಂದು ಹೇಳಿದ್ದೀರಿ. ಆದರೆ ಅವರ ಮೇಲೆ ಏನು ತೀವ್ರವಾದ ಕಾರ್ಯಕ್ರಮವನ್ನು ತೆಗೆದುಕೊಂಡಿ

(ಶ್ರೀ ಬಿ. ವಿ. ಕಕ್ಕಿಲಾಯ)

ದ್ದೀರಿ ಎಂಬುದನ್ನು ಹೇಳಬೇಕು. ಇಂಥ ಬ್ಲಾಕ್ ಮಾರ್ಕೆಟಿಯರ್ಸ್ ಏನಿದ್ದಾರೆ ಅವರು ಹೀಗೆ ಕಾಡುಗಳನ್ನು ತೆಗೆದುಕೊಂಡು ಅಕ್ರಮವಾಗಿ ಕಡಿದು, ಅಲ್ಲಿರುವಂತಹ ಬೀಟೆ ಮರ, ಗಂಧದ ಮರ ಮತ್ತು ಸಾಗುವಾನಿ ಮರಗಳನ್ನು ಕೇರಳಕ್ಕೆ ಮತ್ತು ಬಾಂಬೆಗೆ ಸಾಗಿಸುತ್ತಿದ್ದಾರೆ. ಇವತ್ತು ಅಕ್ಕಿಯ ಸಾಗಾಣಿಕೆಗೆ ಅಂತರ ಜಿಲ್ಲಾ ನಿರ್ಬಂಧವನ್ನು ಹಾಕಿದ್ದೀರಿ. ಆದರೆ ಇಂಥ ಮರಗಳನ್ನು ಸಾಗಿಸುವುದಕ್ಕೆ ಏಕೆ ನಿರ್ಬಂಧ ಹಾಕಿಲ್ಲ? ಈ ರೀತಿಯ ಕ್ಲಾಂಡೆಸ್ಟೈನ್ ಮೂವ್‌ಮೆಂಟ್ ಆಫ್ ಟಿಂಬರಿಗೆ ಏಕೆ ತಡೆ ಹಾಕುತ್ತಾ ಇಲ್ಲ ಮತ್ತು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಮತ್ತು ಎಷ್ಟು ಜನರಿಗೆ ಈ ಅಪರಾಧ ಮಾಡಿದಕ್ಕೋಸ್ಕರ ಜೈಲಿಗೆ ಕಳಿಸಿದ್ದೀರಿ, ಎಷ್ಟು ಜನ ಬ್ಲಾಕ್‌ಮನಿ ಇಟ್ಟುಕೊಂಡವರ ಹಣವನ್ನು ಸ್ವಾಧೀನ ಮಾಡಿದ್ದೀರಿ ಎಂಬುದನ್ನು ಹೇಳಬೇಕು. ಆದ್ದರಿಂದ ಈ ವಿಚಾರವನ್ನು ಗಮನಿಸಿ, ಇದರ ಬಗ್ಗೆ ಯೋಗ್ಯವಾದ ಕ್ರಮವನ್ನು ತೆಗೆದುಕೊಂಡರೆ ಮುಂದಿನ ಸಲದ ಬಜೆಟ್ ಬರುವಾಗ ತಮ್ಮನ್ನು ಅಭಿನಂದಿಸುತ್ತೇನೆ ಅಲ್ಲದೆ ಇವತ್ತು ಅಭಿನಂದಿಸುವುದಕ್ಕೆ ಯಾವ ಕಾರಣವೂ ಕಾಣುವುದಿಲ್ಲ. ಆದ್ದರಿಂದ ಈ ಡಿಮ್ಯಾಂಡುಗಳನ್ನು ತೀವ್ರವಾಗಿ ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ):—ಮಾನ್ಯ ಅಧ್ಯಕ್ಷರೇ, ವ್ಯವಸಾಯ ಮತ್ತು ಅರಣ್ಯ ಇಲಾಖೆಯ ಬೇಡಿಕೆಯ ಬಗ್ಗೆ ನನ್ನ ಬೆಂಬಲವನ್ನು ಕೊಡುತ್ತಾ ಕೆಲವು ಮಾತುಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಹಸಿರು ಕ್ರಾಂತಿಯಾಗಬೇಕೆಂಬ ಕೂಗು ಎಲ್ಲಾ ಕಡೆಯೂ ಕೇಳಿ ಬರುತ್ತಿದೆ. ಆದರೆ ಇದು ಎಷ್ಟು ಮಟ್ಟಿಗೆ ಆಗಿದೆ ಎಂಬುದನ್ನು ನೋಡಿದರೆ ನಾವು ನಿರೀಕ್ಷಿಸಿದ ಮಟ್ಟಿಗೆ ಆಗಲಿಲ್ಲವೆಂದು ಹೇಳಬೇಕಾಗಿದೆ. ಇದಕ್ಕೆ ಕಾರಣವೂ ಇದೆ. ಉತ್ತರ ಕರ್ನಾಟಕದಲ್ಲಿ ಭೀಕರವಾದ ಬರಗಾಲ ಬಂದಿರುವುದರಿಂದ ಅಲ್ಲಿ ವ್ಯವಸಾಯದ ಬೆಳೆಗಳನ್ನು ಬೆಳೆಸುವುದಕ್ಕೆ ಆಗ ಲಿಲ್ಲ. ಆದರೂ ಸಹ ಹರಿಯಾನ, ಪಂಜಾಬ್ ಮತ್ತು ಮದ್ರಾಸ್ ರಾಜ್ಯಗಳನ್ನು ಹೋಲಿಕೆ ಮಾಡಿ ದರೆ ನಮ್ಮ ರಾಜ್ಯದಲ್ಲಿ ಹಸಿರುಕ್ರಾಂತಿ ಸಾಕಷ್ಟು ಆಗಲಿಲ್ಲ. ಇದರ ಬಗ್ಗೆ ಇನ್ನೂ ಹೆಚ್ಚಿನ ಗಮನ ಕೊಡಬೇಕಾಗಿದೆ. ವ್ಯವಸಾಯಕ್ಕೆ ಬಹಳ ಪ್ರಾಮುಖ್ಯತೆಯನ್ನು ನಾವು ಕೊಡಬೇಕಾಗಿದೆ. ಇವತ್ತು ಇದನ್ನು ಅವಲಂಬಿಸಿರುವವರು ಶೇಕಡಾ 80 ಜನರು ಇದ್ದಾರೆ. ಈಗ ವಿಶ್ವ ಬ್ಯಾಂಕಿನಿಂದ ರೈತರಿಗೆ ಸಾಲ ಕೊಡುವ ಒಂದು ಏರ್ಪಾಡು ನಡೆದಿದೆ. ನೀರಾವರಿ ಕಾಮಗಾರಿಗಳಿಗೆ ಸುಮಾರು ಎರಡು ಕೋಟಿ ರೂಪಾಯಿ ಸಾಲ ಕೊಡುವುದಕ್ಕೆ ಇವರು ಒಪ್ಪಿಕೊಂಡಿದ್ದಾರೆ. ಇದನ್ನು ಇನ್ನೂ ಹೆಚ್ಚಿಗೆ ಮಾಡಿ ಇದರ ಉಪಯೋಗವನ್ನು ರಾಜ್ಯಸರ್ಕಾರದವರು ಪಡೆದುಕೊಳ್ಳಬೇಕೆಂದು ಹೇಳು ತ್ತೇನೆ. ನಮ್ಮ ವಿರೋಧಪಕ್ಷದ ನಾಯಕರು ರೈತರ ವಿಷಯದಲ್ಲಿ ಬಹಳ ಕಳಕಳಿಯಿಂದ ಕೆಲವು ಮಾತುಗಳನ್ನು ಹೇಳಿದರು. ಅದರಲ್ಲಿ ಕೆಲವು ನಿಜವಾದ ಮಾತುಗಳು ಇವೆ. ಏಕೆಂದರೆ ರೈತರಿಗೆ ಅನೇಕ ತೊಂದರೆಗಳು ಇವೆ. ಅದರಲ್ಲೂ ಸಾಲ ಪಡೆಯುವ ವಿಚಾರದಲ್ಲಿ ತಮ್ಮ ಹೆಚ್ಚಿನ ಕಾಲವನ್ನು ಅದಕ್ಕೆ ಉಪಯೋಗಿಸಬೇಕಲ್ಲದೆ ಅವರು ಅದಕ್ಕೆ ಹಣ ಸಹ ಬಹಳ ಖರ್ಚು ಮಾಡಬೇಕಾಗಿದೆ. ಸಹ ಕಾರ ಸಂಘಗಳ ಮುಖಾಂತರ ದೀರ್ಘಾವಧಿ, ಮಧ್ಯಮಾವಧಿ ಮತ್ತು ಅಲ್ಪಕಾಲಾವಧಿಯ ಸಾಲ ಪಡೆಯುವುದಕ್ಕೆ ಬಹಳ ಅಡ್ಡ ಆತಂಕಗಳು ಇವೆ. ಇವತ್ತು ದೀರ್ಘಾವಧಿ ಮತ್ತು ಮಧ್ಯಮ ಅವಧಿ ಯಲ್ಲಿ ಸುಮಾರು 43 ಕೋಟಿ ರೂಪಾಯಿ ಮತ್ತು ಅಲ್ಪಕಾಲಾವಧಿಯ ಸುಮಾರು 16ಕೋಟಿ ಸಾಲ ವನ್ನು ರೈತರಿಗೆ ಕೊಡುತ್ತಿದ್ದಾರೆ. ಆದರೆ ಇದರಿಂದ ಎಷ್ಟು ಮಟ್ಟಿಗೆ ಪ್ರಯೋಜನವಾಗುತ್ತಿದೆ ಎಂದು ನೋಡಿದರೆ ಅಷ್ಟು ಮಟ್ಟಿಗೆ ಪ್ರಯೋಜನವಾಗಲಿಲ್ಲ. ಕಾರಣ ಸಾಲ ಪಡೆಯುವಾಗ ಅನೇಕ ಭಾಗವನ್ನು ಅಲ್ಲೇ ಕಳೆಕೊಳ್ಳುತ್ತಾರೆ. ಅಲ್ಲದೆ ಸಾಲ ಪಡಕೊಂಡರೆ, ಅವರು ಇತರ ಸಾಲವನ್ನು ತೀರಿಸುವುದಕ್ಕೆ ಮತ್ತು ಮದುವೆ ಮುಂಜಿಗಳಿಗೆ ಆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದ್ದ ರಿಂದ ಪಡಕೊಂಡ ಸಾಲದಲ್ಲಿ ವ್ಯವಸಾಯಕ್ಕೆ ಹೆಚ್ಚು ಉಪಯೋಗವಾಗುತ್ತಾ ಇಲ್ಲ. ಆದ್ದರಿಂದ ವ್ಯವಸಾಯ ಇಲಾಖೆಯವರು ವ್ಯವಸಾಯದ ಕಾಲಕ್ಕೆ ಸರಿಯಾಗಿ ಸಾಲ ಸಿಗುವ ಹಾಗೆ ಮಾಡಬೇಕು.

ಅದೇ ರೀತಿ ಇವತ್ತು ರಾಸಾಯನಿಕ ಗೊಬ್ಬರ ಸಿಗುವುದು ಸಹ ಬಹಳ ದುರ್ಲಭವಾಗಿದೆ. ಮಂಗಳೂರು ಫರ್ಟಿಲೈಸರ್ ಪ್ಲಾಂಟ್ ಸ್ಥಾಪನೆ ಮಾಡಿದ್ದಾರೆ. ಇದನ್ನು ಜಾಗ್ರತೆಯಾಗಿ ಕಾರ್ಯಾ ಚರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈ ಪ್ಲಾಂಟಿನಲ್ಲಿ ಸ್ಥಾಪಿಗೆ ಹೆಚ್ಚು ಹಣ ಖರ್ಚು ಮಾಡುತ್ತಿದ್ದಾರೆ, ಆದರೆ ಈ ರೀತಿ ಮಾಡಿದರೆ, ಗೊಬ್ಬರದ ಬೆಲೆ ಜಾಸ್ತಿಯಾಗುತ್ತದೆ ಮತ್ತು ರೈತ ರಿಗೆ ಇದರಿಂದ ಹೊರೆ ಜಾಸ್ತಿ ಬೀಳುತ್ತದೆ. ಹಾಗೆಯೇ ನಮ್ಮ ರಾಜ್ಯದಲ್ಲಿ ಇನ್ನೊಂದು ಗೊಬ್ಬರ ಕಾರ್ಖಾನೆ ಸ್ಥಾಪನೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಮತ್ತು ರೈತ

ರಿಗೆ ಇನ್ನೂ ಕೆಲವು ಅವಶ್ಯಕವಾದ ಪದಾರ್ಥಗಳು ಬೇಕಾಗುತ್ತದೆ. ಅವರಿಗೆ ಸಣ್ಣ ಸಣ್ಣ ಫಾರ್ಮ್ ಹೌಸ್ ಮಾಡುವುದಕ್ಕೆ ಸಿಮೆಂಟ್ ಮತ್ತು ಕಬ್ಬಿಣ ಬೇಕಾಗುತ್ತದೆ. ಅವುಗಳನ್ನು ಸಹ ಸಕಾಲಕ್ಕೆ ಸಿಗುವಂತೆ ಮಾಡಬೇಕು. ಮತ್ತು ಸೊಸೈಟಿಗಳು ಇವುಗಳನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡುತ್ತಾ ಇಲ್ಲ. ಇದರಿಂದ ಸಹ ರೈತರಿಗೆ ತೊಂದರೆಯಾಗಿದೆ. ಆ ಮೇಲೆ ಬೆಂಗಳೂರಿನಲ್ಲಿ ಕೃಷಿ ವಿಶ್ವವಿದ್ಯಾನಿಲಯ ಇವೆ. ಅದು ಸ್ಥಾಪನೆಯಾದ ಲಾಗಾಯ್ತು ಒಬ್ಬರು ಉಪಕುಲಪತಿಗಳು ಪರಿಣತರು ಇದ್ದಾರೆ. ಅವರೆ ಹಳ್ಳಿಗಾಡಿನಿಂದ ಬಂದಂತಹ ಜನರಿಗೆ ಸಾಕಷ್ಟು ಸೀಟುಗಳನ್ನು ಅಲ್ಲಿ ಕೊಡುತ್ತಾ ಇಲ್ಲ. ವ್ಯವಸಾಯದಲ್ಲಿ ಆಸಕ್ತಿ ಇದ್ದಂತಹ ವ್ಯವಸಾಯ ಕುಟುಂಬದ ಮಕ್ಕಳಿಗೆ ಅಲ್ಲಿ ಅವಕಾಶ ಹೆಚ್ಚು ಸಿಗುವ ಹಾಗೆ ಮಾಡಬೇಕು. ಇನ್ನೊಂದು ಅಲ್ಲಿರುವ ತೊಡಕು ಏನೆಂದರೆ ಧರ್ಮವೀರರು ಇರುವ ಕಾಲದಲ್ಲಿ ಅಲ್ಲಿ ಇಂಟರ್‌ವ್ಯೂಗೆ ಇದ್ದಂತಹ ಮಾರ್ಕುಗಳನ್ನು 100 ರಿಂದ ಮೂವತ್ತಕ್ಕೆ ಇಳಿಸಿದ್ದಾರೆಂದು ತಿಳಿದು ಬಂದಿದೆ. ಇದು ಸಹ ಹಳ್ಳಿಗಾಡಿನ ವಿದ್ಯಾರ್ಥಿಗಳಿಗೆ ಒಂದು ಅಡಚಣೆಯಾಗಿದೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡ ಹಳ್ಳಿಗಾಡಿನವರಿಗೆ ಇಲ್ಲಿ ಹೆಚ್ಚಿನ ಅವಕಾಶ ದೊರೆಯುವಂತೆ ಮಾಡಬೇಕೆಂದು ಹೇಳುತ್ತೇನೆ. ಆಮೇಲೆ ಸರ್ಕಾರದವರು ಇನ್ನೊಂದು ಇಂಥ ಯೂನಿವರ್ಸಿಟಿ ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದಾರೆ. ಆದರೆ ಸಧ್ಯಕ್ಕೆ ಒಂದೇ ವಿಶ್ವವಿದ್ಯಾನಿಲಯ ಸಾಕು. ಆದರೆ ಜಿಲ್ಲಾ ಮಟ್ಟದಲ್ಲಿ ಅಗ್ರಿಕಲ್ಚರಲ್ ಸ್ಕೂಲುಗಳನ್ನು ಮಾಡುವುದು ಒಳ್ಳೆಯದು. ಇನ್ನು ಹಾರ್ಟಿಕಲ್ಚರ್ ವಿಚಾರದಲ್ಲಿ ಹೇಳುವುದಾದರೆ, ಬೇರೆ ರಾಜ್ಯಗಳಲ್ಲಿ ಇದಕ್ಕೆ ಬೇರೆಯೇ ಇಲಾಖೆ ಇಲ್ಲ. ಆದರೆ ಇಲ್ಲಿ ಅಗ್ರಿಕಲ್ಚರಲ್ ಇಲಾಖೆಯಿಂದ ಪ್ರತ್ಯೇಕವಾಗಿದೆ. ಆದರೂ ಕೆಲವು ಕಡೆ ಮಾಡಿದ ಪ್ರಗತಿ ಸಾಲದು. ಇದನ್ನು ಇನ್ನೂ ಹೆಚ್ಚು ಸಾಧನೆ ಮಾಡಬೇಕು. ಸೀಟುಗಳು ಒಂದೇ ವರ್ಗದವರಿಗೆ ಸಿಗುತ್ತದೆಂಬ ಅಪಾದನೆ ಇವೆ. ಆ ಅಪಾದನೆ ಇರಬಾರದು. ಯಾರು ವ್ಯವಸಾಯದಲ್ಲಿ ಆಸಕ್ತರಾಗಿ ಚೆನ್ನಾಗಿ ಕೆಲಸಮಾಡುತ್ತಾರೋ ಅಂತಹ ಗ್ರಾಜುಯೇಟ್ಸ್ ವಿದ್ಯಾವಂತರಿಗೆ ಸಿಗುವುದಕ್ಕೆ ಹೆಚ್ಚಿನ ಅವಕಾಶ ಇರಬೇಕು. ಅಪಾಯಿಂಟ್‌ಮೆಂಟಿನಲ್ಲಿರತಕ್ಕವರು ಕೆಲವು ನೌಕರರು ಬಹಳ ವರ್ಷಗಳಿಂದ ಒಂದೇ ಕಡೆ ಇದ್ದಾರೆ, ಹಾಸನ ಜಿಲ್ಲೆಯಲ್ಲಿ ಒಂದೇ ಇಲಾಖೆಯಲ್ಲಿ ಸುಮಾರು 8—10 ವರ್ಷಗಳಿಂದಲೂ ಕೆಲವರು ಇದ್ದಾರೆ. ಅಲ್ಲಿ ಅವರು ಸೇರಿಕೊಂಡು ರಾಜಕೀಯವನ್ನು ಮಾಡುತ್ತಿದ್ದಾರೆ. ಅವರಲ್ಲಿ ಕೆಲವು ನ್ಯೂನತೆಗಳಿವೆಯೆಂದು ನನಗೆ ಕೇಳಿ ಬರುತ್ತಿದೆ. ಇದನ್ನು ಡೈರೆಕ್ಟರ್ ಅವರು ಪರಿಶೀಲನೆಮಾಡಬೇಕು. ಅನೇಕಸಾರಿ ಅವರಿಗೆ ದೂರುಗಳು ಹೋದರೂ ಯಾವ ಕಾರ್‍ಯಕ್ರಮವನ್ನೂ ತೆಗೆದುಕೊಂಡಿಲ್ಲ. ಆ ರೀತಿ ಆಗಬಾರದು. ಯಾವ ನೌಕರನೇ ಆಗಲೀ ಮೂರು ನಾಲ್ಕು ವರ್ಷಗಳಾದ ಮೇಲೆ ಒಂದೇ ಕಡೆ ಇರುವುದು ಯೋಗ್ಯವಲ್ಲ.

5 00 P .M.

ಇನ್ನೊಂದು ವಿಷಯ. ಹಾಸನ ಜಿಲ್ಲೆಯಲ್ಲಿ ಆಲೂಗಡ್ಡೆ ಬಹಳವಾಗಿ ಬೆಳೆಯುತ್ತಿದೆ. ಅದಕ್ಕೆ ಏನೇನು ಅನುಕೂಲಗಳು ಬೇಕೋ ಅವನ್ನು ಅಲ್ಲಿ ಕಲ್ಪಿಸಿಕೊಡಬೇಕು. ಅದನ್ನು ಹೆಚ್ಚು ದಿವಸಗಳು ಇಡುವುದಕ್ಕೆ ಆಗುವುದಿಲ್ಲ. ಆದಕ್ಕಾಗಿ ಕೋಲ್ಡ್ ಸ್ಟೋರೇಜ್ ಪ್ಲಾಂಟ್ ಬಗ್ಗೆ ಸರ್ಕಾರದವರು ಹೆಚ್ಚಿಗೆ ಲಕ್ಷ್ಯ ಕೊಟ್ಟಿಲ್ಲ. ಇಂತಹ ಪ್ರಾಮುಖ್ಯವಾದ ಬೆಳೆಗೆ ಹೆಚ್ಚಿನ ಲಕ್ಷ್ಯವನ್ನು ಸರ್ಕಾರದವರು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟಿನವರು ಹಳ್ಳಿಗಳ ಬಗ್ಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಮುಖ್ಯವಾಗಿ ಮಲೆನಾಡಿನ ಕಿತ್ತಲೆಹಣ್ಣಿನ ಬೆಳೆಗೆ, ಬಾಳೆ, ಅನಾನೋಸ್ ಮುಂತಾದ ಹಣ್ಣುಗಳನ್ನು ಹೆಚ್ಚಿಗೆ ಬೆಳೆಯುವುದಕ್ಕೆ ಸೂಕ್ತವಾದ ಸೌಲಭ್ಯಗಳನ್ನು ಕೊಡಬೇಕು. ಟೆಕ್ನಿಕಲ್ ಆಸಿಸ್ಟೆನ್ಸನ್ನು ರೈತರಿಗೆ ಈ ಬಗ್ಗೆ ಕೊಡಬೇಕೆಂದು ನಾನು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟ್ ಏನಿದೆಯೋ ಇದು ಬಹಳ ಮುಖ್ಯವಾದಂಥ ಇಲಾಖೆ. ಯಾವುದೇ ರಾಜ್ಯ ಅಥವಾ ದೇಶದಲ್ಲಿ ಒಂದು ಸಂಸ್ಕೃತಿ ಬೆಳೆಯಬೇಕಾದರೆ ಅಲ್ಲಿ ಫಾರೆಸ್ಟ್ ಇರಬೇಕು. ಅದು ಅಧಿಕವಾಗಿ ಇರಬೇಕು. ಫಾರೆಸ್ಟ್ ಇಲ್ಲದೇ ಹೋದರೆ ಆದು ಅಲ್ಲಿ ಮರುಭೂಮಿಯಾಗಿ ದೇಶದ ಜನತೆಯ ಮೇಲೆ ಒಂದು ಪರಿಣಾಮ ಬೀರುತ್ತದೆ. ಕೊಡಗಿನಲ್ಲಿ ಹಿಂದೆ ಫಾರೆಸ್ಟ್ ಬಹಳವಾಗಿತು. ಅಲ್ಲಿನ ಸಂಸ್ಕೃತಿಯೂ ಬಹಳ ಚೆನ್ನಾಗಿತ್ತು. ಈಗ ಅಲ್ಲಿನ ಜನಗಳ ವಿಶಿಷ್ಟ ಸಂಸ್ಕೃತಿ ಕ್ರಮೇಣ ಮಾಯವಾಗಿದೆ. ನಮ್ಮ ದೇಶದಲ್ಲಿ ಎಲ್ಲಿಯೇ ನೋಡಲಿ, ಇತ್ತೀಚೆಗೆ ಫಾರೆಸ್ಟ್ ನಾಶವಾಗುತ್ತಿದೆ. ಒಂದು ಸಣ್ಣ ಉದಾಹರಣೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ. ಹಿಂದೆ ರೆವಿನ್ಯೂ ಡಿಪಾರ್ಟ್‌ಮೆಂಟಿನವರು ಸಾಲುಮರಗಳನ್ನು ಹಾಕುತ್ತಿದ್ದರು. ಬಹಳ ಚೆನ್ನಾಗಿ ಕಾಪಾಡುತ್ತಿದ್ದರು. ಸುಮಾರು 50—100 ವರ್ಷಗಳಿಂದಲೂ ಮರಗಳು

(ಶ್ರೀ ಕೆ. ಎಂ. ರುದ್ರಪ್ಪ)

ಚೆನ್ನಾಗಿ ಬೆಳೆದಿದ್ದುವು. ಆ ಮೇಲೆ ಪಿ. ಡಬ್ಲ್ಯು. ಡಿ. ಇಲಾಖೆಗೆ ವರ್ಗವಾದಮೇಲೆ ಸುಮಾರಾಗಿತ್ತು. ಆದರೆ ಅದು ಈಚೆಗೆ ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಬಂದಿದೆ. ಈಗ ಮರಗಳನ್ನು ಎಲ್ಲಿ ನೋಡಿದರೂ ಕಡಿಯುತ್ತಿದ್ದಾರೆ. ಸಾಲುಮರಗಳು ಎಂಬುದು ಒಂದು ಸಣ್ಣ ವಿಚಾರ ಇವರಿಗೆ ಇರಬಹುದು ಆದರೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಇವುಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸುವುದಕ್ಕೆ ಹೆಚ್ಚಿನ ನಿಗಾ ಕೊಡಬೇಕು. ಹಿಂದೆ ಕೇಂದ್ರ ಸರ್ಕಾರದಲ್ಲಿ ಮಾನ್ಯ ಶ್ರೀ ಮುನ್ಷಿಯವರು ಇದ್ದಾಗ ವನಮಹೋತ್ಸವ ಮಾಡುತ್ತಿದ್ದರು. ಹೆಚ್ಚಿಗೆ ಮರಗಿಡಗಳನ್ನು ಬೆಳೆಸುತ್ತಿದ್ದರು. ಅದನ್ನು ಈಗ ಕೈಬಿಟ್ಟಿರುವ ಹಾಗೆ ನನಗೆ ಕಾಣುತ್ತದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಒಂದು ಯೋಜನೆಯನ್ನು ಹಾಕಿಕೊಂಡು ನಮ್ಮ ದೇಶದಲ್ಲಿ ಮರಗಿಡಗಳನ್ನು ಹೆಚ್ಚಿಗೆ ಬೆಳೆಸಿ ಅರಣ್ಯ ಸಂಪತ್ತನ್ನು ಅಭಿವೃದ್ಧಿಮಾಡಬೇಕೆಂದು ನಾನು ಸಲಹೆಮಾಡುತ್ತೇನೆ. ಆದರೆ ಅರಣ್ಯ ಸಂಪತ್ತು ಹಾಸನದ ಜಿಲ್ಲೆಯಲ್ಲಿ ಬಹಳ ಕಡಿಮೆ. ನಮ್ಮಲ್ಲಿ ಸೇಕಡ 7.5ರಷ್ಟು ಮಾತ್ರ ಅರಣ್ಯ ಜಾಗವಿದೆ. ಅದೂ ಕೂಡ ಈಗ ನಶಿಸಿಹೋಗುತ್ತಿದೆ, ಸಕಲೇಶಪುರ, ಅಲೂರು ತಾಲ್ಲೂಕುಗಳನ್ನು ನೋಡಿದರೆ ಅಲ್ಲಿ ಮಲೆನಾಡು ಇದ್ದಹಾಗೆ ಕಾಣುತ್ತಿಲ್ಲ. ಒಟ್ಟಿನಲ್ಲಿ ಸಕಲೇಶಪುರದಲ್ಲಿ ಅರಣ್ಯ ಸಂಪತು ಹಾಳಾಗಿ ಹೋಗುತ್ತಿದೆ. ಆದರೂ ಹುಟ್ಟುವಳಿ ಇದ್ದೇ ಇದೆ. ಅಲ್ಲಿ ಸಿಕ್ಕಾಪಟ್ಟೆ ಲೈಸೆನ್ಸ್ ಕೊಟ್ಟು ಮರಗಳ ನಾಟ ಸಾಗಿಸುತ್ತಾರೆ. ಅಲ್ಲಿಂದ ಇನ್ನೊಂದು ಪ್ಲಾಂಟೇಷನ್ ಕ್ರಾಪ್ ಅಲ್ಲಿ ಬೆಳೆಯುತ್ತಿದ್ದರು. ಅದೂ ಕೂಡ ಈಗ ಕಡಿಮೆಯಾಗಿದೆ. ಅಲ್ಲಿ ಮಳೆಯೂ ಸಹ ಕಡಿಮೆಯಾಗಿದೆ. ಬಹು ಮುಖ್ಯವಾಗಿ ಶ್ರೀಗಂಧದ ಮರಗಳು ನಾಶವಾಗುತ್ತಿವೆ. ಗಂಧ ಬಹಳ ಬೆಲೆ ಬಾಳತಕ್ಕದ್ದು. ಮೈಸೂರು ರಾಜ್ಯದಲ್ಲ ಬೆಳೆಯತಕ್ಕ ಮರಗಳಲ್ಲಿ ಇದು ಬಹಳ ಶ್ರೇಷ್ಠ ದರ್ಜೆಯಲ್ಲಿ ಬೆಳೆಯುತ್ತಿದೆಯೆಂದು ನಾನು ಹೇಳುತ್ತೇನೆ. ಅದರ ಆ ಮರಗಳು ಈಗ ಕಾಣುತ್ತಲೇ ಇಲ್ಲ. ಕಳ್ಳ ಸಾಗಾಣಿಕೆ ಬಹಳ ಜಾಸ್ತಿಯಾಗಿ ಆಗುತ್ತಿದೆ. ವಿಜಿಲೆನ್ಸ್ ಡಿಪಾರ್ಟ್‌ಮೆಂಟ್ ನವರು ಕೇಸ್ ಹಾಕಿದಮೇಲೆ ಅಂತಹವರಿಗೆ ಸರಿಯಾದ ಶಿಕ್ಷೆ ವಿಧಿಸಬೇಕು. ಕೆಲವು ಸಂದರ್ಭಗಳಲ್ಲಿ ಕೇಸುಗಳನ್ನು ಹಾಕಿದರೂ ಅವು ನಿಲ್ಲುವುದಿಲ್ಲ. ಬ್ಯಾಡ್ ಇನ್‌ವೆಸ್ಟಿಗೇಷನ್ ಆಗಿರುತ್ತದೆ. ಇದರ ಬಗ್ಗೆ ಸರ್ಕಾರದವರು ಲಕ್ಷ್ಯ ಕೊಡಬೇಕು. ಮುಖ್ಯವಾಗಿ ಅರಣ್ಯ ಸಂಪತ್ತನ್ನು ಹೆಚ್ಚಿನ ರೀತಿಯಲ್ಲಿ ಕಾಪಾಡಿಕೊಂಡು ಬರಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸುತ್ತೇನೆ. ಬಹು ಮುಖ್ಯವಾಗಿ ಈಗ ನಮ್ಮ ಅರಣ್ಯ ಸಂಪತ್ತಿನಿಂದ ಹೆಚ್ಚಿನ ಉತ್ಪತ್ತಿ ಅಂದರೆ ಸುಮಾರು 19 ಕೋಟಿ ರೂಪಾಯಿಗಳ ಉತ್ಪತ್ತಿ ಬರುತ್ತದೆಂದು ಹೇಳಿದರು. ಬರೀ ಉತ್ಪತ್ತಿ ಒಂದೇ ಅಲ್ಲ, ಅರಣ್ಯ ಸಂಪತ್ತು ಜಾಸ್ತಿಯಾಗಿ ಮಾಡಬೇಕಾದರೆ ಮರಗಳನ್ನು ಕಡಿಯಬಾರದು. ಅದಕ್ಕಾಗಿ ಚೀಫ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್‌ನವರು ಮತ್ತು ವಿಜಿಲೆನ್ಸ್ ಡಿಪಾರ್ಟ್‌ಮೆಂಟಿನವರು ಅರಣ್ಯಸಂಪತ್ತನ್ನು ಚೆನ್ನಾಗಿ ಕಾಪಾಡಿಕೊಂಡು ಬರಬೇಕು. ಸಿಕ್ಕಾಪಟ್ಟೆ ಇದು ಸ್ಮಗಲ್ ಆಗುವುದನ್ನು ಕೂಡಲೇ ತಪ್ಪಿಸಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷರೇ ಅರಣ್ಯ ಖಾತೆಗೆ ಸಂಬಂಧಪಟ್ಟ ಈ ಬೇಡಿಕೆಯನ್ನು ನಾನು ತೀವ್ರವಾಗಿ ವಿರೋಧಿಸುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಹಾಭಾರತದಲ್ಲಿ ಒಟ್ಟು 18 ಪರ್ವಗಳಿವೆ. ಈಗ 19ನೇ ಪರ್ವ ನಮ್ಮ ಅರಣ್ಯ ಮಂತ್ರಿಗಳಾಗಿರುವ ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರಿಂದ ನಮ್ಮ ಮೈಸೂರು ರಾಜ್ಯದಲ್ಲಿ ಪ್ರಾರಂಭವಾಗುತ್ತಿದೆಯೆಂದು ಹೇಳಿದರೆ ಖಂಡಿತವಾಗಿ ತಪ್ಪಾಗುವುದಿಲ್ಲ, ಪಾಟೀಲ್ ಪರ್ವ ಎಂದು 19ನೇ ಪರ್ವವನ್ನು ಸೇರಿಸಬಹುದು. ಕಾರಣವಿಷ್ಟೇ. ಮಾನ್ಯ ಶ್ರೀ ದೇವೇಗೌಡರು ಈಗಾಗಲೇ ಈ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ನಮ್ಮಲ್ಲಿ ಒಂದು ಗಾದೆ ಹೇಳುವುದುಂಟು. ಅದು 'ಆಡು ಮುಟ್ಟದ ಸೊಪ್ಪಿಲ್ಲ' ಎಂದು ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರು ಕೈ ಹಾಕದೇ ಇರತಕ್ಕ ಇಲಾಖೆ ಇಲ್ಲ. ಅರಣ್ಯ ಇಲಾಖೆಯು ಎಲ್ಲಾ ಹಂತಗಳಲ್ಲಿಯೂ ಕೈ ಹಾಕುತ್ತಾರೆ. ಆ ರೀತಿಯಾಗಿ ಕೈ ಹಾಕಿ ಏನಾದರೂ ಶುದ್ಧೀಕರಣ ಮಾಡಿದ್ದರೆ ಹೆಚ್ಚು ಸಂತೋಷವಾಗುತ್ತಿತ್ತು. ತಾವು ಬಂದಮೇಲೆ ಹಿಂದೆ ಇದ್ದಂಥ ನಾಲ್ಕು ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್ ಹುದ್ದೆಗಳನ್ನು ಏರಿಸಿದ್ದೀರಿ. ಅರಣ್ಯ ಇಲಾಖೆಯಲ್ಲಿ ಒಂದು ಡೆವಲಪ್‌ಮೆಂಟ್ ವಿಭಾಗ ಎಂಬುದಾಗಿ ತೆರೆದು ಅದಕ್ಕೆ ಒಬ್ಬ ಚೀಫ್ ಕನ್‌ಸರ್‌ವೇಟರ್ ಎಂಬುದಾಗಿ ಮಾಡಿದ್ದೀರಿ. ಬಹುಶಃ ಅವರ ಮೇಲೆ ಇರತಕ್ಕ ಅನೇಕ ಚಾರ್ಜಸ್ ಅಥವಾ ಅಪಾದನೆಗಳನ್ನು ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರು ಬಂದ ಮೇಲೆ ಅವೆಲ್ಲವನ್ನೂ ಮುಕ್ತಾಯಗೊಳಿಸಿದ್ದಾರೆ. ಏಕೆಂದರೆ ಹಿಂದಿನ ಸರ್ಕಾರ ಅವರ ಮೇಲೆ ಪ್ರಬಲವಾದ ಆರೋಪಣೆಗಳನ್ನು ಮಾಡಿ ಅವರನ್ನು ಕೆಲಸದಿಂದ ಏಕೆ ತೆಗೆದುಹಾಕಬಾರದೆಂದು

ಷೋಕಾಜ್ ನೋಟೀಸನ್ನು ಕೊಟ್ಟಿದ್ದರು. ಅಂಥಾದ್ದನ್ನು ನೀವು ಬಂದಮೇಲೆ ಮುಕ್ತಾಯ ಮಾಡಿದ್ದೀರಿ. ಐ.ಎ.ಎಸ್. ಲಿಸ್ಟ್‌ಗೆ ಅಧಿಕಾರಿಗಳನ್ನು ಸೇರಿಸುವಾಗ, ಇವರನ್ನು ಟ್ರೈನಿಂಗ್‌ನಲ್ಲಿಯೇ ಹಿಂದೆ ಕೈಬಿಟ್ಟಿದ್ದರು. ಆಗ ಐ.ಎ.ಎಸ್. ಲಿಸ್ಟ್‌ಗೆ ಇವರು ಸೆಲೆಕ್ಟ್ ಆಗಿರಲಿಲ್ಲ. ಇವರು ಬಂದು ಅದನ್ನೂ ಕೂಡ ತಡೆಹಿಡಿದಿದ್ದಾರೆ. ಅವರೇ ಚೀಫ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್ ಆಗಬೇಕೆಂದು ಅವರಿಗೇ ಪ್ರತ್ಯೇಕವಾದಂಥ ಇಲಾಖೆಯನ್ನು ಸೃಷ್ಟಿಮಾಡಿ ಅವರನ್ನು ಮೆರೆಸುತ್ತಿದ್ದೀರಿ. ಜೊತೆಗೆ ಕಳೆದ ವರ್ಷ ಒಂದು ಪ್ರಬಲವಾದ ಸುದ್ದಿ ಹರಡಿತ್ತು. ಶಿವಮೊಗ್ಗದ ಷಿಕಾರಿಪುರ ತಾಲ್ಲೂಕಿನಲ್ಲಿ ಶ್ರೀಗಂಧದ ಮರಗಳು ಕಳ್ಳಸಾಗಾಣಿಕೆ ನಡೆಯುತ್ತಿದೆಯೆಂದು. ಅದನ್ನು ಪತ್ತೆ ಹಚ್ಚಬೇಕೆಂದು ಸ್ಪೆಷಲ್ಲಾಗಿ ಅವರನ್ನು ಕರೆಸಿದ್ದರು. ಅವರು ಒಂದು ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಮರದಲ್ಲಿ ಕೇವಲ 4 ಲಕ್ಷ ಬೆಲೆ ಬಾಳುವ ಮರವಾತ್ರ ಪತ್ತೆಯಾಗಿದೆಯೆಂಬುದಾಗಿ ಲೆಕ್ಕ ಕೊಟ್ಟರು. ಆಗ ನಿಮ್ಮ ಮಂತ್ರಿಗಳ ಎದೆ ಉಬ್ಬಿ ಅವರನ್ನು ಚೀಫ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್ ಎಂದು ನೇಮಿಸಿ ಅವರಿಗೇ ಪ್ರತ್ಯೇಕವಾದಂಥ ಒಂದು ಇಲಾಖೆಯನ್ನು ಕೊಟ್ಟಿದ್ದಾರೆ. ಇಂತಹವರಿಗೆ ಮೇಲ್ಮಟ್ಟದ ಹುದ್ದೆಯನ್ನು ಕೊಟ್ಟರೆ ನಿಜವಾಗಿ ಈ ರಾಜ್ಯದಲ್ಲಿ ಅರಣ್ಯ ಇಲಾಖೆ ರಕ್ಷಣೆಯಾಗುತ್ತದೆಯೇ ಎಂದು ತಮಗೆ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಕೊನೆಯದಾಗಿ ಹೊಸನಗರ ತಾಲ್ಲೂಕಿನಲ್ಲಿ ಮಾನ್ಯ ಮಂತ್ರಿಗಳು ಒಂದು ದೊಡ್ಡ ಪ್ರಕರಣವನ್ನೇ ಉಂಟು ಮಾಡಿ ಅಲ್ಲಿ 4 ಲಕ್ಷ ರೂಪಾಯಿ ಬೆಲೆಬಾಳತಕ್ಕ ನಾಟ ಹಿಡಿದಿದ್ದಾರೆಂದು ಇದೇ ಸಭೆಯಲ್ಲಿ ಹೇಳಿದರು. ಇಲ್ಲಿ ಇವರು ಅಷ್ಟೊಂದು ದೊಡ್ಡ ಒಂದು ಡಂಗೂರವನ್ನು ಏಕೆ ಹಾಕಿದರೋ ಅದರ ಒಳ ರಹಸ್ಯ ತಿಳಿಯವಲ್ಲದಾಗಿದೆ. ಅವರು ಹೇಳಿದ 4 ಲಕ್ಷ ಬೆಲೆಯಾಗತಕ್ಕ ಮರಗಳನ್ನು ಸರ್ಕಾರದವರೇ ಹರಾಜ್ ಮಾಡಿದಾಗ ಅದರಿಂದ ಬಂದ ಹಣ ಎಷ್ಟೆಂದರೆ ಕೇವಲ 40-50 ಸಾವಿರ ಮಾತ್ರ. ಹೀಗಿರುವಾಗ ಇವರು ಯಾರನ್ನು ಮೆಚ್ಚಿಸುವುದಕ್ಕೆ ಇಂಥ ಒಂದು ದೊಡ್ಡ ಡಂಗೂರ ಹೊಡೆದರೆಂದು ಕೇಳುವುದಕ್ಕೆ ಇಚ್ಛಿಸುತ್ತೇನೆ. ಆದರೆ ಇದೇ ಸಂದರ್ಭದಲ್ಲಿ ಅನೇಕ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಿದರು. ಮಾಡಲಿ. ತಪ್ಪಿದ್ದವರಿಗೆ ಶಿಕ್ಷೆಯಾಗಬೇಕು ಅನ್ನತಕ್ಕವರಲ್ಲಿ ನಾನೂ ಒಬ್ಬ. ಆದರೆ ಆ ಸಂಬಂಧವಲ್ಲಿ ಹಾಕಿದ ಕೇಸುಗಳನ್ನು ಇನ್ನೂ ತೀರ್ಮಾನ ಮಾಡಲಿಕ್ಕೆ ಏಕೆ ಇಷ್ಟು ನಿಧಾನ ? ಅದಕ್ಕೆ ಕಾರಣ ಆ ಕೇಸಿನಲ್ಲಿ ಆ ಗಾರ್ಡುಗಳಿಂದ ಅಂದರೆ ಶ್ರೀ ಕೋಣಂದೂರು ಲಿಂಗಪ್ಪನವರ ಭಾಷೆಯಲ್ಲಿ ಆ ಗರುಡಗಳಿಂದ ಹಿಡಿದು ಈ ವಿಧಾನ ಸೌಧದವರೆಗೂ ಚೆನ್ನಾಗಿ ಮೇದಿದ್ದಾರೆ. ಹೀಗಾಗಿ ಆ ಕೇಸುಗಳು ಇನ್ನೂ ತೂಗಾಡುವುದರಲ್ಲಿವೆ. ಅನೇಕರು ಈ ಅರಣ್ಯ ಇಲಾಖೆಯಲ್ಲಿ ಕಳೆದ 25 ವರ್ಷಗಳಿಂದಲೂ ಚೆನ್ನಾಗಿ ಮೇದುಕೊಂಡು ಒಳ್ಳೆ ಬಲಿಷ್ಠರಾಗಿದ್ದಾರೆ ಆದರೆ ಇಂಥ ಇಲಾಖೆಯಲ್ಲಿ ಒಬ್ಬ ನಿಷ್ಪಕ್ಷಪಾತವಾದ ಅಧಿಕಾರಿ ಇಲ್ಲದಿದ್ದರೆ ಈ ಇಲಾಖೆಯಿಂದ ಲಾಭವನ್ನು ಕಾಣುವುದಕ್ಕೆ ಎಂದಿಗೂ ಸಾಧ್ಯವಿಲ್ಲ. ಹಾಗಿದ್ದರೂ ಈ ದಿವಸ ಈ ಇಲಾಖೆಯಲ್ಲಿ ಯಾರ ಮೇಲೆ ಪ್ರಬಲವಾದ ಆರೋಪಣೆ ಅಪವಾದನೆಗಳಿವೆಯೋ ಅಂಥವರನ್ನೆ ಆ ಇಲಾಖೆಯ ಮುಖ್ಯಾಧಿಕಾರಿಯನ್ನಾಗಿ ಮಾಡಿದರೆ ಇನ್ನು ಇಲಾಖೆಯಿಂದ ಸರ್ಕಾರಕ್ಕೆ ಎಷ್ಟರ ಮಟ್ಟಿನ ಪ್ರಯೋಜನ ಸಿಕ್ಕಬಹುದೆಂಬುದನ್ನು ತಾವುಗಳೇ ಊಹಿಸಬಹುದು. ಸರ್ಕಾರಕ್ಕೆ ಆದಾಯ ಬರದಿರುವುದು ಹಾಗಿರಲಿ ಇಂಥ ಅಪ್ರಮಾಣಿಕ ಅಧಿಕಾರಿ ಉಚ್ಚಸ್ಥಾನದಲ್ಲಿದ್ದರೆ ಆ ಇಲಾಖೆಯ ಆಡಳಿತವೇ ಕುಸಿದು ಬೀಳುವುದು. ಯಾವ ಹೆಗ್ಗಣಗಳನ್ನು ಈ ದಿವಸ ಒಳ್ಳೆಯ ಜವಾಬ್ದಾರಿ ಸ್ಥಾನದಲ್ಲಿ ಇಟ್ಟಿದ್ದಾರೆ ಅವರೇ ಈ ದಿವಸ ಅರಣ್ಯಗಳಲ್ಲಿ ಕೋಟ್ಯಾಂತರ ರೂಪಾಯಿಗಳ ನಾಟಾ ಕಳವಿನಲ್ಲಿ ಸಾಗುತ್ತಿರುವುದಕ್ಕೆ ಕಾರಣವಾಗಿದೆ ಎಂದು ಹೇಳುತ್ತೇನೆ.

ಇನ್ನು ಈ ಇಲಾಖೆಯಲ್ಲಿ ಕಳೆದ 20 ವರ್ಷಗಳಿಂದಲೂ ಕಾಡನ್ನು ಬೆಳೆಸುವುದಕ್ಕೆ ಒಂದು ವರ್ಕಿಂಗ್ ಪ್ಲಾನ್ ಇದೆಯಂತೆ. ಆ ಯೋಜನೆಯಲ್ಲಿ ಕಾಡು ಇಲ್ಲದ ಕಡೆ ಕಾಡನ್ನು ಬೆಳೆಸುವುದು ಒಂದು, ಮತ್ತು ಎಲ್ಲಿ ಕಾಡು ದಟ್ಟವಾಗಿ ಬೆಳೆದಿದೆಯೋ ಅದನ್ನು ಕಡಿದು ಮತ್ತೆ ಅಲ್ಲಿ ಹೊಸದಾಗಿ ಕಾಡನ್ನು ಬೆಳೆಯುವುದು. ಈ ಎರಡು ಯೋಜನೆಗಳಿವೆಯಂತೆ. ಇವರು 1956ನೇ ಇಸವಿಯಿಂದ ಸುಮಾರು 6 ಲಕ್ಷ ಎಕರೆಗಳಲ್ಲಿ ಮರಗಳನ್ನು ಬೆಳೆಸಿರುವುದಾಗಿ ಒಂದು ಲೆಕ್ಕವನ್ನು ಕೊಟ್ಟಿದ್ದಾರೆ ಇದು ಸುಳ್ಳು ಲೆಕ್ಕ. ಅಲ್ಲದೆ ಹಿಂದೆ ಇದ್ದ ಕಾಡನ್ನು ಅಂದರೆ 80538 ಎಕರೆಗಳಲ್ಲಿ ಹಿಂದೆ ಇದ್ದ ಕಾಡನ್ನು ಕಡಿದು ಅಲ್ಲಿ ಹೊಸದಾಗಿ ಮರಗಳನ್ನು ಬೆಳೆಸಿದ್ದೇವೆಂದು ಹೇಳುತ್ತಿದ್ದಾರೆ. ಹೀಗೆ ಹೊಸದಾಗಿ ಮರಗಳನ್ನು ಬೆಳೆಸುತ್ತೇವೆಂದು ಇವರು ಕೇವಲ ರಿಜರ್ವ್ ಫಾರೆಸ್ಟಿನಲ್ಲಿರತಕ್ಕ ಮರಗಳನ್ನು ಷೆಟ್ಟ ಅಲ್ಲದೆ, ಡಿಸ್ಟ್ರಿಕ್ಟ್ ಜಂಗಲ್, ರೆವಿನ್ಯೂ ಫಾರೆಸ್ಟ್ ಇಂಥ ಕಡೆಗಳಲ್ಲಿದ್ದ ಮರಗಳನ್ನೆಲ್ಲಾ ನಾಶಮಾಡಿದ್ದಾರೆ. ಮಲೆನಾಡಿನಲ್ಲಿದ್ದ ಕಾಡನ್ನು ನಾಶಮಾಡುವುದಕ್ಕೆ ಈ ಇಲಾಖೆಯವರು ಹೊಸದಾಗಿ ಕಾಡನ್ನು ಬೆಳೆಸುವ ನೆಪವನ್ನು ಎತ್ತಿ ಅಲ್ಲಿದ್ದ ಕಾಡನ್ನು ಇವರು

(ಶ್ರೀ ಕಾಗೋಡು ತಿಮ್ಮಪ್ಪ)

ನಾಶಮಾಡಿದ್ದಾರೆ. ಈ ವಿಷಯದಲ್ಲಿ ಒಂದು ನ್ಯಾಯಾಂಗ ತನಿಖೆ ನಡೆಸಬೇಕೆಂದು ಒತ್ತಾಯ ಮಾಡುತ್ತೇನೆ. ಇವರು ಕಳೆದ 20 ವರ್ಷಗಳಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಮರಗಳನ್ನು ಬೆಳೆಸಿದ್ದಾರೆ ಎಂಬುವರ ಲೆಕ್ಕವನ್ನು ಕೊಡಲಿ. ನನಗೆ ಗೊತ್ತಿರುವ ಹಾಗೆ ಇವರು ಕೊಟ್ಟಿರತಕ್ಕ ಲೆಕ್ಕದ ಪ್ರಕಾರ ಶೇಕಡಾ 50ರಷ್ಟು ಪ್ರದೇಶದಲ್ಲಿ ಕೂಡ ಮರಗಳನ್ನು ಬೆಳೆಸಿಲ್ಲ. ಇರತಕ್ಕ ನಿಜದ ಪರಿಸ್ಥಿತಿ ಇದು ಈ ದಿವಸ ಇವರು ಮಲೆನಾಡಿನಲ್ಲಿ ಅನೇಕ ಕಡೆ ಇದ್ದ ದಟ್ಟವಾದ ಅರಣ್ಯ ಕಡಿದು ಹಾಳುಮಾಡಿರತಕ್ಕ ಪಾಪಕ್ಕೆ ಗುರಿಯಾಗಿದ್ದಾರೆ. ಮಲೆನಾಡಿನಲ್ಲಿ ಇದ್ದ ಉತ್ತಮವಾದ ಮರಗಳನ್ನು ನಾಶಮಾಡಿ ಅಲ್ಲಿ ನೀಲಗಿರಿ ಮರಗಳನ್ನು ಬೆಳೆಸುವುದಕ್ಕೆ ಪ್ರಾರಂಭಮಾಡಿದ್ದೇವೆ ಎಂದು ಹೇಳಿದ್ದಾರೆ. ನೀಲಗಿರಿ ಮರಗಳನ್ನೂ ಬೆಳೆಸಬೇಕೆಂದರೆ ಅವಕ್ಕೆ ಬೇರೆಕಡೆಗಳಲ್ಲಿ ಅವಕಾಶವಿದೆ ವರ್ಷಕ್ಕೆ ಎಲ್ಲಿ 50 ಇಂಚ್ ಮಳೆಯಾಗುತ್ತದೋ ಅಲ್ಲೆಲ್ಲಾ ನೀಲಗಿರಿ ಮರಗಳನ್ನು ಬೆಳೆಸುವುದಕ್ಕೆ ಅವಕಾಶವಿದೆ, ಸಾಧ್ಯವಿದೆ ಎಂದು ತಜ್ಞರು ಹೇಳುತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ—ಅದಕ್ಕೆ 50 ಇಂಚ್ ಮಳೆ ಬೇಕಾಗಿಲ್ಲ; 30 ಇಂಚ್ ಮಳೆಯಾದರೆ ಸಾಕು.

ಶ್ರೀ ಕಾಗೋಡು ತಿಮ್ಮಪ್ಪ.—ಮಲೆನಾಡಿನಲ್ಲಿ ವರ್ಷಕ್ಕೆ 80 ಇಂಚ್‌ನಿಂದ 300 ಇಂಚಿನವರೆಗೂ ಮಳೆ ಬೀಳುತ್ತದೆ. ಆದುದರಿಂದ ನೀಲಗಿರಿ ಮರಗಳನ್ನು ಬೇರೆಕಡೆ ಬೆಳೆಸಲು ಸಾಕಷ್ಟು ಅವಕಾಶವಿದೆ. ವಾಸ್ತವಾಂಶಗಳು ಹೀಗಿರುವಾಗ ಇವರು ಉದ್ದೇಶ ಪೂರ್ವಕವಾಗಿ ಮಲೆನಾಡಿನಲ್ಲಿರತಕ್ಕ ಕಾಡನ್ನು ನಾಶಮಾಡುವುದಕ್ಕಾಗಿಯೇ ಅಲ್ಲಿ ಹೊಸಕಾಡಿನ ನೆಪವನ್ನೆತ್ತಿ ಅಲ್ಲಿ ಕಾಡನ್ನು ನಾಶಮಾಡಿದ್ದಾರೆ. ದಕ್ಷಿಣ ಕನ್ನಡ, ಉತ್ತರಕನ್ನಡ, ಚಿಕ್ಕಮಗಳೂರು ಶಿವಮೊಗ್ಗ ಮತ್ತು ಕಾರ್‍ವಾರ ಜಿಲ್ಲೆಗಳಲ್ಲಿ ಮನುಷ್ಯ ಕಾಲಿಡುವುದಕ್ಕೆ ಅವಕಾಶವಿಲ್ಲದಂಥ ಘೋರಾರಣ್ಯಗಳಿದ್ದವು. ಇವರು ಹೊಸಮರಗಳನ್ನು ಬೆಳೆಸಬೇಕಾಗಿದ್ದರೆ ಮರ ಇಲ್ಲದೇ ಇರುವ ದೂರ ಸ್ಥಳಗಳಿಗೆ ಪ್ರವೇಶ ಮಾಡಿ ಅಲ್ಲಿ ಹೊಸಮರಗಳನ್ನು ಬೆಳೆಸಬಹುದಿತ್ತು ಆದರೆ ಇವರಿಗೆ ಕಾರುಗಳು ಜೀಪುಗಳು ಹೋಗತಕ್ಕಂಥ ಜಾಗಗಳೇ ಬೇಕು. ಅದಕ್ಕಾಗಿ ಇವರು ಕೇವಲ ರಸ್ತೆಯ ಎರಡು ಪಕ್ಕಗಳಲ್ಲಿ ಮಾತ್ರ ಈ ಹೊಸಕಾಡನ್ನು ಬೆಳೆಸುವುದಕ್ಕೆ ಒಂದು ನಾಟಕವನ್ನು ಹೂಡಿದ್ದಾರೆ. ಎಲ್ಲಿ ಹೇರಳವಾಗಿ ನೀರು, ಗುಡ್ಡ, ಕಣಿವೆ ಮತ್ತು ಮಳೆ ಬೀಳತಕ್ಕ ಪ್ರದೇಶಗಳಿದ್ದವೋ ಅಂಥ ಸ್ಥಳಗಳಲ್ಲಿ ಇವರು ಯಾವ ಮರಗಳನ್ನೂ ಬೆಳೆಸುವುದಕ್ಕೆ ಪ್ರಯತ್ನ ಮಾಡಿಲ್ಲ. ಅಂಥ ಅನುಕೂಲವಾದ ಜಾಗಗಳನ್ನು ಬಿಟ್ಟು ಕೇವಲ ರಸ್ತೆ ಪಕ್ಕಗಳಲ್ಲೇ ಇವರು ಕಾಡನ್ನು ಬೆಳೆಸುವುದಕ್ಕೇನು ಕಾರಣ? ನಮ್ಮಲ್ಲಿ ಒಂದು ಗಾದೆ ಇದೆ—'ಮಾರಿ ಕಣ್ಣು ಹೋತನ ಮೇಲೆ' ಎಂದು ಎಲ್ಲಿ ಒಳ್ಳೆಯ ಕಾಡು ಇದೆಯೋ ಅಲ್ಲಿ ಅದನ್ನು ಕಡಿದು ಇದ್ದಿಲನ್ನು ಸುಡುವುದು, ಅಲ್ಲಿ ಹೊಸದಾಗಿ ನೀಲಗಿರಿ ಮರಗಳನ್ನು ನೆಡುವುದು ಇವರ ಚಾಳಿ. ಈ ದಿವಸ ನಮ್ಮ ಸೊರಬ ಸಾಗರ, ಹೊಸನಗರ ಮತ್ತು ಶಿಕಾರಿಪುರ ತಾಲ್ಲೂಕುಗಳಲ್ಲಿ ಇದ್ದಂಥ ಸಾವಿರಾರು ವರ್ಷಗಳಿಂದ ಇದ್ದ ಮರಗಳನ್ನು ಇವರು ಕಡಿದು ನಾಶಮಾಡಿದ್ದಾರೆ. ಅಂಥ ಒಂದು ಕಾಡನ್ನು ಮತ್ತೆ ಈ ಇಲಾಖೆಯವರಿಗಾಗಲಿ ಅಥವಾ ಈ ಮಂತ್ರಿಗಳಿಂದಲಾಗಲಿ ಇನ್ನು ನೂರು ವರ್ಷವಾದರೂ ಬೆಳೆಸುವುದಕ್ಕಾಗುವುದಿಲ್ಲ. ಇನ್ನಾದರೂ ಸರ್ಕಾರದವರು ಮಲೆನಾಡಿನಲ್ಲಿ ಕಾಡನ್ನು ಕಡಿಯುವುದನ್ನು ಬಿಡಬೇಕೆಂದು ಒತ್ತಾಯ ಮಾಡಿ ಹೇಳುತ್ತೇನೆ. ರಾಜ್ಯದಲ್ಲಿ ಸುಭಿಕ್ಷವಾಗಿ ಮಳೆಬೆಳೆಗಳು ಆಗಬೇಕಾಗಿದ್ದರೆ ಅಲ್ಲಿ ಶೇ 34 ರಷ್ಟು ಅರಣ್ಯ ಪ್ರದೇಶವಿರಬೇಕೆಂದು ತಜ್ಞರು ಹೇಳುತ್ತಾರೆ. ಆದರೆ ನಮ್ಮಲ್ಲಿ ಇರುವುದು ಈ ದಿವಸ ಶೇಕಡ 18ರಷ್ಟು ಮಾತ್ರ. ಭದ್ರಾವತಿ ಕಬ್ಬಿಣದ ಕಾರ್ಖಾನೆಗೆ ಇದ್ದಿಲನ್ನು ಒದಗಿಸುವುದಕ್ಕಾಗಿ ಬೇರೆ ಕಾಡನ್ನು ನಾಶಮಾಡುತ್ತಿದ್ದಾರೆ. ಇದನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ. ಹಿಂದೆ ವಿಶ್ವೇಶ್ವರಯ್ಯನವರು ಹೇಳಿರುವ ಉದಾಹರಣೆ ಇದೆ. ಈ ದಿವಸ ಕಬ್ಬಿಣದ ಕಾರ್ಖಾನೆ ನಡೆಸುವುದಕ್ಕೆ ಇದ್ದಿಲನ್ನು ಒದಗಿಸಬಾರದು. ತಾತ್ಕಾಲಿಕವಾಗಿ ಅದನ್ನು ಒದಗಿಸಬಹುದು. ಇದಕ್ಕೆ ಬದಲಾಗಿ ಬೇರೆ ವ್ಯವಸ್ಥೆ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಅರಣ್ಯ ಪ್ರದೇಶ ಹಾಳಾಗುವುದು. ಈಗ ಹಾಳಾಗುತ್ತಿರುವುದನ್ನು ನೋಡಬಹುದು. ಇಂದು ಸುಮಾರು 10 ಲಕ್ಷ ಮೂಟೆ ಇದ್ದಲನ್ನು ಪ್ರತಿ ವರ್ಷ ಕಬ್ಬಿಣದ ಕಾರ್ಖಾನೆಗೆ ಸರಬರಾಜು ಮಾಡುತ್ತಿದ್ದಾರೆ. ಇದರಿಂದ 185 ಚದರ ಮೈಲಿ ಪ್ರದೇಶ ಹಾಳಾಗುವುದು.

ಇನ್ನೊಂದು ಬಹಳ ಮಹತ್ತರವಾದ ವಿಚಾರ ನಿಮ್ಮ ಇಲಾಖೆಯವರು ಖಾಸಗಿ ಕಂಪೆನಿಗಳಿಗೆ ಮೆದುಮರಗಳನ್ನು ಕೊಡಲು ದೊಡ್ಡ ದೊಡ್ಡ ಒಪ್ಪಂದ ಮಾಡಿಕೊಂಡಿದ್ದಾರೆ. ಹೆಚ್ಚಿಗೆ ಹೇಳುವು

ದಾದರೆ ಹಿಂದಿನ ಸರಕಾರ ಮತ್ತು ಈ ಸರಕಾರ ತನ್ನ ಸಂಪತ್ತನ್ನು ಖಾಸಗೀ ಕಂಪನಿಗಳಿಗೆ ಸಂಪೂರ್ಣವಾಗಿ ಮಾರಿಕೊಂಡಿದೆ. ಇಂಡಿಯನ್ ಪ್ಲೈವುಡ್ ಕಂಪೆನಿ, ವಿಮುಕೋ, ಮೈಸೂರು ಕಮರ್ಷಿಯಲ್ ಯೂನಿಯನ್ ಇಂಥ ಪ್ರಮುಖವಾದ ಕಂಪೆನಿಗಳಿಗೆ ಹೇರಳವಾಗಿ ಮರ ಕೊಡುತ್ತಿದ್ದಾರೆ. 1971–1972ರಲ್ಲಿ 1,08,780 ಘನಮೀಟರ್ ಮರ ಕೊಟ್ಟಿದ್ದಾರೆ, 1972-73 ರಲ್ಲೂ ಅಷ್ಟೇ ಮರ ಕೊಟ್ಟಿದ್ದಾರೆದದು ತಿಳಿಯಬಹುದು. ಇಂಡಿಯನ್ ಪ್ಲೈವುಡ್ ಕಂಪೆನಿಗೆ 47518 ಘನ ಮೀಟರ್, ಮೈಸೂರ್ ಕಮರ್ಷಿಯಲ್ ಯೂನಿಯನ್‌ಗೆ 18415 ಘನಮೀಟರು, ವೆಸ್ಟರನ್ ಇಂಡಿಯ ಮ್ಯಾಚ್ ಕಂಪೆನಿಗೆ 20525 ಘನಮೀಟರ್ ಹೀಗೆ ದೊಡ್ಡ ಪ್ರಮಾಣದಲ್ಲಿ ಕೊಟ್ಟಿದ್ದಾರೆ. ಇದರ ಜೊತೆಗೆ ಒಟ್ಟು 15 ಕಂಪೆನಿಗಳಿಗೆ ಮೆದು ಮರ ಕೊಡುವ ಕರಾರು ಮಾಡಿಕೊಂಡಿದ್ದಾರೆ. ಒಂದೊಂದು ಕಂಪೆನಿಗೆ ಒಂದೊಂದು ದರವಿದೆ. ವಿಮುಕೋ ಕಂಪೆನಿಗೆ ಸಂಬಂಧಪಟ್ಟ ಯಾವ ಒಂದು ಕಾರ್ಖಾನೆಯೂ ಈ ರಾಜ್ಯದಲ್ಲಿ ಇಲ್ಲ. ಸಾಗರದಲ್ಲಿ ಸಂಗಮೇಶ್ವರ ವುಡ್ ಇಂಡಸ್ಟ್ರೀಸ್ ಒಂದಿದೆ. ಅದಕ್ಕೆ ಮೆದುಮರ ಕೊಡುತ್ತಿದ್ದಾರೆ. ಸುಮಾರು 10 ವರ್ಷದಿಂದ ಕೊಡುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟ ಕಾರ್ಖಾನೆಯೆಲ್ಲಿದೆ? ಯಾರು ಏನು ಮಾಡುತ್ತಿದ್ದಾರೆ ಎಂಬುದು ಗೊತ್ತಿಲ್ಲ. ಆದುದರಿಂದ ವಿಮುಕೋ ಕಂಪೆನಿಗೆ ಕೊಡುವ ಮರ ನಿಲ್ಲಿಸಿದರೆ ಇನ್ನು 4 ಕಾರ್ಖಾನೆಗಳನ್ನು ಸ್ಥಾಪಿಸಿ 10 ಸಾವಿರ ಜನರಿಗೆ ಉದ್ಯೋಗ ಕಲ್ಪಿಸಲು ಅವಕಾಶ ಇದೆ. ಅವರಿಗೆ ಆಗುಂಬೆ, ತೀರ್ಥಹಳ್ಳಿ, ಹೊಸನಗರ, ಹುಲಿಕಲ್ ಘಾಟಿ ಹತ್ತಿರ ಎವರ್‌ಗ್ರೀನ್ ಫಾರೆಸ್ಟ್ ಇರುವ ಕಡೆ ಕೊಡುತ್ತಿದ್ದಾರೆ. ಅವರು ಒಂದು ಮರ ಕಡಿಯುವಾಗ ಒಂದು ಎಕರೆ ಪ್ರದೇಶದ ಅರಣ್ಯ ನಷ್ಟ ಮಾಡುತ್ತಿದ್ದಾರೆ. ಉತ್ತಮ ಮೆಕ್ಯಾನಿಸಂ ಉಪಯೋಗಮಾಡಿ ಮರ ಕಡಿಯುವಾಗ ಕಾಡು ನಷ್ಟವಾಗದಂತೆ ನೋಡಿಕೊಳ್ಳಬೇಕು. ಅದನ್ನು ಬಿಟ್ಟು ಸಿಕ್ಕಾಪಟ್ಟೆ ಕಡಿದು ಕಾಡಿಗೆ ನಷ್ಟ ಮಾಡುತ್ತಿದ್ದಾರೆ. ವರ್ಷವೊಂದಕ್ಕೆ ಸುಮಾರು ಒಂದೂವರೆ ಲಕ್ಷ ಘನಮೀಟರ್ ಮರ ಕಡಿಯುತ್ತಿದ್ದಾರೆ. ಇದು ಸರಕಾರಿ ಲೆಕ್ಕದ ಪ್ರಕಾರ ಇರುವುದು. ಇದು ಸರಕಾರಕ್ಕೆ ಕೊಡುವ ಲೆಕ್ಕದ ಪ್ರಕಾರ ಇರುವುದು. 3-4 ಕಂಪೆನಿಗಳಿವೆ, ವಿಮುಕೊ, ಪ್ಲೈವುಡ್ ಕಂಪೆನಿ, ಮ್ಯಾಚ್ ಕಂಪೆನಿ. ವೆಸ್ಟರನ್ ಇಂಡಿಯನ್ ಕಮರ್ಷಿಯಲ್ ಯೂನಿಯನ್, ಇವರುಗಳನ್ನು ಕಂಡರೆ ಯಾವ ಇಲಾಖೆಯವರೇ ಆಗಲಿ, ಚೀಫ್ ಕನ್‌ಸರ್ವೇಟರು ಸಹ ಎದ್ದು ನಿಲ್ಲಬೇಕು, ಮೇಜವಾನಿ ಇದೆ,ಡಿ.ಎಫ್.ಒ, ರೇಂಜ್ ಆಫೀಸರು, ಗಾರ್ಡು ಮುಂತಾದವರು ಯಾರೂ ಅವರನ್ನು ಮಾತನಾಡಿಸುವುದಿಲ್ಲ. ವಿಧಾನಸೌಧದಲ್ಲಿ ಕಲವು ಸೆಕ್ರೆಟರಿಗಳು ಕೂಡ ಅವರಿಗೆ ಬೇಕಾದ ಕೆಲಸ ಮಾಡಿಕೊಡುತ್ತಾರೆ. ಪ್ರತಿ ತಿಂಗಳೂ ಸಹ ಅವರು ಕೆಲವರಿಗೆ ಹಣದ ವಿತರಣೆ ಮಾಡುವ ವ್ಯವಹಾರವಿದೆ. ಆದುದರಿಂದ ಈ ಕಂಪೆನಿಗಳವರಿಗೆ ಮಾನ್ಯತೆ ಕೊಡುವರು. ಅವರು ತಮಗೆ ಅವಕಾಶವಿರುವುದರ, ಎರಡರಷ್ಟು ಮರ ಕಟ್ ಮಾಡುವರು. ಅವರನ್ನು ಮಾತನಾಡಿಸುವವರೇ ಇಲ್ಲ. ಅವರು ಎಷ್ಟು ಕಡಿದರು ಎಂದು ಚೆಕ್ ಮಾಡುವವರೇ ಇಲ್ಲ, ದೊಡ್ಡ ಕಂಪೆನಿಗಳವರನ್ನು ಹೇಳುವವರು ಕೇಳುವವರೇ ಇಲ್ಲ. ಇದರಿಂದ ಕಾಡು ಬಹಳವಾಗಿ ನಾಶವಾಗುತ್ತಿದೆ. ಅವರ ಮೇಲೆ ಪ್ರಬಲವಾದ ಹತೋಟಿಯಿಲ್ಲದಿದ್ದರೆ ಅರಣ್ಯ ಉಳಿಯುವುದಿಲ್ಲ. ಈ ಮೂರು ಕಂಪೆನಿಗಳಿಗೆ ಮರ ಒದಗಿಸುವುದರದಿಂದ ಸರಕಾರಕ್ಕೆ ಪ್ರತಿವರ್ಷ 25 ಲಕ್ಷ ರೂಪಾಯಿ ನಷ್ಟವಾಗುತ್ತಿದೆ. ಇಷ್ಟು ಮೆದುಮರ ಸಣ್ಣ ಉದ್ಯಮಗಳಿಗೆ ಕೊಟ್ಟರೆ ಸುಮಾರು 25 ಸಾವಿರ ಜನರಿಗೆ ಉದ್ಯೋಗ ಸಿಕ್ಕಿ ಸಣ್ಣಪುಟ್ಟ ಉದ್ಯಮಗಳು ತಲೆ ಎತ್ತಲು ಅವಕಾಶವಾಗುವುದು, ಇದಕ್ಕೆ ಅವಕಾಶ ಮಾಡುತ್ತಿಲ್ಲ. ಮಲೆನಾಡು ಪ್ರದೇಶದಲ್ಲಿ ಈ ದಿವಸ ಎಷ್ಟು ದೊಡ್ಡ ಪ್ರಮಾಣದ ಕಾರ್ಖಾನೆಗಳಿವೆಯೆಂಬುದನ್ನು ನೋಡಬಹುದು. ದಾಂಡೇಲಿ, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಬಿಟ್ಟರೆ ಬೇರೆ ಕಡೆಗಳಲ್ಲಿ ಮಲೆನಾಡಿನಲ್ಲಿ ದೊಡ್ಡ ಕಾರ್ಖಾನೆಗಳಿಲ್ಲ, ವಿಮ್‌ಕೋಗೆ ಕೊಡುವ ಮರ ನಿಲ್ಲಿಸಬೇಕು. ಅವರಿಗೆ ಕೊಡುವ ಮರ ಮುಂಬಯಿಯಲ್ಲಿ ಹೇರಳವಾದ ಬೆಲೆಗೆ ಮಾರಾಟವಾಗುತ್ತಿದೆ. ಇದನ್ನು ಯಾರು ನೋಡುತ್ತಿಲ್ಲ.

ನೀಲಗಿರಿ ಮರ ಕೊಡುವ ವ್ಯವಸ್ಥೆಯಿದೆ. ಧರ್ಮವೀರರ ಕಾಲದಲ್ಲಿ ಇದರ ಬಗ್ಗೆ ಕರಾರಾಗಿದೆ. ಒಂದು ಕರಾರು ಮಾಡಿಕೊಂಡು ಕೊಡುತ್ತಿದ್ದಾರೆ. 1972ರಲ್ಲಿ ಸುಮಾರು 39692 ಟನ್ ಮರ ಕೊಡಲಾಗಿದೆ, 1973ರಲ್ಲಿ ಇದಕ್ಕಿಂತ ಜಾಸ್ತಿ ಇರಬಹುದು. ಇಷ್ಟು ಜಾಸ್ತಿ ಕೊಡುವಾಗ ದರ ನಿಗದಿಮಾಡಿರುವುದೇನಿದೆ ಅಂದರೆ ಅದರ ಪ್ರಕಾರ ಕನಿಷ್ಠ 25 ಲಕ್ಷ ರೂಪಾಯಿ ಪ್ರತಿವರ್ಷ ನಷ್ಟವಾಗುತ್ತಿದೆ. ಒಂದು ಲಕ್ಷದ 50 ಸಾವಿರ ಟನ್ ಹರಿಹರದ ಪಾಲಿಫೈಬರ್ಸ್‌ಗೆ ಕೊಡಬೇಕೆಂದು ಒಪ್ಪಂದವಾಗಿದೆ. ಇದನ್ನು ರದ್ದು ಮಾಡಬೇಕು. ತೊಂದರೆ ಇದ್ದರೆ ಕಾನೂನು ಮಾಡಿ ಸರಕಾರಕ್ಕೆ ನಷ್ಟವಾಗುವ ಒಪ್ಪಂದವಾಗಿದ್ದರೆ ಅದನ್ನು ರದ್ದುಮಾಡುವ ಅಧಿಕಾರ ಪಡೆಯಿರಿ. ಇಂಥ ಅನೇಕ ಉದಾಹರಣೆಗಳಿವೆ. ಬೆಳಗಾವಿನ ಅಲ್ಯೂಮಿನಿಯಂ ಕಾರ್ಖಾನೆ, ಹರಿಹರದ ಕಾರ್ಖಾನೆ, ವಿಮುಕೋ ಕಾರ್ಖಾನೆ ಮುಂತಾದುವುಗಳನ್ನು ನೋಡಬಹುದು. ನಷ್ಟವಾಗುವ ಒಪ್ಪಂದ

(ಶ್ರೀ ಕಾಗೋಡು ತಿಮ್ಮಪ್ಪ)

ಗಳನ್ನು ರದ್ದುಮಾಡಲು ಸರ್ವಾಧಿಕಾರವಿರಬೇಕು. ಹತೋಟಿ ಇಟ್ಟುಕೊಳ್ಳುವ ವ್ಯವಸ್ಥೆ ಇರಬೇಕು, ಇಲ್ಲದಿದ್ದರೆ ಕಾಡು ಸಂಪೂರ್ಣವಾಗಿ ಹಾಳಾಗುವುದು. ನೀಲಗಿರಿ ಮರ ಕೊಡುವ ವ್ಯವಹಾರದಲ್ಲಿ ರಾಜ್ಯ ಸರಕಾರಕ್ಕೆ ಅನ್ಯಾಯವಾಗಿದೆ. ಮತ್ತು ಸಂಪೂರ್ಣವಾಗಿ ನಷ್ಟವಾಗಿದೆ. ಮಾರುಕಟ್ಟೆಯಲ್ಲಿ ಒಂದು ಟನ್ನಿಗೆ 50 ರೂಪಾಯಿನಂತೆ ಪಡೆಯಲು ತಯಾರಿದ್ದಾರೆ. ಬೇರೆಯವರು ಕಾರ್ಖಾನೆ ಸ್ಥಾಪಿಸಲು ಸಿದ್ಧವಾಗಿದ್ದಾರೆ. ನಮ್ಮ ದೇಶದ ಕಚ್ಚಾ ಮಾಲುಗಳಿಗೆ ಉತ್ತಮವಾದ ಬೆಲೆ ಸಿಕ್ಕಬೇಕು, ಸರಕಾರಕ್ಕೆ ಲಾಭ ಬರಬೇಕು ಎಂಬುದೇ ನಮ್ಮ ಉದ್ದೇಶ.

5-30 P.M.

ಆ ದೃಷ್ಟಿಯಿಂದ ನೀಲಗಿರಿ ಮರದ ಒಪ್ಪಂದವನ್ನು ರದ್ದುಪಡಿಸಿ ಹೊಸ ಒಪ್ಪಂದವನ್ನು ಮಾಡಬೇಕು. ವೆಸ್ಟರ್ನ್ ಇಂಡಿಯಾ ಮ್ಯಾಚ್ ಕಂಪೆನಿಗೆ ಅದಕ್ಕೆ ಜಾಸ್ತಿ ಧರವನ್ನು ಮಾಡಬೇಕು. ಕನ್‌ಸೆಷನ್ ಏರಿಯಾ, ನಾನ್ ಕನ್‌ಸೆಷನ್ ಏರಿಯಾ ಎಂದು ಇದೆ. ಕನ್‌ಸೆಷನ್ ಏರಿಯಾದಲ್ಲಿ ದರವನ್ನು ಹೆಚ್ಚು ಮಾಡಿಲ್ಲ. ನಾನ್ ಕನ್‌ಸೆಷನ್ ಏರಿಯಾದಲ್ಲಿ ದರವನ್ನು ಜಾಸ್ತಿಮಾಡಿದ್ದಾರೆ. ಬಿದಿರನ್ನು ಅವರಿಗೆ ಕೊಡುವುದು ಏನು ಇದೆ ಅವರಲ್ಲಿ ಎಷ್ಟೋ ಲುಕ್ಸಾನು ಆಗುತ್ತದೆ. ಯಾವುದೇ ಪೇಪರ್ ಕಾರ್ಖಾನೆಗೆ ಕಚ್ಚಾ ಮಾಲನ್ನು ಒದಗಿಸತಕ್ಕಂಥಾದ್ದು ಏನು ಇದೆ, ಈ ಬ್ಯಾಂಬೂ, ಅದು ಒಂದು ಟನ್‌ಗೆ 250 ರೂಪಾಯಿಯಂತೆ ಪಡೆದರೂ ಕೂಡ ಲಾಭದಾಯಕನಾಗುತ್ತದೆ, ಮತ್ತು ಆ ಉದ್ಯಮವನ್ನು ನಡೆಸುವುದೂ ಸಾಧ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಈಗ ಅವರಿಗೆ ಕೊಡುವ ದರವನ್ನು ಎರಡರಿಂದ, ಮೂರರಷ್ಟು ಹೆಚ್ಚು ಮಾಡಿದರೂ ಲುಕ್ಸಾನು ಆಗುವುದಿಲ್ಲ. ಏಕೆಂದರೆ, ಆ ಕಾರ್ಖಾನೆ ಅರಣ್ಯ ಪ್ರದೇಶದ ಸಮೀಪದಲ್ಲಿರುವುದರಿಂದ ಟ್ರಾನ್ಸ್‌ಪೋರ್ಟೇಷನ್ ಕಾಸ್ಟ್ ಬೀಳುವುದಿಲ್ಲ. ನಾವು ಕೊಡತಕ್ಕ ಕಚ್ಚಾ ಪದಾರ್ಥಗಳ ಬೆಲೆಯನ್ನು ಅವರು ದ್ವಿಗುಣಗೊಳಿಸುತ್ತಾರೆ. ದರವನ್ನು ಹೆಚ್ಚು ಮಾಡುವುದರಿಂದ ಕಾರ್ಖಾನೆಯನ್ನು ಬಡೆಸುವುದಕ್ಕಾಗುವುದಿಲ್ಲ. ಎನ್ನುವ ಮಾತನ್ನು ಹೇಳುವುದಕ್ಕಾಗುವುದಿಲ್ಲ. ನಾವು ಒದಗಿಸಿರತಕ್ಕ ಕಚ್ಚಾ ಪದಾರ್ಥಗಳ ಬೆಲೆ ಏನು ಇದೆ ಅದು 150 ರೂಪಾಯಿಗಳ ಮೇಲೆ ಹೋಗುವುದಿಲ್ಲ. ಆದ್ದರಿಂದ ಒಂದು ಟನ್ ಕಚ್ಚಾ ಪದಾರ್ಥಕ್ಕೆ ನ್ಯಾಯಬದ್ಧವಾಗಿ ಬೆಲೆಯನ್ನು ಏರಿಸತಕ್ಕ ಸಂದರ್ಭ ಇದೆ. ಈ ದೃಷ್ಟಿಯಿಂದ ಇಲಾಖೆಯಲ್ಲಿರತಕ್ಕ ನಮ್ಮ ಸಂಪತನ್ನು ಹೆಚ್ಚುಮಾಡುವ ದೃಷ್ಟಿಯಿಂದ ಈ ಒಂದು ಒಪ್ಪಂದದವನ್ನು ರದ್ದುಪಡಿಸಿ ನಮ್ಮ ಕಚ್ಚಾ ಪದಾರ್ಥಗಳಿಗೆ ಹೆಚ್ಚಿನ ಬೆಲೆಯನ್ನು ಕಾರ್ಖಾನೆಗಳಿಂದ ಪಡೆಯುವುದು ಒಳ್ಳೆಯದು. ನಾವು ಖಾಸಗಿ ಕೈಗಾರಿಕೆಗಳವರಿಗೆ ಮೋಸ ಹೋಗಬಾರದು. ಅವರ ಮೋಜಿಗೆ ಅಳುಕುತಳುಕಿಗೆ ಮೋಸ ಹೋಗಬಾರದು, ಅವರನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಒಳ್ಳೆಯದು ಎಂದು ಕೇಳಿಕೊಂಡು ನನ್ನ ಎರಡು ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್ (ಹೊಸನಗರ್).—ಮಾನ್ಯ ಅಧ್ಯಕ್ಷರೇ, ವ್ಯವಸಾಯ ಮಂತ್ರಿಗಳು ತಂದಿರತಕ್ಕ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಕೆಲವಾರು ಸಲಹೆಗಳನ್ನು ಕೊಡಲಿಕ್ಕೆ ಬಯಸುತ್ತೇನೆ. 'ಕೃಷಿತೋ ನಾಸ್ತಿ ದುರ್ಭಿಕ್ಷಂ' ಎಂದು ಹಿಂದಿನ ಕಾಲದಲ್ಲಿ ಒಂದು ನಾಣ್ನುಡಿ ಇದೆ. ಕೃಷಿ ಮಾಡುವವನಿಗೆ ಯಾವತ್ತೂ ದುರ್ಭಿಕ್ಷ ಬರುವುದಿಲ್ಲ. ಇವತ್ತು ಎಲ್ಲಾ ವೃತ್ತಿಯಲ್ಲಿ ಏರುಪೇರುಗಳು ಇರುತ್ತವೆ, ಆದರೆ ವ್ಯವಸಾಯದಲ್ಲಿ ಮಾತ್ರ ಒಂದೆ ಸಮನಾಗಿ ಹೊಟ್ಟೆ ಬಟ್ಟೆಗೆ ಯಾವತ್ತೂ ತಪ್ಪುವುದಿಲ್ಲ ಎನ್ನುವ ಒಂದು ನಾಣ್ನುಡಿ ಲಾಗಾಯಿತಿನಿಂದ ಇದೆ. ಈಗ ವ್ಯವಸಾಯದಲ್ಲಿ ಏನಾಗಿದೆ ಎನ್ನುವುದರ ವಾಸ್ತವಾಂಶವನ್ನು ನೋಡುವುದಾದರೆ, ನಾನೂ ಜಮೀನು ಮಾಡುವವನೇ, ಇದು ಶೆಟ್ಟಿಯ ವ್ಯಾಪಾರ ಆದ ಹಾಗೆ ಆಗುವುದಕ್ಕೆ ಶುರು ಆಗಿದೆ. ಒಂದು ವರ್ಷ ಹೇರಳವಾಗಿ ಬೆಳೆ ಬಂತು, ಉತ್ಪನ್ನ ಸಿಕ್ಕಿತು, ಚೆನ್ನಾಗಿ ಸುಖ ಅನುಭವಿಸಿಕೊಂಡು ಇರೋಣ ಎನ್ನುವುದಾದರೆ ಇನ್ನೊಂದು ವರ್ಷ ಅದರ ಹತ್ತರಷ್ಟು ಪೆಟ್ಟು ಬೀಳತಕ್ಕದ್ದನ್ನು ನಾವು ವ್ಯವಸಾಯದಲ್ಲಿ ಕಾಣುತ್ತಾ ಇದ್ದೇವೆ. ಅದಕ್ಕೆ ಮೂಲಭೂತವಾದ ಕಾರಣ ನನಗೆ ಕಾಣುವುದು, ಕಾಲಕ್ಕೆ ಸರಿಯಾಗಿ ವ್ಯವಸಾಯಗಾರರಿಗೆ ಬೇಕಾಗಿರತಕ್ಕ ಉಪಕರಣಗಳು ಏನು ಇವೆ, ವ್ಯವಸ್ಥೆಗಳು ಏನು ಇವೆ ಅವು ದೊರೆಯದೆ ಇರುವುದು. ಸಮಯಕ್ಕೆ ಸರಿಯಾಗಿ ಯೂರಿಯಾ ಕೊಡಬೇಕು ಎನ್ನುವ ಟೈಂನಲ್ಲಿ ಯೂರಿಯಾ ಇರುವುದಿಲ್ಲ. ಎಲ್ಲಿ ಕೇಳಿದರೂ ಕೂಡ ಗೊಬ್ಬರ ಸಿಕ್ಕುವುದಿಲ್ಲ. ಕಾಲಕ್ಕೆ ಸರಿಯಾಗಿ ಬೀಜ ಹಾಕಬೇಕು ಎನ್ನುವ ಟೈಂನಲ್ಲಿ ಬೀಜ

ಸಿಕ್ಕುವುದಿಲ್ಲ. ಇಂಥ ದಾರುಣ ಕಷ್ಟ ಪರಂಪರೆಯನ್ನು ನಾವು ಪ್ರತಿವರ್ಷವೂ ಕೂಡ ಅನುಭವಿಸುವುದು ಸರ್ವರ ಅನುಭವದ ಸಾಧಾರಣವಾದ ಮಾತು. ಕುಟುಂಬಗಳಲ್ಲಿ. ಮನೆತನಗಳಲ್ಲಿ ಹಿಂದೆ ಒಂದು ನಾಣ್ನುಡಿ ಇತ್ತು. ಮಗ ಏತಕ್ಕೂ ಬರುವುದಿಲ್ಲ ಎಂದರೆ ಅವನನ್ನು ವ್ಯವಸಾಯಕ್ಕೆ ಹಾಕು ಗದ್ದೆ ನೋಡಿಕೊಳ್ಳಲಿ ಬಾಗಾಯಿತು ನೋಡಿಕೊಳ್ಳಲಿ ಎನ್ನುವ ಪದ್ಧತಿ ಒಂದು ಕಾಲದಲ್ಲಿ ಇತ್ತು. ಆದರೆ ಅದು ಈಗ ಇಲ್ಲ. ವ್ಯವಸಾಯ ಎನ್ನುವುದು ಏನು ಇದೆ. ಅದು ಕೈಗಾರಿಕೆಯಷ್ಟೆ, ಪ್ರಾಮುಖ್ಯವಾದಂಥ ವೈಜ್ಞಾನಿಕ ರೀತಿಯಲ್ಲಿ ಸರಿಯಾದ ಉತ್ಪನ್ನವನ್ನು ತೆಗೆಯತಕ್ಕಂಥ ಒಂದು ಕೈಗಾರಿಕೆಯಾಗಿ ಪರಿವರ್ತನೆಯಾಗಿದೆ. ಇವತ್ತು ವ್ಯವಸಾಯಕ್ಕೆ ವಿದ್ಯಾವಂತರು ಶುದ್ಧ ಶುಂಠಿಕಾಯಿ, ಯೋಗ್ಯ ಮನುಷ್ಯರಲ್ಲ, ಇವತ್ತು ವ್ಯವಸಾಯವನ್ನು ಪರಿಣತರು ಮಾಡಬೇಕು, ದಕ್ಷತೆಯಿಂದ ವ್ಯವಸಾಯವನ್ನು ಮಾಡಬೇಕು ಎನ್ನುವ ಕಾಲವಾಗಿ ಪರಿವರ್ತನೆಯಾಗಿದೆ. ಹಿಂದೆ ಇದ್ದಂಥ ನಾಣ್ನುಡಿ ಇವತ್ತು ಅನ್ವಯಿಸುವುದಿಲ್ಲ. ಮಾನ್ಯ ಕಕ್ಕಿಲ್ಲಾಯ ಅವರು ಒಂದು ಮಾತನ್ನು ಹೇಳಿದರು. ವ್ಯವಸಾಯದ ಕಾಲೇಜನ್ನು ಓಪನ್ ಮಾಡಿದ್ದಾರೆ. ಬಿ.ಎಸ್.ಸಿ.ಎ.ಜಿ. ಮಾಡಿದವರಿಗೆ ಕೆಲಸ ಕೊಡಬೇಕು, ಕೆಲಸದ ಗ್ಯಾರಂಟಿ ಏನು ಇದೆ, ಅದನ್ನು ಸರ್ಕಾರ ಕೊಡಬೇಕು ಎನ್ನುವ ಮಾತನ್ನು ಅವರು ಹೇಳಿದರು. ನಾನು ಅದನ್ನು ಒಪ್ಪುವುದಕ್ಕೆ ತಯಾರು ಇಲ್ಲ. ವ್ಯವಸಾಯದ ಕಾಲೇಜನ್ನು ಓಪನ್ ಮಾಡಿದರೆ, ವ್ಯವಸಾಯದಲ್ಲಿ ಪರಿಣತರಾಗಿ, ವ್ಯವಸಾಯದ ಉತ್ಪನ್ನವನ್ನು ಹೆಚ್ಚಿಸಬೇಕು ವ್ಯವಸಾಯ ಮಾಡತಕ್ಕ ರೀತಿನೀತಿಗಳನ್ನು ಕಲಿಯತಕ್ಕ ನಿಷ್ಠೆ ಬರಬೇಕು ಎನ್ನುವ ದೃಷ್ಟಿಯಿಂದ ನಾವು ಕಾಲೇಜುಗಳನ್ನು ಸ್ಥಾಪನೆ ಮಾಡಬೇಕೇ ಹೊರತು ಸರ್ಕಾರಿ ಉದ್ಯೋಗಕ್ಕಾಗಿ ಬಿ.ಎಸ್.ಸಿ.,ಎ ಜಿ. ಪದವೀಧರರನ್ನು ಸೃಷ್ಟಿ ಮಾಡತಕ್ಕ ಫ್ಯಾಕ್ಟರಿಯನ್ನು ತಯಾರು ಮಾಡುವುದನ್ನು ನಾನು ಒಪ್ಪುವುದಕ್ಕೆ ತಯಾರು ಇಲ್ಲ. ಆದ್ದರಿಂದ ಮಾನ್ಯ ಕಕ್ಕಿಲ್ಲಾಯ ಅವರ ಮಾತನ್ನು ನಾನು ಒಪ್ಪುವುದಿಲ್ಲ. ಇವತ್ತು ಏನಾಗಿದೆ ಎಂದರೆ, ವ್ಯವಸಾಯದ ಇಲಾಖೆ ಕೆಲಸ ಮಾಡುತ್ತಾ ಇರುವುದನ್ನು ನೋಡುವುದಾದರೆ ವರ್ಷಕ್ಕೊಂದು ಸಾರಿ, ಎರಡು ಸಾರಿ ಕ್ಷೇತ್ರೋತ್ಸವ ಎಂದು ನಡೆಸಬೇಕು; ಫಾರಂನಲ್ಲಿ, ಜಮೀನಿನಲ್ಲಿ ಬೆಳೆದಂಥ ಕಾಳುಗಳನ್ನು ಇಟ್ಟು ಏನೋ ಒಂದು ಸಮಾರಂಭ ಮಾಡಿದರು, ಅಧ್ಯಕ್ಷರು ಯಾರೋ ಬಂದರು, ಮುಖ್ಯ ಅತಿಥಿಗಳು ಬಂದರು, ಆಫೀಸರ್ ಬಂದು ಏನು ಹೇಳಬೇಕೋ ಅದನ್ನು ಹೇಳಿ ಹೊರಟು ಹೋದರು. ಇದಕ್ಕಾಗಿ ಒಂದು ವರ್ಷಕ್ಕೆ ಏನು ಬಡ್ಜೆಟ್ ಹಾಕಿಕೊಂಡಿದ್ದಾರೆ ಎಷ್ಟು ಹಣ ಬೇಕು, ಎಷ್ಟು ಖರ್ಚಾಗುತ್ತದೆ ಎಂಬುದನ್ನು ನೋಡಿಕೊಂಡು ಕೆಲಸ ಮಾಡಬೇಕು. ಎಷ್ಟು ಜನ ರೈತರಿಗೆ ನಾವು ರಾಸಾಯನಿಕ ಗೊಬ್ಬರಗಳನ್ನಾಗಲೀ, ಔಷಧಿಗಳನ್ನಾಗಲಿ ಹೊಡೆಯಬೇಕು, ಗೊಬ್ಬರವನ್ನು ಹಾಕಬೇಕು ಎನ್ನತಕ್ಕಂಥ ಜ್ಞಾನ ಬಂದಿದೆ ಎಂದರೆ ಬಹಳ ಕಡಿಮೆ. ವಿದ್ಯಾವಂತರಾಗಿರತಕ್ಕವರ ಪ್ರಶ್ನೆಯನ್ನು ಬಿಡೋಣ ಇವತ್ತಿನ ಕಾಲಮಾನದಲ್ಲಿ ಒಳ್ಳೆಯ ರೀತಿಯ ವ್ಯವಸಾಯವನ್ನು ಮಾಡತಕ್ಕಂಥ ಪದ್ಧತಿಯನ್ನು ಅನುಸರಿಸಿಕೊಂಡು ಬೆಳೆ ಬೆಳೆಯುತಕ್ಕಂಥಾದ್ದು, ಯಾಂತ್ರಿಕ ಪದ್ಧತಿಗಳನ್ನು ಉಪಯೋಗಿಸಿಕೊಂಡು ಹೆಚ್ಚಿನ ಬೆಳೆ ಬೆಳೆಯುತಕ್ಕಂಥ ರೈತರ ಪ್ರಶ್ನೆಯನ್ನು ಮರೆಯೋಣ; ಹಳ್ಳಿಗಾಡಿನ ಜನ ರಾಸಾಯನಿಕ ಗೊಬ್ಬರ ಹಾಕಿದರೆ ರೋಗ ಬರುತ್ತದೆ, ಮಣ್ಣು ಹಾಳಾಗುತ್ತದೆ, ದೇವರು ಕೊಟ್ಟಂಥ ನೀರನ್ನು ಉಪಯೋಗಿಸಿಕೊಂಡು ಫಸಲನ್ನು ತೆಗೆಯತಕ್ಕಂಥ ರಿವಾಜ್ ನಮ್ಮಲ್ಲಿತ್ತು, ಇದರ ಬಗ್ಗೆ ಸಾಕಷ್ಟು ಪ್ರಚಾರ ಆಗಿಲ್ಲ ಎಂದು ಕಾಣುತ್ತದೆ. ಇಂಥ ಕಾರ್ಯಗಳನ್ನು ವ್ಯವಸಾಯದ ಇಲಾಖೆ ಏನು ಇದೆ ಅದು ಮಾಡಬೇಕು. ಇವತ್ತು ಏನಾಗಿದೆ ಎಂದರೆ, ಇಲಾಖೆಯವರು ಕೊಟ್ಟಿರತಕ್ಕ ಗೊಬ್ಬರವನ್ನು ಊರಿನಲ್ಲಿ ಯಾರೋ ಕೆಲವರು ವ್ಯಾಪಾರಸ್ಥರು ತಮ್ಮ ಮಳಿಗೆಗೆ ಹಾಕಿಕೊಂಡು ಅದು ವ್ಯವಸಾಯಗಾರರಿಗೆ ತಲುಪದೆ ಹೋದರೆ ವ್ಯವಸಾಯ ಇಲಾಖೆ ಎಷ್ಟರಮಟ್ಟಿಗೆ ಕೆಲಸ ಮಾಡುತ್ತದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಎಷ್ಟೋ ಸಾರಿ ನಾವು ಕೇಳಿದಾಗ್ಗೆ ಇಲಾಖೆಗಳಲ್ಲಿ ಗೊಬ್ಬರ ಇರುವುದಿಲ್ಲ. ಆದರೆ ಊರಲ್ಲಿರತಕ್ಕ ವ್ಯಾಪಾರಸ್ಥರಲ್ಲಿ ಸಕಲ ವೆರೈಟಿಯ ಗೊಬ್ಬರಗಳೂ ದೊರೆಯುತ್ತವೆ. ಅವರ ಹತ್ತಿರ ಒಂದಕ್ಕೆ ಎರಡರಷ್ಟು, ಮೂರರಷ್ಟು ಕೊಟ್ಟು ಗೊಬ್ಬರವನ್ನು ತೆಗೆದುಕೊಳ್ಳಬೇಕು ಎಂದರೆ, ಅವರಿಗೆ ಗೊಬ್ಬರ ಎಲ್ಲಿಂದ ಬಂತು? ವಿದೇಶದಿಂದ ಆಮದು ಮಾಡಿಕೊಂಡರೂ ಕೂಡ ನಮ್ಮ ಜನಗಳಿಗೆ ಗೊಬ್ಬರ ಸಿಕ್ಕುವುದಿಲ್ಲ. ವ್ಯಾಪಾರಸ್ಥ ಎಲ್ಲಿಯೋ ಒಂದು 10—15 ಎಕರೆ ಜಮೀನು ಮಾಡಿಕೊಂಡಿರುತ್ತಾನೆ. ಅವನು ತನ್ನ 10—15 ಎಕರೆ ಜಮೀನಿಗೆ ಅಲ್ಪಸ್ವಲ್ಪ ಗೊಬ್ಬರ ಬೇಕಾದರೂ, ನೂರಾರು ಮೂಟೆ ಗೊಬ್ಬರ ಬೇಕು ಎಂದು ಇಲಾಖೆಯವರಿಂದ ತೆಗೆದುಕೊಳ್ಳುತ್ತಾನೆ. ಅವನು ವ್ಯಾಪಾರಸ್ಥನೂ ಹೌದು, ವ್ಯವಸಾಯಗಾರನೂ ಹೌದು. ಗೊಬ್ಬರವನ್ನು ವ್ಯಾಪಾರ ಮಾಡುವುದಕ್ಕೆ ಇದು ಒಂದು ಸೋಗು. ಇಂಥ ಅನೇಕ ಪ್ರಸಂಗಗಳು ನಡೆಯುತ್ತಿವೆ. ಈ ರೀತಿ ಸೋಗು ಹಾಕಿಕೊಂಡಿರತಕ್ಕ ವ್ಯಾಪಾರಸ್ಥರು ಕೆಲವರು ಇದ್ದಾರೆ. ಅವರ ಮುಖ್ಯ ಉದ್ಯಮ ವ್ಯಾಪಾರವಾಗಿರುತ್ತದೆ, ವ್ಯಾಪಾರದಲ್ಲಿ ಹೇರಳವಾದ ಲಾಭವನ್ನು ಗಳಿಸಿರತಕ್ಕ ಹಣ ಏನು ಇದೆ ಅದನ್ನು

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಇನ್‌ಕಂ ಟ್ಯಾಕ್ಸ್‌ನಿಂದ ತಪ್ಪಿಸಿಕೊಳ್ಳುವುದಕ್ಕೋಸ್ಕರ ವ್ಯವಸಾಯ ಮಾಡುತ್ತೇನೆ ಎಂದು ಹೇಳುವವರು ಉಂಟು. ವ್ಯವಸಾಯಗಾರರು ಎಂದು ಹೇಳಿ ವ್ಯವಸಾಯದ ಇಲಾಖೆಯಿಂದ ಹತ್ತು ಪಟ್ಟು, ಒಂದೊಂದು ಸಾರಿ ನೂರು ಪಟ್ಟು ಗೊಬ್ಬರವನ್ನು ತೆಗೆದುಕೊಳ್ಳುತ್ತಾರೆ. ತೆಗೆದುಕೊಂಡ ಗೊಬ್ಬರವನ್ನು ತಮ್ಮ ವ್ಯಾಪಾರದಲ್ಲಿ ಅಳವಡಿಸಿಕೊಳ್ಳುತ್ತಾರೆ. ಇಲಾಖೆಯವರು ಇಂಥವರ ಮೇಲೆ ತಮ್ಮ 'ಕ್ಷ' ಕಿರಣಬೀರಿ, ಎಚ್ಚರಿಕೆ ವಹಿಸಬೇಕಾಗುತ್ತದೆ.

ಇನ್ನೊಂದು ನಿದರ್ಶನ ಹೇಳುತ್ತೇನೆ. ಇದು ನಮ್ಮ ತಾಲ್ಲೋಕಿನಲ್ಲಿ ನಡೆದಿರತಕ್ಕಂಥದ್ದು. ಹುಮ್ನಾಬಾದಲ್ಲಿ ಸೊಸೈಟಿ ಇದೆ. ಕೆಲವು ಸೊಸೈಟಿಗಳಲ್ಲಿ ಅಡಲ್ಟ್ರೇಟೆಡ್ ಗೊಬ್ಬರ ಮಾರುತ್ತಿದ್ದಾರೆಂದು ಅಲ್ಲಿಗೆ ಅಧಿಕಾರಿಗಳನ್ನು ಹಾಕಿದರು ಹೊಸನಕೆರೆ ಕೋ ಆಪರೇಟೀವ್ ಸೊಸೈಟಿಯ ಮೇಲೆ ಅಧಿಕಾರಿಗಳನ್ನು ಹಾಕಿದರು, ಗೊಬ್ಬರ ಎಲ್ಲಿಂದ ಬಂತು, ಯಾರು ಸಪ್ಲೈ ಮಾಡಿದರು, ತಾಲ್ಲೋಕು ಮಾರ್ಕೆಟಿಂಗ್ ಸೊಸೈಟಿ ಪ್ರೆಸಿಡೆಂಟ್ ಗೊಬ್ಬರ ಕೊಟ್ಟಿದ್ದಾರೆ ಎನ್ನುವುದು ಅರ್ಥವಾಗುವುದಿಲ್ಲ. ಅಲ್ಲಿರತಕ್ಕ ಸೊಸೈಟಿ ಅಧ್ಯಕ್ಷರ ಹಾಗೆ ಎಲ್ಲರೂ ವಿಶ್ವವಿದ್ಯಾನಿಲಯಕ್ಕೆ ಹೋಗಿರತಕ್ಕ ವಿದ್ಯಾವಂತರು, ಪರಿಣಿತರೂ ಇರುವುದಿಲ್ಲ. ಗೊಬ್ಬರ ಹೇಗೆ ಇರುತ್ತದೆ; ಇದು ಉಪಯುಕ್ತವಾಗಿರುತ್ತದೆಯೋ ಇಲ್ಲವೇ ಅಡಲ್ಟ್ರೇಟೆಡ್ ಎಂದು ನೋಡತಕ್ಕ ಶಕ್ತಿ ಕೂಡ ಇಲ್ಲದ ಅಧ್ಯಕ್ಷರುಗಳು ಇರುತ್ತಾರೆ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ, ಗೊಬ್ಬರ ಲಾರಿಯೊಳಗೆ ಡಿಪಾರ್ಟ್‌ಮೆಂಟ್‌ನಿಂದ ಬರುತ್ತದೆ, ಗೊಬ್ಬರ ಬಂದಾಗ ಗೊಬ್ಬರ ಒಳ್ಳೆಯದೋ ಅಥವಾ ಕೆಟ್ಟದ್ದೋ ಎಂಬುದನ್ನು ಪರಿಶೀಲನೆ ಮಾಡುವ ಶಕ್ತಿ ಇಲ್ಲದೆ ಇರುವಾಗ, ಅವರು ಸಪ್ಲೈ ಮಾಡಿದ ಗೊಬ್ಬರ ಚೆನ್ನಾಗಿಲ್ಲದಿದ್ದರೆ ಸೊಸೈಟಿ ಮೇಲೆ, ಸೊಸೈಟಿ ಅಧ್ಯಕ್ಷರ ಮೇಲೆ ಅಥವಾ ಸಪ್ಲೈ ಮಾಡಿದವರ ಮೇಲೆ ಚಾರ್ಜ್ ಷೀಟ್ ಮಾಡಿದರೆ ಹೇಗೆ ?

ಶ್ರೀ ಕೋಣಂದೂರು ಲಿಂಗಪ್ಪ,—ಸಪ್ಲೈ ಮಾಡಿದವರು ಅಥವಾ ಸೊಸೈಟಿ ಅಧ್ಯಕ್ಷರು ಶಾಮೀಲಾಗಿ ಉದ್ದೇಶಪೂರ್ವಕವಾಗಿ ಮಾರಾಟ ಮಾಡಿದ್ದಾರೆಯೋ ಎಂಬುದನ್ನು ನೋಡಬೇಕಾಗುತ್ತದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಗೊಬ್ಬರ ಎಲ್ಲಿಂದ ಬಂತು, ಯಾರು ಸಪ್ಲೈ ಮಾಡಿದರು. ಯಾರ ಮುಖಾಂತರ ಬಂತು ಎಂಬುದನ್ನು ಪರಿಶೀಲನೆ ಮಾಡಬೇಕು. ನಾನು ಏತಕ್ಕೆ ಹೀಗೆ ಹೇಳುತ್ತೇನೆಂದರೆ ನಾನು ಸ್ವಂತ ವ್ಯವಸಾಯ ಮಾಡುತ್ತೇನೆ, ಡೆಮೊಕ್ರಾನ್ ಎಂದು ಒಂದು ಔಷಧಿ ಇದೆ. ಬೆಂಕಿ ರೋಗ ಬರುತ್ತದೆ. ಬೆಂಕಿ ರೋಗ ತೆಗೆಯುವುದಕ್ಕೆ ಯಾವ ಔಷದಿ ಪ್ರಿಸ್ಕ್ರೈಬ್ ಮಾಡಿದ್ದಾರೆ ? ಡೆಮೊಕ್ರಾನ್ ಔಷಧಿಯನ್ನು ತಂದು ಹೊಡೆದರೆ ಒಂದಲ್ಲ 10 ಬಾಟ್ಲು ಹೊಡೆದರೂ ಕೂಡ ರೋಗ ಹೋಗುವುದಿಲ್ಲ. ಇದರಲ್ಲಿ ಅಡಲ್ಟ್ರೇಷನ್ ಇದೆಯೋ ಇಲ್ಲವೋ ಎಂದು ನಾವು ಯೋಚನೆ ಮಾಡಬೇಕಾಗುತ್ತದೆ. ಪ್ರತಿಯೊಂದು ಔಷಧಿಯಲ್ಲೂ, ಗೊಬ್ಬರದಲ್ಲೂ ಕೂಡ ಪರಿವರ್ತನೆ ಆಗಬೇಕು. ವ್ಯವಸಾಯಗಾರನಿಗೆ ಇದರಿಂದ ಎಷ್ಟೋ ಲುಕ್ಸಾನು ಆಗುತ್ತದೆ. ಸಾಮಾನ್ಯವಾಗಿ ವ್ಯವಸಾಯಗಾರ ಈ ಗೊಬ್ಬರಗಳನ್ನು ಹಾಕುವುದಿಲ್ಲ. ದನದ ಗೊಬ್ಬರ ಹಾಕುತ್ತಾನೆ. ಔಷಧಿ ಹೊಡೆಯುವುದಿಲ್ಲ. ಯಾವನಾದರೂ ತಾನು ಹೇರಳವಾಗಿ ಬೆಳೆ ಬೆಳೆಯಬೇಕು, ಹೇರಳವಾದ ಉತ್ಪನ್ನ ತೆಗೆಯಬೇಕು ಎನ್ನುವ ಉದ್ದಿಶ್ಯ ಇಟ್ಟುಕೊಂಡಿರುವ ಪ್ರಗತಿಪರ ವ್ಯವಸಾಯಗಾರ ಇದಕ್ಕೆ ಕೈಹಾಕಿದರೆ ಅವನ ಗತಿ ಏನಾಗುತ್ತದೆ ? ಈ ರೀತಿ ಅಡಲ್ಟ್ರೇಟೆಡ್ ಔಷದಿಗಳು ಮತ್ತು ಗೊಬ್ಬರ ಸಿಕ್ಕುವುದರಿಂದ ಅವನು ಕೂಡ ಲುಕ್ಸಾನಿನಲ್ಲಿ ಬೀಳಬೇಕಾಗುತ್ತದೆ. ಇದನ್ನು ಯೋಚನೆ ಮಾಡಬೇಕಾಗುತ್ತದೆ. ಇನ್ನೊಂದು ಗಮನದಲ್ಲಿ ಇಟ್ಟುಕೊಳ್ಳಬೇಕು. ಇವೊತ್ತು ಅವರವರುಗಳ ಒಂದು ಎಕರೆ ಗದ್ದೆಯಲ್ಲಿ ಬತ್ತ ಬೆಳೆಯಬೇಕಾದರೆ ಸರಿಯಾದ ರೀತಿಯಲ್ಲಿ ಗೊಬ್ಬರ, ಔಷಧಿ ಹಾಕಿ ಸರಿಯಾದ ರೀತಿಯಲ್ಲಿ ವ್ಯವಸಾಯ ಮಾಡಬೇಕು ಎಂದರೆ ಒಂದು ಸಾವಿರ ರೂಪಾಯಿ ಬೇಕು. ಇಷ್ಟೆಲ್ಲಾ ಖರ್ಚುಮಾಡಿ ಬೆಳೆಯುತ್ತಾನೆ. ಆದರೆ ಒಂದು ವರ್ಷದಲ್ಲಿ ಇದ್ದ ರೇಟು ಇನ್ನೊಂದು ವರ್ಷದಲ್ಲಿ ಇರುವುದಿಲ್ಲ. ಹಾಗೆ ಆದರೆ ವ್ಯವಸಾಯಗಾರನ ಗತಿ ಏನು ? ಈ ರೀತಿ ಪ್ರಗತಿಪರ ವ್ಯವಸಾಯಗಾರ ಪ್ರಗತಿ ಪರ ವ್ಯವಸಾಯವನ್ನು ಅಳವಡಿಸಿಕೊಂಡು ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಕ್ವಿಂಟಾಲಿಗೆ 50 ರೂಪಾಯಿ ಸಿಕ್ಕದೆ ಹೋದರೆ ಅವನ ಗತಿ ಏನು ? ಅದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಪ್ರತಿ ವರ್ಷ ಧಾರಣೆವಾಸಿಗಳು ಒಂದೇ ಸಮ ಇರುವುದಿಲ್ಲ. 50 ರೂಪಾಯಿ ಒಂದು ವರ್ಷ, 100 ರೂಪಾಯಿ ಇನ್ನೊಂದು ವರ್ಷ, ಮತ್ತೊಂದು ವರ್ಷ 30 ರೂಪಾಯಿ ಇದ್ದರೆ ಯಾವ ರೈತ ಸರಿಯಾದ ರೀತಿಯಲ್ಲಿ ವ್ಯವಸಾಯ ಮಾಡಿಕೊಂಡು ಹೋಗುವುದಕೆ

ಸಾಧ್ಯ ? ಇನ್ನು ಅರಣ್ಯ ಇಲಾಖೆ ಬಗ್ಗೆ ಎರಡು ಮಾತು ಹೇಳಿ ಮುಗಿಸುತ್ತೇನೆ. ನನ್ನ ತಾಲ್ಲೋಕು ಕೂಡ ಗೊಂಡಾರಣ್ಯ ಇರತಕ್ಕ ಪ್ರದೇಶ. ಒಬ್ಬೊಬ್ಬರೇ ಹೋಗಬೇಕಾದರೆ ಭಯ ವಾಗುವ ಜಾಗಗಳಲ್ಲಿ ಹುಲಿ ಕರಡಿ ಇರುವುದು ನೋಡಿರುವುದನ್ನು ಇವೊತ್ತು ಏನಾದರೂ ಜ್ಞಾಪಕ ಮಾಡಿಕೊಂಡರೆ ಭಯವಾಗುತ್ತದೆ. ನಾನು ಹುಟ್ಟಿದ್ದು ಅಂಥ ಪ್ರದೇಶದಲ್ಲಿ ಮೇದರವಳ್ಳಿಯಿಂದ ಶಿವಮೊಗ್ಗಾಕ್ಕೆ ಬರಬೇಕಾದರೆ ಆಗುಂಬೆ ಕಾಡಿನ ದೃಷ್ಯ ನೋಡಿದರೆ ಗೊತ್ತಾಗುತ್ತದೆ. ತಿರುಪತಿ ತಿಮ್ಮಪ್ಪನಿಗೆ ತಲೆಕೊಡುವ ಪದ್ಧತಿ ಇದೆ, ಜಾತ್ರೆಗೆ ಹೋದರೆ ತಿಮ್ಮಪ್ಪನಿಗೆ ಮುಡುಪು ಕೊಡುವ ರೀತಿ ಅರಣ್ಯ ಪ್ರದೇಶ ಅಲ್ಲಲ್ಲೇ ನಾಶವಾಗಿರುತ್ತದೆ. ಶೋಚನೀಯವಾದ ವಿಚಾರ ಎಂದರೆ ಹಿಂದೆ ಯಾರು ಅರಣ್ಯ ಬೆಳೆಸಲಿಕ್ಕೆ ಇರಲಿಲ್ಲ. ಅದು ದೈವ ಸೃಷ್ಟಿಯಲ್ಲಿ ಬೆಳೆದುಕೊಂಡು ಬರುತ್ತಿತ್ತು. ಇಂಥ ಅರಣ್ಯದಲ್ಲಿ ಮರಗಳನ್ನು ತೆಗೆಯಲು ಒಂದು ಎಕರೆಗೆ ಲೈಸೆನ್ಸ್ ಕೊಟ್ಟರೆ ಸಾಕು ಅದು ಎಷ್ಟೋ ಪ್ರದೇಶಕ್ಕೆ ವಿಸ್ತರಿಸಿ ಹೋಗುತ್ತದೆ. ಅರಣ್ಯ ಕಡಿಯುವುದು ಒಂದೇ ಕೆಲಸ ಆಗಿದೆಯೇ ಹೊರತು ಕಡಿದಿದ್ದನ್ನು ಬೆಳೆಸುವ ಪ್ರವೃತ್ತಿ ಅಥವಾ ರಕ್ಷಣೆ ಮಾಡುವ ಪ್ರವೃತ್ತಿ ಈ ಇಲಾಖೆಯೊಳಗೆ ಬಂದಿಲ್ಲ. ಬರೀ ಅರಣ್ಯವನ್ನು ಬೆಳೆಸುತ್ತೇವೆ ಎಂದು ಹೇಳಿದರೆ ಆಗುವುದಿಲ್ಲ, ಕಂಟ್ರಾಕ್ಟರ್‌ಸ್‌ಗಳಿಗೆ ಕೊಡು ವುದನ್ನು ನಿಲ್ಲಿಸಿ ಅದಷ್ಟು ಅಫೊರ್‌ಸ್ಟೇಷನ್ ಎಂದು ಏನು ಹೇಳುತ್ತೇವೆ ಅದನ್ನು ಜಾಸ್ತಿ ಮಾಡ ಬೇಕು. ವ್ಯವಸಾಯಕ್ಕೆ ಯೋಗ್ಯವಾದ ಜಮೀನನ್ನು ರೈತರಿಗೆ ಕೊಡುವ ಪದ್ಧತಿ ಹಿಂದೆ ಏನು ಇತ್ತು ಅದನ್ನು ರಿವೈವ್ ಮಾಡಬೇಕು ಎಂದು ಹೇಳುತ್ತೇನೆ. ಕೊನೆಯದಾಗಿ ರೈತರು ಮಲೆ ನಾಡಿನಲ್ಲಿ ನಾಟಿಗೆ ದುಡ್ಡುಕೊಟ್ಟು ತೆಗೆದುಕೊಳ್ಳತಕ್ಕ ಪದ್ಧತಿ ಇರಲಿಲ್ಲ. ಇವೊತ್ತು ಏನಾಗಿದೆ ಎಂದರೆ ಪ್ರತಿಯೊಂದಕ್ಕೂ ಪರ್ಮಿಟ್‌ಬೇಕು. ನಿಮ್ಮ ಸರ್ಕಾರ ಬಂತು ನಿಮ್ಮಗೆ ಓಟು ಕೊಟ್ಟು ಹೀಗೆ ಆಯಿತು ಎಂದು ನೇರವಾಗಿ ಜನ ಹೇಳುತ್ತಾರೆ. ಇದನ್ನು ಕೇಳಿ ಕೇಳಿ ಸಾಕಾಗಿ ಹೋಗಿದೆ. ಪ್ರತಿಯೊಂದಕ್ಕೂ ಪರ್ಮಿಷನ್‌ಬೇಕು. ಈ ಪದ್ಧತಿ ಮಲೆನಾಡು ರೈತರು ತಲೆತಲಾಂತರದಿಂದ ಕಂಡರಿ ಯರು ಮೊದಲು ಯಾವ ಸೌಲತ್ತು ಇತ್ತೊ ಅದನ್ನು ಪುನಃ ಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇವೆ.

† ಶ್ರೀ ಎಸ್.ವೈ. ಪಾಟೀಲ್ (ಸಿಂದ್ಗಿ).—ಮಾನ್ಯ ಸಭಾಧ್ಯಕ್ಷಣಿಯವರೇ, ಸಾಧಾರಣವಾಗಿ ಒಕ್ಕಲುತನ ಖಾತೆ ಡಿಮ್ಯಾಂಡ್ ಏನು ಇದೆ ಇದು ಕನ್ನಡನಾಡಿನ ಮೂರು ಕೋಟಿ ಜನರಲ್ಲಿ 80 ಪರ್ಸೆಂಟ್ ಜನರಿಗೆ ಸಂಬಂಧಪಟ್ಟ ವಿಷಯವಾಗಿದೆ. ಮುಖ್ಯವಾಗಿ ಅಹಾರ ಒದಗಿಸತಕ್ಕ ಈ ಉದ್ಯೋಗದ ಮೇಲೆ 100ಕ್ಕೆ 80 ಜನ ಇದ್ದರೂ ಸಹಿತ ಇದು 100ಕ್ಕೆ 100 ಜನರಿಗೆ ಅಹಾರ ಒದ ಗಿಸುವ ಪ್ರಶ್ನೆ. ಆದ್ದರಿಂದ ಇದನ್ನು ಬೇರಲೇಕಾದರೆ ಒಕ್ಕಲುತನ ಖಾತೆ ಮುಖಾಂತರವೇ ಹೊರತು ಬೇರೆ ಖಾತೆ ಮುಖಾಂತರವಲ್ಲ. ಈ ಡಿಮ್ಯಾಂಡಿನಲ್ಲಿ 14 ಕೋಟಿ ರೂಪಾಯಿಗಳ ಡಿಮ್ಯಾಂಡ್ ಇದೆ. ಇಂಥ ಸಣ್ಣ ಡಿಮ್ಯಾಂಡ್ ನೋಡಿ ಅತ್ಯಂತ ದುಃಖವಾಗುತ್ತದೆ. ಎಜುಕೇಷನ್ ಡಿಪಾರ್ಟ್‌ಮೆಂಟ್ ಡಿಮ್ಯಾಂಡ್ 66ಕೋಟಿ ಆಗಿವೆ ಅಂದರೆ ಅದನ್ನು ಕಡಿಮೆಮಾಡಬೇಕು ಎಂದು ಅಲ್ಲ. ಯಾವ ಮನುಷ್ಯನಿಗೆ ಆಗಲಿ ಆಹಾರ ಇಲ್ಲದಿದ್ದರ, ನೀರು ಸಿಗದಿದ್ದರೆ ಅವನಿಗೆ ಶಿಕ್ಷಣವಾಗಲೀ ಉಳಿದ ಯಾವುದೇ ಆಗಲಿ ಎಷ್ಟು ಇದ್ದರೂ ಅದು ಉಪಯೋಗವಾಗುವುದಿಲ್ಲ. ಆ ದೃಷ್ಟಿಯಿಂದ ಇದು ಏನೇನು ಸಾಲದು ಎಂದು ಹೇಳುತ್ತಿದ್ದೇನೆ. ಕರ್ನಾಟಕ ನಾಡಿನ ಬಿಜಾಪುರದ ಉತ್ತರ ಭಾಗ, ಕೋಲಾರ, ತುಮಕೂರು, ಚಿತ್ರದುರ್ಗ ಮತ್ತು ಬಳ್ಳಾರಿ ಇವು ಮಹತ್ತರವಾದ ಕಷ್ಟಕ್ಕೆ ಈಡಾಗತಕ್ಕ ಭಾಗಗಳು. ಈ ಬಗ್ಗೆ ನಾನು ಈಗ ಮಾತನಾಡುವುದಿಲ್ಲ. ಮುಖ್ಯವಾಗಿ ಒಕ್ಕಲು ತನ ಖಾತೆಯಲ್ಲಿ ಮಾಡತಕ್ಕ ಕೆಲಸ ಯಾವುದು ಎಂದರೆ ಕರಕಿ, ಕಣಿಗಲ್ ಭೂಮಿ ಸ್ವಚ್ಛ ಮಾಡಬೇಕು, ಅದು ಮಾಡದೆ ಬಂಡಿಂಗ್, ಸಾಯಿಲ್ ಕನ್ಸರ್‌ವೇಷನ್ ಕೆಲಸಮಾಡಿದರೆ ಪ್ರಯೋಜನವಿಲ್ಲ. ಕೃಷ್ಣ ಪ್ರಾಜೆಕ್ಟ್ 200 ಕೋಟಿ ರೂಪಾಯಿ ವೆಚ್ಚದಲ್ಲಿ ಆಗತಕ್ಕದ್ದು ಏನಿದೆ ಅದನ್ನು ನ್ಯಾಷನಲ್ ಪ್ರಾಜೆಕ್ಟ್ ಆಗಿ ತೆಗೆದುಕೊಳ್ಳುವುದಿಲ್ಲ ಎಂದು ಡಿ. ಪಿ. ದಾರ್ ಅವರು ಮೊನ್ನೆ ಸ್ಟೇಟ್‌ಮೆಂಟ್ ಕೊಟ್ಟರು. ಅದನ್ನು ಕೇಳಿ ನಿರಾಶೆಯಾಗಿದೆ, ಅದರ ನಲುವಾಗಿ ಈವೊತ್ತು ರಾಜ್ಯಸರ್ಕಾರಕ್ಕೆ ಮೊದಲನೆಯದಾಗಿ ನಾನು ಪ್ರಾರ್ಥನೆ ಮಾಡುತ್ತೇನೆ ತಮಗೆ ಶಕ್ತಿ ಏನಾದರೂ ಇದ್ದರೆ ಉಪಯೋಗ ಮಾಡಿ. ತಾವು ಪ್ರೀತಿಯಿಂದ ಬೇಕಾದರೂ ಹೇಳಿ, ಹಟವಾದ್ರೂ ಮಾಡಿ. ಅನ್ನ ಬೆಳೆಯತಕ್ಕ ಒಕ್ಕಲುತನ ಮಾಡತಕ್ಕ ರೈತ ಸಾಯುತ್ತಾನೆ ಎಂದು ಹೇಳಿ ಇದನ್ನು ನ್ಯಾಷನಲ್ ಪ್ರಾಜೆಕ್ಟ್ ಆಗಿ ತೆಗೆದುಕೊಳ್ಳಲು ಅವರಿಂದ ಒಪ್ಪಿಗೆ ತೆಗೆದುಕೊಳ್ಳಿರಿ.

ಎರಡನೇಧಾಗಿ ಕರಕಿ, ಕಣಿಗಲ್ ತೆಗೆಯುವ ನಲುವಾಗಿ ಪರದೇಶದವರ ಹತ್ತಿರ ಏನೂ ಅಪೇಕ್ಷೆ ಮಾಡಬೇಡಿ. ಇದರಲ್ಲಿ ಸರ್ಕಾರದ ಕರ್ತವ್ಯ ಏನು ಇವೆ ಎಂದು ಒಂದೆರಡು ಮಾತುಗಳನ್ನು

(ಶ್ರೀ ಎಸ್. ವೈ. ಪಾಟೀಲ್)

ಹೇಳುತ್ತೇನೆ. ರೈತರನ್ನು ಶೋಷಣೆ ಮಾಡಬೇಡಿ. ಅವನು ಅಸ್ಥಾನಿಯಾಗಿದ್ದಾನೆ. ರೈತರ ಹತ್ತಿರ ಸಂಘಟನೆ ಇಲ್ಲ. ಈವೊತ್ತಿನ ದಿವಸ ಕೂಲಿಗಾರರು ಏನು ಚಳುವಳಿ ಮಾಡುತ್ತಿದ್ದಾರೆ ಎನ್ನುವುದನ್ನು ನಾವು ನೋಡುತ್ತಿದ್ದೇವೆ. ವಿಧಾನಸೌಧದ ಮುಂದೆ ಪ್ರತಿನಿತ್ಯ ಚಳುವಳಿ ಆಗುತ್ತಾ ಇರುವುದನ್ನು ನಾವು ನೋಡುತ್ತಾ ಇದ್ದೇವೆ. ಅನೇಕರು ಅಂಧೋಳನ ಮಾಡುತ್ತಿದ್ದಾರೆ. ಆದರೆ ರೈತನ ವತಿಯಿಂದ ಅಂಥಾ ಅಂಧೋಳನ ನಡೆಯುತ್ತಾ ಇಲ್ಲ. ರೈತರು ಸಂಘಟನೆ ಆಗಿ ಅಂಧೋಳನ ಮಾಡುವುದಾದರೆ ಅದನ್ನು ತಡೆಯುವುದಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲ. ಸರ್ಕಾರವನ್ನು ಎಬ್ಬಿಸಬೇಕಾದರೆ ಅಂಧೋಳನ ಮಾಡುವುದು ಒಂದು ಪದ್ಧತಿ. ಆದುದರಿಂದ ಇಂತಹ ಪ್ರಸಂಗ ಬರುವಂತೆ ಸರ್ಕಾರದವರು ಅವಕಾಶ ಮಾಡಿಕೊಡಬಾರದು ಎಂದು ನಾನು ನಮ್ರತೆಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಕರಕಿ ಸಲುವಾಗಿ ಟ್ರಾಕ್ಟರನ್ನು ಉಪಯೋಗ ಮಾಡಿರಿ. ಆ ಭೂಮಿ ಲೆವಲ್ ಇಲ್ಲವೆ ಇದ್ದರೆ ಏನೂ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಇರ್ರಿಗೇಷನ್‌ಗೂ ಸಹಿತ ಉಪಯೋಗವಾಗುವುದಿಲ್ಲ. ಆದುದರಿಂದ ಅದನ್ನು ಲೆವಲಿಂಗ್ ಮಾಡುವುದಕ್ಕೆ ಸರ್ಕಾರದವರು ಟ್ರಾಕ್ಟರ್ ಮತ್ತು ಬುಲ್ ಡೋಜರುಗಳನ್ನು ತರಿಸಿ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಬಂಡಿಂಗ್ ಕೆಲಸ ಮಾಡಬೇಕು. ಬಿಜಾಪುರ ಜಿಲ್ಲೆಯಲ್ಲಿ ಅನಿವಾರ್ಯವಾಗಿ ಅಧಿಕಾರಿಗಳನ್ನು ಇಟ್ಟುಕೊಂಡಿದ್ದೀರಿ. ಆ ಬಗ್ಗೆ ಒಂದು ಪ್ರೋಗ್ರಾಂ ಹಾಕಿಕೊಳ್ಳಬೇಕು. ಸಾಯಿಲ್ ಕನ್‌ಸರ್ವೇಷನ್ ಮತ್ತು ಬಂಡಿಂಗ್ ವರ್ಕ್‌ನ್ನು ಡಿಪಾರ್ಟ್‌ಮೆಂಟ್ ಮುಖಾಂತರ ತೆಗೆದುಕೊಳ್ಳಬೇಕು. ಅಲ್ಲಿ ಬಹಳ ಕೂಲಿಗಾರರು ಇದ್ದಾರೆ. ಆ ಕರ್ಮಕೋಟಿ ಜನರಿಗೆ ತಮ್ಮ ಶಕ್ತಿ ಮೀರಿ ಕೆಲಸ ಮಾಡಬೇಕು. ಆದುದರಿಂದ ಅಲ್ಲಿ ಒಂದು ಪರ್ಮನೆಂಟ್ ವರ್ಕ್‌ನ್ನು ತೆಗೆದುಕೊಳ್ಳುವ ಸಲುವಾಗಿ ಶಾಸಕರು ಮೊದಲುಗೊಂಡು ಪ್ರಯತ್ನ ಮಾಡಬೇಕು. ಬಿಜಾಪುರ ಮಟ್ಟಿಗೆ ಹೇಳಬೇಕಾದರೆ 3 ಪ್ರಶ್ನೆಗಳು ಇವೆ. ಈಗ ನನಗೂ ರೋಗ ಇದೆ, ಅದು ತಲೇನೋವಾಗಿರಬಹುದು ಅಥವಾ ಹೊಟ್ಟೇನೋವಾಗಿರಬಹುದು. ಆದರೆ ಬಿಜಾಪುರ ಜಿಲ್ಲೆಯಲ್ಲಿ ಮಹಾರೋಗ ಯಾವುದು ಎಂದರೆ ಅನ್ನದ ಅಭಾವ ಇದೆ. ಆ ಜನರನ್ನು ನೋಡಲಿಕ್ಕೆ ಶ್ರೀಮಾನ್ ಚನ್ನಬಸಪ್ಪನವರು ಬಂದಿದ್ದರು, ದೇವೇಗೌಡರು ಬಂದಿದ್ದರು, ವಾಟಾಳ್ ನಾಗರಾಜ್‌ರವರು ಬಂದಿದ್ದರು. ಅಲ್ಲಿ ಬಿಜಾಪುರ ಜನರು ನಮಗೆ ಅನ್ನ ಇಲ್ಲ ಎಂದರೆ ದೇಬೇಂಗೇ, ಕರೇಂಗೇ ಅಂತ ಹೇಳಿ ಬೆಂಗಳೂರಿಗೆ ಬಂದು ಸೇರಿದರು. ಬಂಜೆ ಹಡೆಯದೇನೇ ಬಾಳಬೇಕು ಎಂಬಂತೆ ಆಗಿದೆ. ಅದು ನಮಗೆ ಗೊತ್ತಾಗುವುದಿಲ್ಲ. ಇದಕ್ಕೆ ಅರ್ಥ ಕಲ್ಪನೆ ಮಾಡುವುದು ನಮಗೆ ಸಾಧ್ಯವಿಲ್ಲ. ಬಡತನದ ಕಲ್ಪನೆ ಬಡವರಿಗೆ ಗೊತ್ತು. ಕಷ್ಟಪಡುವವರಿಗೆ ಕಷ್ಟ ಗೊತ್ತು. ಈ ಜನರು ಏನು ಕಷ್ಟದಲ್ಲಿದ್ದಾರೋ ಅವರ ವತಿಯಿಂದ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಈ ಒಂದು ಪರಿಸ್ಥಿತಿಯಿಂದಾಗಿ ಕೆಲವು ಜನರು ಸಾಯಬಹುದು. ಕೆಲವು ಜನರು ಸಾಯದೇ ಇರಬಹುದು. ಅದು ಬೇರೆ ವಿಷಯ. ಈ ಬಗ್ಗೆ ಒಂದು ಪರ್ಮನೆಂಟ್ ಪ್ರೋಗ್ರಾಂ ತೆಗೆದುಕೊಳ್ಳಬೇಕು. ಮೊದಲು ಸ್ವಚ್ಛ ಮಾಡಬೇಕು, ಎರಡನೇದು ಲೆವಲಿಂಗ್ ಮಾಡಬೇಕು, 3 ನೇದು ಸಾಯಿಲ್ ಕನ್‌ಸರ್ವೇಷನ್ ಮಾಡಬೇಕು. ಮುಖ್ಯವಾಗಿ ಮಾನ್ಯ ದೇವೇಗೌಡರು ಹೇಳಿದಂತೆ ರೈತನಿಗೆ ವ್ಯವಸಾಯ ಮಾಡಲಿಕ್ಕೆ ಗ್ಯಾರಂಟಿ ಇಲ್ಲ. ಏನು ಬೆಳೆ ಬೆಳೆಯಬೇಕು ಎನ್ನುವ ಬಗ್ಗೆ ವಿಶ್ವಾಸ ಇಲ್ಲ. ಈವೊತ್ತು ತೆ. ಹನುಮಂತಪ್ಪನವರು ಇದ್ದಾರೆ ನಾವೆಲ್ಲಾ ಇದ್ದೇವೆ, ಎಲ್ಲರಿಗೂ ರಾಷ್ಟ್ರೀಯ ಬಾಂಡುಗಳು ಕೊಡಿ. ಅದನ್ನು ಎಲ್ಲಾ ಸರ್ಕಾರಿ ಅಧಿಕಾರಿಗಳಿಗೂ ಕೊಡಿ. ಆ ರೀತಿ ಮಾಡಿ ರೈತನಿಗೆ ಅನ್ನ ಹಾಕಿದರೆ ಲೇಡೀಸ್ ಅಂಡ್ ಜಂಟಲ್‌ಮೆನ್ ರೈಟ್ ಎಂದು ಹೇಳುತ್ತೇನೆ. ನೇಗಿಲು ಹಿಡಿದುಕೊಂಡು ಎಲ್ಲರೂ ಉಳುಮೆ ಮಾಡುತ್ತಾರೆ. ಈವೊತ್ತಿನ ದಿವಸ ಅವರಿಗೆ ಅನ್ನ ಇಲ್ಲದೆ ನಿಮ್ಮ ಹೆಸರು ಹೇಳಿಕೊಂಡು ಸಾಯುತ್ತಿದ್ದಾರೆ. ಅವರು ನಮ್ಮ ಹೆಸರು ಹೇಳಿ ಸಾಯುವುದಿಲ್ಲ. ನೀವು ಛಾಲೇಂಜ್ ಮಾಡಿರುವುದರಿಂದ ನಿಮ್ಮ ಹೆಸರು ಹೇಳಿ ಸಾಯಲಿಕ್ಕೆ ನೋಡುತ್ತಿದ್ದಾರೆ. ಇನ್ನು ಈ ವಿಚಾರ ನಿಮಗೆ ಬಿಟ್ಟಿದ್ದು. ಆದುದರಿಂದ ಈ ಬಗ್ಗೆ ತಾವು ಲಕ್ಷ್ಯ ಕೊಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಮಾನ್ಯ ದೇವೇಗೌಡರು ರೈತರಿಗೆ ಬೀಜ ಕೊಡುವ ವಿಷಯವಾಗಿ ಹೇಳಿದ್ದಾರೆ. ಗ್ರಾಮ ಸೇವಕರು ಯಾರದೋ ಬೋಗಸ್ ಸರ್ಟಿಫಿಕೇಟ್ ತೆಗೆದುಕೊಂಡು ಸುಮಾರು ಬೀಜ ಕೊಟ್ಟರು ಮತ್ತು ಗೊಬ್ಬರವನ್ನೂ ಕೂಡ ಕೊಟ್ಟಿದ್ದಾರೆ. ಈ ರೀತಿ ಒಕ್ಕಲುತನದ ಹೆಸರಿನಲ್ಲಿ ಸೈಡ್ ಬಿಸಿನೆಸ್ ಮಾಡುತ್ತಾರೆ. ಆದುದರಿಂದ ಈ ಬಗ್ಗೆ ರೈತನಿಗೆ ಗ್ಯಾರಂಟಿ ಬೇಕು. ಈವೊತ್ತಿನ ದಿವಸ

ರೈತನ ಶೋಷಣೆ ನಾನಾ ಭಾಗಗಳಲ್ಲಿ ನಡೆಯುತ್ತಿದೆ. ನಾನು ಆಫೀಸರ್ ಆಗಿ ಇದ್ದಿದ್ದರೆ ಏನು ಗದ್ದಲ ಮಾಡುತ್ತಿದ್ದೆನೋ ಗೊತ್ತಿಲ್ಲ. ಗಾಂಧೀಜಿಯವರನ್ನು ಕೊಲೆ ಮಾಡಿದಂಥ ಗೋಡ್ಸೆ ಅಂಥಾ ಅಪ್ರಮಾಣಿಕರಾದ ಜನಗಳೂ ಕೂಡ ನಮ್ಮ ದೇಶದಲ್ಲಿ ಇದ್ದಾರೆ. ಇವರುಗಳಿಗೆ ಶೋಷಣೆ ಮಾಡುವುದೇ ಒಂದು ಉದ್ಯೋಗ. ಆದುದರಿಂದ ಅಧಿಕಾರಿಗಳಿಗೆ ಸುಮ್ಮನೆ ಹೇಳಿದರೆ ಆಗುವುದಿಲ್ಲ, ಇವರನ್ನು ಜಾಗೃತಿ ಮಾಡಬೇಕು.

ಇನ್ನು ಕಾರವಾರದಲ್ಲಿ ಬ್ರಾಹ್ಮಿನ್ ಕಮ್ಯೂನಿಟಿ ಯಾರು ಇದ್ದಾರೋ ಅವರು ಲಂಚವನ್ನು ತೆಗೆದುಕೊಳ್ಳುವುದಿಲ್ಲ. ಆದರೂ ಅವರ ಶೋಷಣೆಯಾಗುತ್ತಿದೆ. ಯಾರು ಲಂಚ ತೆಗೆದುಕೊಳ್ಳುತ್ತಾರೋ ಅವರ ಶೋಷಣೆ ಆಗುವುದಿಲ್ಲ. ಅವರ ಮೇಲೆ ಕಣ್ಣು ಹೋಗಬೇಕು, ಹೋಗುವುದಿಲ್ಲ. ಯಾರು ಲಂಚ ತೆಗೆದುಕೊಳ್ಳುತ್ತಾರೋ ಅವರು ಮಾತ್ರ ಬುದ್ಧಿವಂತರಾಗುತ್ತಾರೆ, ಅಮೇರಿಕಾಕ್ಕೆ ಹೋಗಿದ್ದಾರೆ, ಫಾರಿನ್ ರಿಟರ್ನ್ ಆಗಿದ್ದಾರೆ. ಅದರೆ ಅವರು ಬರುವ ಕಾಲಕ್ಕೆ ಏನೇನೋ ವ್ಯವಸ್ಥೆ ಮಾಡಿಕೊಂಡು ಬಂದಿದ್ದಾರೆ. ಆ ಕಳ್ಳಸುಳ್ಳರಿಂದ ಮಳ್ಳರು (ಮುಗ್ಧರು) ಉದ್ಧಾರ ಆಗದೇ ಇರುವ ಪರಿಸ್ಥಿತಿ ಬಂದಿದೆ. ಈ ರೀತಿ ಅನ್ಯಾಯ ಮಾಡುವುದನ್ನು ಕೊನೆಗಾಣಿಸಿದ ಹೊರತು ರಾಷ್ಟ್ರ ಉದ್ಧಾರವಾಗುವುದಿಲ್ಲ.

ಇನ್ನು ಈವೊತ್ತು ಸ್ಟೇಟ್ ಹೈವೇ, ನ್ಯಾಷನಲ್ ಹೈವೇ ಬಗ್ಗೆ ಮಾತನಾಡುವುದಾದರೆ ಅನ್ನ ಕೊಡುವ ರೈತನಿಗೆ ಪ್ರತಿ ಹೊಲಕ್ಕೆ ರಸ್ತೆ ಸೌಕರ್ಯ ದೊರಕಿಸಬೇಕು ಎಂದು ಹೇಳುತ್ತೇನೆ.

ಇನ್ನು ಬಾವಿಗಳಲ್ಲಿ ಹೂಳು ತೆಗೆಯುವ ಕೆಲಸ ಹಾಗೆಯೇ ನಿಂತು ಹೋಗಿದೆ. ದುಡ್ಡು ಇಲ್ಲ ಎಂದು ಸರ್ಕಾರದವರು ಹೇಳುತ್ತಿದ್ದಾರೆ. ನಾನು ಈ ಬಗ್ಗೆ ನಮ್ರತೆಯಿಂದ ಸೂಚಿಸ ಬಯಸುತ್ತೇನೆ. ಏನೆಂದರೆ ಈವೊತ್ತು ನನ್ನ ಪಗಾರ 200 ರೂಪಾಯಿ ಹಿಡಿದುಕೊಂಡು ಉಳಿದದ್ದು ನ್ಯಾಷನಲ್ ಬಾಂಡ್ ಕೊಡಿರಿ. ಅದೇ ರೀತಿ ಮಂತ್ರಿಗಳಿಗೆ 500 ರೂಪಾಯಿ ಹಿಡಿದುಕೊಂಡು ಉಳಿದದ್ದು ನ್ಯಾಷನಲ್ ಬಾಂಡ್ ಕೊಡಿರಿ. ಹಾಗೆ ಸರ್ಕಾರದ ಅಧಿಕಾರಿಗಳಿಗೂ ಮಾಡಿ. ಪರ ದೇಶದವರ ಹತ್ತಿರ ಭಿಕ್ಷೆ ಬೇಡುವುದಕ್ಕಿಂತ ಇದು ವಾಸಿ. ಈವೊತ್ತು ಆರ್ಡಿನರಿ ಮ್ಯಾನ್‌ಗೆ ಅನ್ನ ಇಲ್ಲ. ಆದುದರಿಂದ ಸಾವಿರಾರು ರೂಪಾಯಿ ತೆಗೆದುಕೊಳ್ಳುವಂಥ ನೌಕರರನ್ನು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಭಾರತೀಯರಾದ ನಾವು ಈ ಬಗ್ಗೆ ಯೋಚನೆ ಮಾಡಬೇಕು. ನಮಗೆ ಹಣ ಇಲ್ಲದೇ ಇದ್ದರೆ 12 ಪರ್ಸೆಂಟ್ ಬಡ್ಡಿಯಾದರೂ ಕೊಟ್ಟು ತೆಗೆದುಕೊಂಡು ರೈತರಿಗೆ ಸಹಾಯ ಮಾಡಬೇಕು. ಇದನ್ನು 4 ಭಾಗ ಮಾಡಬೇಕು. ಯಾರು ಲೋನ್ ತೆಗೆದುಕೊಳ್ಳುವುದಕ್ಕೆ ಶಕ್ಯ ಇದೆ ಅವನು ಇನ್‌ಸ್ಟಾಲ್‌ಮೆಂಟ್ ಮುಖಾಂತರ ಕಟ್ಟುವುದಾದರೆ 10 ಸಾವಿರ ಅಲ್ಲ ಕೋಟಿ ರೂಪಾಯಿ ಬೇಕಾದರೂ ಖರ್ಚು ಮಾಡಿ, ಇದು ಒಂದು, ಎರಡನೇದು ಲಾಸ್ಟ್ ಕ್ಲಾಸ್‌ನಲ್ಲಿರುವವರಿಗೆ ಸಬ್ಸಿಡಿ ಕೊಟ್ಟು ಬಾವಿಗಳನ್ನು ತೆಗೆಸಿ ವ್ಯವಸಾಯ ಮಾಡುವಂತೆ ಮಾಡಬೇಕು. ಮೂರನೇದು ನಮಗೆ ಒಂದು ದೊಡ್ಡ ದುಃಖ ಏನೆಂದರೆ ಮುಖ್ಯವಾಗಿರತಕ್ಕಂಥ ಈ ಅಗ್ರಿಕಲ್ಚರ್ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಇಲ್ಲಿ ಕೋರಂ ಇಲ್ಲ ಎಂದು ಹೇಳಿಸಿಕೊಳ್ಳುವ ಪ್ರಸಂಗ ಏನಿದೆ ಇದು this is o e kind of insult to democracy. ಮಾನ್ಯ ಕೆ. ಎಚ್. ಪಾಟೀಲ್ ರವರ ಖಾತೆಯುಲ್ಲಿ ಈವೊತ್ತಿನ ದಿವಸ ಏನು ಅನ್ಯಾಯ ನಡೆಯುತ್ತಿದೆ ಅದು ತಪ್ಪಬೇಕು. ಹಿಂದೆ ಬ್ರಿಟಿಷರನ್ನು ಬೈದಿದ್ದಾರೆ. ಈಗ ಈ ಸರ್ಕಾರ ಏನು ಮಾಡಿದೆ ಎನ್ನುವ ಬಗ್ಗೆ ನಾನು ಅನೇಕ ಸಾರಿ ಹೇಳಿದ್ದೇನೆ. ಈಗ ಬಿಜಾಪುರದ ಜಿಲ್ಲೆಯಲ್ಲಿ ಅನ್ನದ ಅಭಾವ ಏನು ಇದೆ ಅದನ್ನು ನಿವಾರಣೆ ಮಾಡಲು ಅಲ್ಲಿ ತಾತ್ಪೂರ್ತಿಕವಾಗಿ ಯಾದರೂ ಕೆಲಸವನ್ನು ತೆಗೆದುಕೊಳ್ಳಿ. ಮತ್ತು ಅಪ್ಪರ್ ಕೃಷ್ಣ ಕೆನಾಲ್ ಮತ್ತು ಉಳಿದ ಭಾಗಗಳಲ್ಲಿ ಸಾಯಿಲ್ ಕನ್‌ಸರ್ವೇಷನ್ ಕೆಲಸ ತೆಗೆದುಕೊಳ್ಳಿ. ಇದಕ್ಕೆ 2 ಕೋಟಿ ರೂಪಾಯಿ ವೆಚ್ಚವಾಗುತ್ತದೆ ಎಂದು ಹೇಳಿಕೊಳ್ಳುತ್ತಾ ಹೋದರೆ ಅದು ಸರಿಯಲ್ಲ. ತಾವು ಡೀಸಿಲ್ಟಿಂಗ್ ಆಫ್ ಓಲ್ಡ್ ವೆಲ್ಸ್ ಮಾಡಬೇಕು ಎಂದ ಹೇಳುತ್ತೇನೆ.

ಇನ್ನು ಕೊನೆಯದಾಗಿ ಹೇಳುವುದಾದರೆ ಸಬ್ಸಿಡಿ ಕೊಡುವುದು, ಪಂಪುಸೆಟ್ಟು ಕೊಡುವುದು ಮತ್ತು ಯಾರು ಬಾವಿ ಮಾಡುತ್ತಾರೋ ಅಂಥಾ ಬಡವರಿಗೆ 500 ರೂಪಾಯಿ ಕೊಡುವುದು, ಮಾಡಬೇಕು. ಎರಡನೇದು ಆಹಾರೋತ್ಪಾದನೆ, ಹೆಚ್ಚಾಗಿ ಆಹಾರಪದಾರ್ಥಗಳನ್ನು ಬೆಳೆಯುವಂತೆ ಮಾಡಬೇಕು. ಮೂರನೇದು ಬರ್ತ್ ಕಂಟ್ರೋಲ್ ಕಂಪಲ್ಸರಿ ಮಾಡಬೇಕು ಎಂದು ಹೇಳುತ್ತೇನೆ.

6-00 P. M.

ಕುಟುಂಬ ಯೋಜನೆ ಕಾರ್ಯಕ್ರಮ ಮಾಡುತ್ತಿದ್ದರೂ ಕೂಡ ಜನಸಂಖ್ಯೆ ಬೆಳೆಯುತ್ತಿದೆ. ಜನಸಂಖ್ಯೆ ಹೆಚ್ಚಾದಂತೆ ಅನ್ನ ಹೆಚ್ಚಾಗಬೇಕು. ಅನ್ನ ನಿರ್ಮಾಣವಾಗುವುದರೊಳಗೆ ಜನಸಂಖ್ಯೆ

(ಶ್ರೀ ಎಸ್. ವೈ. ಪಾಟೀಲ್)

ಹೆಚ್ಚಾಗುತ್ತ ಬಂದರೆ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ಯಾವ ಸರ್ಕಾರಕ್ಕೂ ಸಾಧ್ಯವಿಲ್ಲ. ಆಹಾರ ಸಮಸ್ಯೆ ಉಲ್ಬಣವಾಗಿ ಆಂದೋಳನಕ್ಕೆ ಆಸ್ಪದ ಮಾಡಿಕೊಡಬೇಡಿರಿ ಎಂದು ನಾನಾದರೂ ಹೇಳುತ್ತೇನೆ, ದೊಡ್ಡ ದೊಡ್ಡ ಊರುಗಳಲ್ಲಿ ಕಾರ್ಮಿಕರು ಸಂಘಟನೆ ಮಾಡಿಕೊಳ್ಳುತ್ತಾರೆ. ರೈತರು ಆ ರೀತಿ ಮಾಡಲು ಸಾಧ್ಯವಿಲ್ಲ, ಅವರಿಗೆ ಆ ಶಕ್ತಿ ಇಲ್ಲ. ಆದರೂ ರೈತನಿಗೆ ಬಹಳ ಅನ್ಯಾಯ ಮಾಡುತ್ತಿದ್ದಾರೆ. ಪ್ರತಿಯೊಬ್ಬರಿಗೂ ಏನೇನು ಬೇಕು ಎನ್ನುವುದರ ಬಗ್ಗೆ ಬರಗಾಲ ಪೀಡಿತ ಪ್ರದೇಶಗಳಲ್ಲಿ ಸರ್ವೆ ನಡೆಸಿ. ನಮ್ಮ ಜಿಲ್ಲೆಯಲ್ಲಿ ಫಲವತ್ತಾದ ಭೂಮಿ ಇದೆ. ಆ ಪ್ರದೇಶಕ್ಕೆ ಸಂಬಂಧಪಟ್ಟಂತೆ ಒಂದು ಯೋಜನೆ ತಯಾರು ಮಾಡಿ ಹೆಚ್ಚು ಆಹಾರ ಬೆಳೆಯುವುದಕ್ಕೆ ಅನುಕೂಲ ಮಾಡಬೇಕು. ಅನ್ನ ಬೇಡತಕ್ಕ ಪ್ರಸಂಗ ಬರುವುದು ಅಪಮಾನಕರವಾದ ಪ್ರಸಂಗ. ಇದಾಗಬಾರದು.

ಈ ಹೊತ್ತು ಬಿಜಾಪುರ ಜಿಲ್ಲೆಯಲ್ಲಿ ಅನ್ನದ ಅಭಾವವಿದೆ. ಇದರಿಂದ ನಿಮಗೂ ಅಪಮಾನ, ನಮಗೂ ಅಪಮಾನ. ಮಗಳ ಲಗ್ನವಾಗದೆ ಇದ್ದರೆ ತಂದೆಯಾದವನ ಮನಸ್ಸು ಯಾವ ರೀತಿ ಇರುತ್ತದೆ? ನಿಮಗೆ ಓಟು ಕೊಟ್ಟ ಜನರು ಈ ಹೊತ್ತು ಉಪವಾಸ ಇರುವಂಥ ಸ್ಥಿತಿ ಇದೆ. ನಗರದಲ್ಲಿರುವವರು ಮಜಾ ಮಾಡುತ್ತಿದ್ದಾರೆ. ಇಂಥ ಪ್ರಸಂಗ ಬರಬಾರದು. ಕರ್ನಾಟಕ ಸಂಪದಭಿವೃದ್ಧಿಯಿಂದ ಮೆರೆಯತಕ್ಕ ಪುಣ್ಯ ಭೂಮಿ. ಇಲ್ಲಿ ಏನೂ ಕೊರತೆಯಾಗುವುದಿಲ್ಲ. ನಮ್ಮ ಪಾಪದಿಂದ ಕೆಟ್ಟರೆ ಕೆಡುತ್ತದೆ. ಆದ್ದರಿಂದ ನಾವೂ ನೀವೂ ಜಗಳವಾಡುವುದನ್ನು ಬಿಟ್ಟು ಏಕಮುಖವಾಗಿ ಏನು ಮಾಡಬೇಕು ಎನ್ನುವುದನ್ನು ವಿಚಾರ ಮಾಡೋಣ. ಲಗ್ನವಾಗಬೇಕು ಎಂದರೆ ಹೆಣ್ಣು ತಾನೇ ಸಿಕ್ಕುತ್ತದೆ. ಅಸೆಂಬ್ಲಿ ಮೆಂಬರಾಗಿ, ಆ ಜನರ ದುಷ್ಕಾಲ ಪರಿಸ್ಥಿತಿ ಹೋಗಬೇಕು ಎನ್ನುವ ಒಂದೇ ಉದ್ದೇಶದಿಂದ ಇಲ್ಲಿ ಒತ್ತಾಯ ಮಾಡಲು ಬಂದಿದ್ದೇನೆ. ಆರು ತಿಂಗಳಾಯಿತು; ಅಲ್ಲಿರುವ ಪರಿಸ್ಥಿತಿಯನ್ನು ನೋಡಿದರೆ ಬಹಳ ದುಃಖವಾಗುತ್ತದೆ. ದುಷ್ಕಾಲ ಬಿಟ್ಟರೆ ಬೇರೆ ವಿಷಯದ ಮೇಲೆ ನಾನು ಮಾತನಾಡುವುದಿಲ್ಲ. ಹಳೇ ಮಂದಿ ಹೋದರೂ ಚಿಂತೆ ಇಲ್ಲ, ಹುಡುಗರು ಬದುಕಲಿಕ್ಕೆ ಏನಾದರೂ ಅನ್ನದ ವ್ಯವಸ್ಥೆ ಮಾಡಿರಿ, ಭಾಷಣ ಮಾಡುವುದನ್ನು ಬಂದ್ ಮಾಡಿರಿ ಎಂದು ನಮ್ರತೆಯಿಂದ ಕೇಳಿಕೊಳ್ಳುತ್ತೇನೆ. ವ್ಯವಸಾಯ ಇಲಾಖೆಗೆ ಕೊಟ್ಟಿರುವ ಹಣದಲ್ಲಿ 70 ಪರ್ಸೆಂಟ್ ಅಧಿಕಾರಿಗಳ ಪಗಾರದ ಸಲುವಾಗಿ ಹೋಗುತ್ತದೆ. ಇದನ್ನು ನಾವು ಹೇಗೆ ಸಹಿಸಿಕೊಳ್ಳಬೇಕು? ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಬಂಡಿಂಗ್, ಸಾಯಿಲ್ ಕನ್‌ಸರ್ವೇಷನ್, ಕುಡಿಯುವ ನೀರನ್ನು ಒದಗಿಸುವುದು, ಇಂಥ ಕೆಲಸಗಳನ್ನು ಮಾಡಬೇಕೆಂದು ಹೇಳುತ್ತ, ಬಹಳ ವೇಳೆಯಾಗಿರುವುದರಿಂದ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER.—The House will now rise and meet on Monday at 12-00 NOON.

The House adjourned at Five Minutes past Six of the Clock to meet again at Twelve of the Clock on Monday the 23rd April 1973.